KARBIL02366

ARIVU ASMITHE ತ್ರೈಮಾಸಿಕ ಪತ್ರಿಕೆ

# ಅರಿವು ಅಸ್ಮಿತೆ

ಸಂಪಾದಕರು: ಡಾ.ಕೆ.ಎ.ಓಬಳೇಶ್

ವಿಶೇಷ ಸಂಚಿಕೆ

## 10ನೇ ಅಖಿಲ ಭಾರತ ದಲಿತ ಸಾಹಿತ್ಯ ಸಮ್ಮೇಳನ

ವಿಜಯಪುರ





# ಬೋಧಿ ಬೆಳಗು



ಡಾ.ಅರ್ಜುನ್ ಗೊಳಸಂಗಿ
ರಾಜ್ಯಾಧ್ಯಕ್ಷರು
ದಲಿತ ಸಾಹಿತ್ಯ ಪರಿಷತ್ತು,
ರಾಜ್ಯಘಟಕ, ಗದಗ



## ಸಮ್ಮೇಳನದ ಸರ್ವಾಧ್ಯಕ್ಷರಾದ ಪ್ರೊ.ಎಚ್.ಟಿ.ಪೋತೆಯವರ ಸಾಹಿತ್ಯಾವಲೋಕನ

ಅರಿವು ಅಸ್ಮಿತೆ

# ಬೋಧಿ ಬೆಳಗು

## ವಿಶೇಷ ಸಂಚಿಕೆ


### ಸಂಪಾದಕರು

ಡಾ.ಕೆ.ಎ.ಓಬಳೇಶ್

### ವಿಶೇಷ ಸಂಚಿಕೆ ಸಂಪಾದಕ ಬಳಗ

ಡಾ.ಎಂ.ಬಿ.ಕಟ್ಟಿ
ಡಾ.ಮಲೇಶಪ್ಪ ಸಿದ್ರಾಂಪೂರ,
ಡಾ.ರಮೇಶ ಪೋತೆ
ಡಾ.ಹಣಮಂತ ಬಿ.ಮೇಲ್ಕೇರಿ,
ಡಾ.ವಸಂತ ನಾಸಿ,
ಡಾ.ಸಂತೋಷಕುಮಾರ ಕಂಬಾರ,
ಡಾ.ಸುಜಾತಾ ಚಲವಾದಿ,
ಡಾ. ಸೂಲಾಬಾಯಿ ಹಿತವಂತ,
ಡಾ.ಇಂದುಬಾಯಿ ಅಂಬಣ್ಣ

### ಪ್ರಕಾಶಕರು

ಏಕಾಂತಗಿರಿ ಟ್ರಸ್ಟ್
#624, ಏಕಾಂತಗಿರಿ ನಿಲಯ
ಮೊದಲ ಮಹಡಿ,
ಲೋಕಿಕೆರೆ-577002
ದಾವಣಗೆರೆ, ಮೊ: 9591420216

### ಮುದ್ರಣ

ಎ.ಎಂ. ಪ್ರಿಂಟರ್ಸ್, ಬೆಂಗಳೂರು

### ಮಾರ್ಗದರ್ಶನ

ಡಾ.ಶ್ರೀಶೈಲ ನಾಗರಾಳ,
ಡಾ.ಸೂರ್ಯಕಾಂತ ಸುಜ್ಯಾತ್,
ಡಾ.ಸಂಗಪ್ಪ ಹೊಸಮನಿ,
ಡಾ.ನಿಂಗಪ್ಪ ಮುದೇನೂರ,
ಡಾ.ಜಯದೇವಿ ಗಾಯಕವಾಡ

### ಪುಟ ವಿನ್ಯಾಸ:

ಸುರೇಶ ಬಿ, ದಾವಣಗೆರೆ
ಮೊ: 9148713856


ಏಕಾಂತಗಿರಿ ಟ್ರಸ್ಟ್ ದಾವಣಗೆರೆ
Eakantagiri Trust, Davanagere



ಅರಿವು ಅಸ್ಮಿತೆ

# ಬೋಧಿ ಬೆಳಗು

## ಒಳ ಪುಟಗಳಲ್ಲಿ...


1. ಸಂಪಾದಕೀಯ – 4
2. ಸಮತೆಯ ಹೂ ಹಣ್ಣಿನ ಫಲ–ಡಾ. ನಿಂಗಪ್ಪ ಮುದೇನೂರು – 5
3. ಪ್ರೊ.ಎಚ್.ಟಿ. ಪೋತೆಯವರ ಸಂದರ್ಶನ – ಡಾ.ಕೆ.ಎ.ಓಬಳೇಶ್ – 8
4. ಪ್ರೊ.ಎಚ್.ಟಿ. ಪೋತೆಯವರ ಸಂಪಾದಿತ ಕೃತಿಗಳ ಆಶಯ – ಡಾ. ಸಂತೋಷ ಕುಮಾರ ಎಸ್. ಕಂಬಾರ – 13
5. ದಲಿತ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷ ಪ್ರೊ.ಎಚ್.ಟಿ. ಪೋತೆ – ಡಾ.ಶ್ರೀಶೈಲ ನಾಗರಾಳ –16
6. ಅಂಬೇಡ್ಕರ್ ಅರಿವಿನ ಜತೆಗಾರ ಪ್ರೊ.ಎಚ್.ಟಿ. ಪೋತೆ – ಡಾ. ಅರುಣ್ ಜೋಳದಕೂಡ್ಲಿಗಿ – 19
7. ದಲಿತ ಅಸ್ಮಿತೆ – ಡಾ.ಹಣಮಂತ ಬಿ. ಮೇಲಕೇರಿ – 21
8. ಮಹಾಬಿಂದು: ದಲಿತ ಸಂಕಟಗಳಿಂದ ಬಿಡುಗಡೆಯ –ಹಂಬಲ – ಡಾ.ದಸ್ತಗೀರಸಾಬ್ ದಿನ್ನಿ – 24
9. ಪ್ರೊ.ಎಚ್.ಟಿ. ಪೋತೆಯವರ ಬೌದ್ಧ ಕಥಾ ಸಂಪುಟ – ಡಾ. ಪ್ರಕಾಶ ಎಚ್. ಸಂಗಮ– 26
10. ಬಿ. ಶ್ಯಾಮಸುಂದರ್ ಕುರಿತಾದ ಪ್ರೊ.ಎಚ್.ಟಿ. ಪೋತೆಯವರ ಬರಹಗಳು –ಡಾ.ಸೌಭಾಗ್ಯ ಶಿವಪುತ್ರಪ್ಪ–30
11. ಸಂದರ್ಶನ – ಕಿರಣ್ ವಲ್ಲೇಪುರೆ – 32
12. ಪ್ರೊ.ಎಚ್.ಟಿ. ಪೋತೆಯವರ ಪ್ರಶಸ್ತಿಗಳು : ಒಂದು ನೋಟ– ಡಾ. ವಸಂತ ನಾಶಿ – 34
13. ಭಾವನಾತ್ಮಕ ಚಿಂತಕ ಪ್ರೊ.ಎಚ್.ಟಿ. ಪೋತೆ – ಡಾ. ಮಲ್ಲೇಶಪ್ಪ ಸಿದ್ರಾಂಪೂರ – 37
14. ಹೈಕು ಎಂಬ ಜಪಾನಿ ಕಾವ್ಯದೆಸೆಳೆನೊಂದಿಗೆ – ಮಹಿಪಾಲರೆಡ್ಡಿ ಮುನ್ನೂರ್ – 40
15. ಬದುಕಿನ ಕೆಂಡಗಳನ್ನು ತಣ್ಣಗೆ ಹಾಯುವ ಕಥನ – ಡಾ.ದಸ್ತಗೀರ ಸಾಬ್ ದಿನ್ನಿ – 43
16. ಪ್ರೊ.ಎಚ್.ಟಿ. ಪೋತೆಯವರ ವೈಚಾರಿಕ ನಿಲುವುಗಳು – ಡಾ.ಎಂ.ಬಿ. ಕಟ್ಟಿ – 44










# ಬೋಧಿ ಬೆಳಗಿನಲ್ಲರಳಿದ ಸಾಹಿತ್ಯ ಸಿರಿ



## ಸಂಪಾದಕೀಯ

**ಭಾ**ರತದ ಮೂಲನಿವಾಸಿ ಜನಾಂಗವು ಸನಾತನಿಗಳ ಸಾಂಸ್ಕೃತಿಕ ದಾಳಿಗೆ ನಲುಗಿ ತನ್ನ ಸ್ವಾಭಿಮಾನದ ಬದುಕನ್ನು ಕಳೆದುಕೊಂಡು ದಾಸ್ಯಕ್ಕೆ ತುತ್ತಾಗಿ, ಸಾವಿರಾರು ವರ್ಷಗಳ ಕಾಲ ಶೋಷಣೆಯನ್ನು ಅನುಭವಿಸುತ್ತ ಬಂದಿವೆ. ಆದರೆ ಈ ದೇಶದ ಮೂಲನಿವಾಸಿ ಸಮುದಾಯಗಳು ದಾಳಿಕೋರರಿಂದ ಹಲವಾರು ಬಗೆಯ ಶೋಷಣೆಯನ್ನು ಅನುಭವಿಸಿದರೂ ತನ್ನ ಸಾಂಸ್ಕೃತಿಕ ಅಸ್ತಿತ್ವವನ್ನು ಕಾಯ್ದುಕೊಂಡಿವೆ. ಕಾಲದಿಂದ ಕಾಲಕ್ಕೆ ಸನಾತನವಾದಿಗಳ ಅಮಾನವೀಯ ಕ್ರೌರ್ಯಗಳನ್ನು ಮೆಟ್ಟಿನಿಂತು ಸಮಾನತೆಯನ್ನು ಸಾಧಿಸಲು ಹಲವಾರು ದಾರ್ಶನಿಕರು ಈ ನೆಲದಲ್ಲಿ ಜನ್ಮತಳೆದಿದ್ದಾರೆ. ಇಂತಹ ದಾರ್ಶನಿಕರಲ್ಲಿ ಭಗವಾನ್ ಬುದ್ಧರಿಂದ ಆರಂಭಗೊಂಡು ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ತನಕ ದೊಡ್ಡ ಪಟ್ಟಿಯೇ ಇದೆ. ಆದರೆ ಸನಾತನವಾದಿಗಳು ಕಾಲ ಕಾಲಕ್ಕೆ ತನ್ನ ಬಣ್ಣ, ಗುಣ, ಸ್ವರೂಪಗಳನ್ನು ಬದಲಾಯಿಸಿಕೊಂಡು ಬಂದ ಕಾರಣ ಈ ನೆಲದಲ್ಲಿ ಅಸಮಾನತೆ ಎಂಬುದು ಶಾಶ್ವತವಾಗಿ ನೆಲೆಯೂರಿದೆ. ಬಾಬಾಸಾಹೇಬರ ಛಲ ಬಿಡದ ಹೋರಾಟದ ಫಲವಾಗಿ ಸರ್ವರನ್ನು ಸಮಾನವಾಗಿ ಕಾಣುವ ಸಂವಿಧಾನ ರೂಪಿತವಾಯಿತು. ಇದು ದಲಿತರ ಬಾಳಿಗೆ ಆಶಾ ಕಿರಣವಾಯಿತು. ಬಾಬಾಸಾಹೇಬರು ಕಲ್ಪಿಸಿಕೊಟ್ಟ ಸಂವಿಧಾನದ ಫಲವಾಗಿ ಸಮಾಜದ ಕಟ್ಟಕಡೆಯ ವರ್ಗವು ಕೂಡ ಶಿಕ್ಷಣ ಪಡೆದು, ಮೀಸಲಾತಿಯ ಕಾರಣದಿಂದ ಹಲವಾರು ಉನ್ನತ ಸ್ಥಾನಮಾನಗಳನ್ನು ಪಡೆದುಕೊಂಡಿವೆ. ಈ ಮೂಲಕ ತಮ್ಮ ಸಮುದಾಯಗಳ ಮೇಲೆ ನಡೆಯುತ್ತಿರುವ ಸನಾತನವಾದಿಗಳ ತಂತ್ರಗಳನ್ನು ಜಾಗೃತಿ ನೆಲೆಯಲ್ಲಿ ಬಯಲು ಮಾಡುತ್ತಿದ್ದಾರೆ. ಇಂತಹ ಹೋರಾಟದ ಭಾಗವಾಗಿ ಕರ್ನಾಟಕದಲ್ಲಿ ಸುಮಾರು 70-80ರ ದಶಕದಲ್ಲಿ ದಲಿತ-ಬಂಡಾಯ ಸಾಹಿತ್ಯ ಜನ್ಮತಳೆಯಿತು.



ಸಾವಿರಾರು ವರ್ಷಗಳಿಂದ ಶಿಕ್ಷಣ ಮತ್ತು ಸಮಾನತೆಯ ಅವಕಾಶಗಳಿಂದ ವಂಚಿತವಾದ ದಲಿತ ಸಮುದಾಯಗಳು ಶಿಕ್ಷಿತ ಮನಸ್ಸುಗಳಿಂದ ರೂಪಿತವಾದ ದಲಿತ ಸಾಹಿತ್ಯವು ಈಗಾಗಲೇ ಶತಮಾನಗಳ ಕಾಲ ಅಸ್ತಿತ್ವದಲ್ಲಿದ್ದ ಸಾಹಿತ್ಯದ ಸಾಂಪ್ರದಾಯಿ ಸಿದ್ಧ ಮಾದರಿಗಳನ್ನು ಮೀರಿ, ತಮ್ಮ ಒಡಲಾಳದ ಜ್ವಾಲೆಯನ್ನು ನೈಜವಾಗಿ ಸಮಾಜದ ಮುಂದಿಟ್ಟಿತು. ಇಲ್ಲಿ ರಂಜಕತೆ ಮತ್ತು ಕಲಾತ್ಮಕತೆಗಿಂತ ವಾಸ್ತವವೇ ಪ್ರಧಾನವಾಯಿತು. ಹೀಗಾಗಿ ದಲಿತ ಸಾಹಿತ್ಯವು ಸಾಹಿತ್ಯ ಮತ್ತು ಸಾಂಸ್ಕೃತಿಕ ಲೋಕದಲ್ಲಿ ಹೊಸ ಸಂಚಲನವನ್ನು ಮೂಡಿಸಿತು. ದಲಿತ ಸಾಹಿತ್ಯವು ಕೇವಲ ಅಕ್ಷರ ರೂಪಕ್ಕೆ ಮಾತ್ರ ಸೀಮಿತವಾಗದೆ ಸಮಾಜದಲ್ಲಿ ನಡೆಯುವ ಸಾಮಾಜಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ದಬ್ಬಾಳಿಕೆಗಳನ್ನು ಪ್ರತಿಭಟಿಸುವ ನೆಲೆಯಲ್ಲಿ ಹೋರಾಟದ ಸ್ವರೂಪವನ್ನು ಪಡೆದುಕೊಂಡಿತು. ಹೀಗಾಗಿ ದಲಿತ ಸಾಹಿತ್ಯವು ದಮನಿತರ ದನಿಯಾಗಿ ನಗರ ಪ್ರದೇಶದಿಂದ ಆರಂಭಗೊಂಡ ಹಳ್ಳಿಯ ಹಟ್ಟಿ, ಕೇರಿಗಳಿಗೂ ತನ್ನ ವಿಸ್ತಾರತೆ ಸ್ವರೂಪವನ್ನು ಪಡೆದುಕೊಂಡಿದೆ. ಕನ್ನಡ ಸಾರಸ್ವತ ಲೋಕದಲ್ಲಿ ತನ್ನದೇ ಆದ ವಿಶಿಷ್ಟತೆಯನ್ನು ಪಡೆದುಕೊಂಡಿರುವ ದಲಿತ ಸಾಹಿತ್ಯದ ಮಹತ್ವವನ್ನು ಸಮಾಜದ ಕಟ್ಟಕಡೆಯ ವ್ಯಕ್ತಿಗೂ ತಲುಪಿಸುವ ಮೂಲಕ ಜಾಗೃತಗೊಳಿಸುವ ಸಲುವಾಗಿ ಅಖಿಲ ಭಾರತ ದಲಿತ ಸಾಹಿತ್ಯ ಸಮ್ಮೇಳನವನ್ನು ಆಯೋಜಿಸಿಕೊಂಡು ಬರಲಾಗಿದೆ. ಇದು ಈಗ ಬೆಳ್ಳಿ ಹಬ್ಬದ ಸಂಭ್ರಮದಲ್ಲಿದೆ. ಬೆಳ್ಳಿ ಹಬ್ಬದ ಸಂಭ್ರಮದಲ್ಲಿ ನಡೆಯುತ್ತಿರುವ ದಲಿತ ಸಾಹಿತ್ಯ ಸಮ್ಮೇಳನಕ್ಕೆ ಪ್ರೊ. ಎಚ್.ಟಿ. ಪೋತೆ ಅವರನ್ನು ಸಮ್ಮೇಳನದ ಸರ್ವಾಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಗಿದೆ.

ಎಚ್.ಟಿ. ಪೋತೆಯವರು ತಮ್ಮ ಬಾಲ್ಯದ ದಿನಮಾನಗಳಿಂದಲೂ ಅಸ್ಪೃಶ್ಯತೆಯ ಅಪಮಾನಗಳನ್ನು ಕಂಡುಂಡವರು. ತಮ್ಮ ಬಡತನದ ಬದುಕನ್ನು ಲೆಕ್ಕಿಸದೆ ಉನ್ನತ ಶಿಕ್ಷಣವನ್ನು ಪಡೆದು ಅಧ್ಯಾಪನ ವೃತ್ತಿಗೆ ತಮ್ಮನ್ನು ತೆರೆದುಕೊಂಡವರು. ಅಧ್ಯಾಪಕ ವೃತ್ತಿ ಪಡೆದು ಸುಮ್ಮನೆ ತಮ್ಮಷ್ಟಕ್ಕೆ ತಾವು ಕುಳಿತವರಲ್ಲ. ಬಾಬಾಸಾಹೇಬರ ತತ್ವ-ಚಿಂತನೆಗಳನ್ನು ಮೈಗೂಡಿಸಿಕೊಂಡು ದಮನಿತರ ದನಿಯಾಗಿ ನಿಂತು, ದಲಿತ ಸಾಹಿತ್ಯದ ಶ್ರೀಮಂತಿಕೆಗಾಗಿ ದುಡಿದವರು. ಸಾಹಿತ್ಯದ ವಿವಿಧ ಪ್ರಕಾರಗಳಾದ ಕತೆ, ಕಾದಂಬರಿ, ಪ್ರಬಂಧ, ವಿಚಾರ, ವಿಮರ್ಶೆ ಸಂಶೋಧನೆ, ಜಾನಪದ ಮುಂತಾದ ಕ್ಷೇತ್ರಗಳಲ್ಲಿ ವಿಶಿಷ್ಟ ಸಾಧನೆ ಮಾಡಿದವರು. ಇವರ ಎಲ್ಲಾ ಬರಹಗಳು ವೈಚಾರಿಕ ನೆಲೆಯಿಂದ ಕೂಡಿದ್ದು, ದಲಿತ ಸಂವೇದನೆಯಿಂದ ಕೂಡಿದವುಗಳಾಗಿದೆ.

ದಲಿತ ಸಾಹಿತ್ಯಕ್ಕೆ ಹೆಗಲು ಕೊಟ್ಟು ದುಡಿದ ಅಂಬೇಡ್ಕರ್ ವಾದಿ ಲೇಖಕರ ಸಾಲಿನಲ್ಲಿ ಎಚ್.ಟಿ. ಪೋತೆಯವರ ಹೆಸರು ವಿಶಿಷ್ಟವಾಗಿದೆ. ಹೀಗಾಗಿ 10ನೇ ಅಖಿಲ ಭಾರತ ದಲಿತ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಆಯ್ಕೆಯಾಗಿರುವ ಪ್ರೊ. ಎಚ್.ಟಿ. ಪೋತೆಯವರ ಬದುಕು-ಬರಹವನ್ನು ನಾಡಿನ ಜನತೆಗೆ ಪರಿಚಯಿಸುವ ನೆಲೆಯಲ್ಲಿ 'ಬೋಧಿ ಬೆಳಗು' ಎಂಬ ವಿಶೇಷ ಸಂಚಿಕೆಯನ್ನು ಸಹೃದಯರ ಮುಂದೆ ಇಡುತ್ತಿದ್ದೇವೆ. ಈ ವಿಶೇಷ ಸಂಚಿಕೆಯನ್ನು ಹೊರತರಲು ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ ನಾವು ಅಭಾರಿಯಾಗಿದ್ದೇವೆ. ಹಾಗೆಯೇ ಅಖಿಲ ಭಾರತ ದಲಿತ ಸಾಹಿತ್ಯ ಸಮ್ಮೇಳನವನ್ನು ಅಚ್ಚುಕಟ್ಟಾಗಿ ರೂಪಿಸಿರುವ ದಲಿತ ಸಾಹಿತ್ಯ ಪರಿಷತ್ತಿನ ರಾಜ್ಯಾಧ್ಯಕ್ಷರಾದ ಡಾ. ಅರ್ಜುನ್ ಗೊಳಸಂಗಿ ಅವರಿಗೂ ಹಾಗೂ ಎಲ್ಲಾ ಪದಾಧಿಕಾರಿಗಳಿಗೆ ಧನ್ಯವಾದಗಳು.

**ಡಾ. ಕೆ.ಎ. ಓಬಳೇಶ್, ಸಂಪಾದಕರು**

# ಸಮತೆಯ ಹೂ-ಹಣ್ಣಿನ ಫಲ ಪ್ರೊ.ಎಚ್.ಟಿ.ಪೋತೆ



**ನಿಮ್ಮ ಹೃದಯ ಸಂವಾದದಲ್ಲಿ ಬಂದು ಹೋದವರು" ಹೀಗೆಂದು ಇತ್ತೀಚೆಗೆ ನಾನು ಬೆಂಗಳೂರು**

"ನೀವು ಅನ್ನ ಅಕ್ಷರ ಬದುಕು ಕನಸು ಎಲ್ಲವನ್ನೂ ಮಾತಾಡಿದಿರಿ. ಕುಟುಂಬ, ಸ್ನೇಹ, ಊರು, ನಾಡು, ದೇಶದ ಸೌಖ್ಯವನ್ನೂ ಬಯಸಿದಿರಿ. ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್, ಪೆರಿಯಾರ್, ಫುಲೆಯವರನ್ನೂ ದರ್ಶಿಸಿದಿರಿ. ಮಾತೃ ಸಂಸ್ಥೆಯ ಪ್ರೇಮವನ್ನೂ, ಪ್ರೊ.ಮಲ್ಲೇಪುರಂ, ಖರ್ಗೆಯವರ ಜೊತೆಗಿನ ಕುಟುಂಬದ ತಾಯ್ತನದ ಸ್ಮರಣೆಯನ್ನೂ ಹಂಚಿಕೊಂಡಿರಿ. ನಾವೆಲ್ಲಾ ನಿಮ್ಮ ಹೃದಯ ಸಂವಾದದಲ್ಲಿ ಬಂದು ಹೋದವರು" ಹೀಗೆಂದು ಇತ್ತೀಚೆಗೆ ನಾನು ಬೆಂಗಳೂರು ದೂರದರ್ಶನ ಚಂದನದಲ್ಲಿ ಪ್ರೊ.ಎಚ್.ಟಿ.ಪೋತೆಯವರ ಸಂದರ್ಶನ ನೋಡಿ ಸಂತಸಪಟ್ಟು ಪುಟ್ಟ ಸಂದೇಶವ ಅವರಿಗೆ ಕಳಿಸಿದ್ದೆ.

ನಾವು ಗಳಿಸಿದ ಅಮೂಲ್ಯ ಸಂಪತ್ತು ಇದೆಲ್ಲವೂ ಎನ್ನುತ್ತ ತಮ್ಮ ಬಾಲ್ಯ, ಕುಟುಂಬ, ಸ್ನೇಹ, ಓದು, ಬರಹದ ಒಂದೊಂದೇ ಜಾಡನ್ನು ಅರಿವಿನ ಕಥನವಾಗಿಸುತ್ತಿದ್ದರು ಪ್ರೊ. ಎಚ್.ಟಿ. ಪೋತೆಯವರು ಹುಟ್ಟಿದ್ದು ವಿಜಯಪುರ ಜಿಲ್ಲೆಯ ಇಂಡಿ ತಾಲ್ಲೂಕಿನ ಭೀಮೆಯೊಡಲ ಹಂಜಿಗಿಯಲ್ಲಿ. ಭೀಮಾನದಿ ಸಂಸ್ಕೃತಿಯ ಜನಮಾನಸದ ನುಡಿ ಸಂಕಥ- 'ನಗಳನ್ನು ಕತೆಯಾಗಿಸಿಕೊಂಡು ಬೆಳೆದ ಪೋತೆಯವರು ಕಥೆಗಳಲ್ಲಿ ತಮ್ಮದೇ ಹಸಿವು, ಅನ್ನ, ಅಕ್ಷರದ ಪಾಠಗಳನ್ನು ನಿರೂಪಿಸಿಕೊಂಡವರು. ಈ ನಿರೂಪಣೆಗಳನ್ನು ನೋಡಿದರೆ ಬಡವರ ನಗುವಿನ ಶಕ್ತಿಯ ಹಿಂದಿರುವ ನೋವಿನ ಎಳೆಗಳು ಮತ್ತು ಶೋಷಿತ ಮನಸ್ಸುಗಳ ಕಂದರದೊಳಗೆ ಆಳವಾಗಿ ಹರಡಿರುವ ಜಾತಿ ವರ್ಗ ಧರ್ಮ ಅಸಮಾನತೆಯ ಬೇರುಗಳು,ಅವನ್ನು ಕಡಿದುಹಾಕಲು ಸಮುದ್ರದಂತೆ ಮುನ್ನುಗ್ಗುತ್ತಿರುವ ಅಂಬೇಡ್ಕರ್ ಎಂಬ ಪ್ರವಾಹ ಪೋತೆಯವರ ಕತೆ, ಕಾದಂಬರಿ, ವೈಚಾರಿಕ ಬರಹಗಳಲ್ಲೆಲ್ಲ ಕೇಂದ್ರ ಪ್ರಜ್ಞೆಯಾಗಿ ಬಂದಿದೆ. ಬುದ್ಧನ ಕಾರುಣ್ಯದ ಸ್ಥಾಯಿಭಾವ ನದಿಯಂತೆ ಈ ಪ್ರವಾಹವನ್ನು ಕೂಡಿಕೊಂಡಾಗಲ್ಲೆಲ್ಲ ಪೋತೆಯವರ ಬರಹಗಳು ಆಪ್ತವಾಗಿ ನಮ್ಮ ಮನಸ್ಸನ್ನು ಕರಗಿಸಿ ನಿಲ್ಲಿಸಿವೆ. ಇದಕ್ಕೆ ಉದಾಹರಣೆಗಳೆಂದರೆ ಅವರ 'ಬಯಲೆಂಬೊ ಬಯಲು' ಮತ್ತು 'ಮಹಾಬಿಂದು' ಕಾದಂಬರಿಗಳು.


**ಡಾ. ನಿಂಗಪ್ಪ ಮುದೇನೂರು**
ಸಹಾಯಕ ಪ್ರಾಧ್ಯಾಪಕರು
ಡಾ.ಆರ್.ಸಿ.ಹಿರೇಮಠ ಕನ್ನಡ ಅಧ್ಯಯನ ಪೀಠ
ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ- 580003
ಮೊ: 9448717340

ಬುದ್ಧ ಅಂಬೇಡ್ಕರರ ಜೀವತೊರೆ ಮತ್ತೆ ಮತ್ತೆ ಮೈದಾಳುವುದು ಅವರ ವಿಚಾರಪೂರ್ಣ ಬರಹಗಳಲ್ಲಿ. ಸೃಜನಶೀಲತೆ ಮತ್ತು ವೈಚಾರಿಕತೆ ಇವೆರಡರ ಸಂಗಮವೇ ಅವರ ಈ ಎರಡು ಕಾದಂಬರಿಗಳು. ನಾಲ್ಕು ತಲೆಮಾರುಗಳ ಜೀವನ ಕಥನವನ್ನೊತ್ತ ಬಯಲೆಂಬೊ ಬಯಲು ಬಯೋಪಿಕ್ ಕಾದಂಬರಿ, ಸ್ವಾತಂತ್ರ್ಯಪೂರ್ವ ಮತ್ತು ಸ್ವಾತಂತ್ರ್ಯೋತ್ತರ ಭಾರತದ ನಮ್ಮ ಗ್ರಾಮೀಣ ಬದುಕನ್ನು, ದಲಿತರ

**ಬುದ್ಧ ಅಂಬೇಡ್ಕರರ ಜೀವತೊರೆ ಮತ್ತೆ ಮತ್ತೆ ಮೈದಾಳುವುದು ಅವರ ವಿಚಾರಪೂರ್ಣ ಬರಹಗಳಲ್ಲಿ. ಸೃಜನಶೀಲತೆ ಮತ್ತು ವೈಚಾರಿಕತೆ ಇವೆರಡರ ಸಂಗಮವೇ ಅವರ ಈ ಎರಡು ಕಾದಂಬರಿಗಳು. ನಾಲ್ಕು ತಲೆಮಾರುಗಳ ಜೀವನ ಕಥನವನ್ನೊತ್ತ ಬಯಲೆಂಬೊ ಬಯಲು ಬಯೋಪಿಕ್ ಕಾದಂಬರಿ, ಸ್ವಾತಂತ್ರ್ಯಪೂರ್ವ ಮತ್ತು ಸ್ವಾತಂತ್ರ್ಯೋತ್ತರ ಭಾರತದ ನಮ್ಮ ಗ್ರಾಮೀಣ ಬದುಕನ್ನು, ದಲಿತರ ಲೋಕಜ್ಞಾನವನ್ನು, ಅವರ ಪರಂಪರೆ, ವಿವೇಕ, ದುಡಿಮೆ, ಶ್ರಮ ಮತ್ತು ಬಾಳಿನ ಸಂಗತಿಗಳನ್ನು ಮುನ್ನಡೆಸುವ ಛಾತಿಯಲ್ಲಿ ರಚನೆಯಾಗಿದೆ. ಬುದ್ಧ ಮತ್ತು ಅಂಬೇಡ್ಕರರ ವಿವೇಕದ ಪಯಣ ಕಾದಂಬರಿಕಾರನ ನಿಜ ಪ್ರಜ್ಞೆಯಲ್ಲಿ ಮೈದಾಳಿ ಅಕ್ಷರ ಮತ್ತು ಅರಿವಿಗೆ ಹಂಬಲಿಸಿ ನಿಂತು ಯಶಸ್ವಿಯಾದ 'ಹನುಮಂತ'ನ ಜೀವನಗಾಥೆ ಇಲ್ಲಿದೆ.**

ಲೋಕಜ್ಞಾನವನ್ನು, ಅವರ ಪರಂಪರೆ, ವಿವೇಕ, ದುಡಿಮೆ, ಶ್ರಮ ಮತ್ತು ಬಾಳಿನ ಸಂಗತಿಗಳನ್ನು ಮುನ್ನಡೆಸುವ ಭಾತಿಯಲ್ಲಿ ರಚನೆಯಾಗಿದೆ. ಬುದ್ಧ ಮತ್ತು ಅಂಬೇಡ್ಕರರ ವಿವೇಕದ ಪಯಣ ಕಾದಂಬರಿಕಾರನ ನಿಜ ಪ್ರಜ್ಞೆಯಲ್ಲಿ ಮೈದಾಳಿ ಅಕ್ಷರ ಮತ್ತು ಅರಿವಿಗೆ ಹಂಬಲಿಸಿ ನಿಂತು ಯಶಸ್ವಿಯಾದ 'ಹನುಮಂತ'ನ ಜೀವನಗಾಥೆ ಇಲ್ಲಿದೆ. ಈ 'ಹನುಮಂತ' ಬೇರೆ ಯಾರೂ ಅಲ್ಲ, ಅವರೇ ಈ ಪ್ರೊ.ಹನುಮಂತಪ್ಪ ತಿಪ್ಪಣ್ಣ ಪೋತೆ. ಬರಹ ವೈಯಕ್ತಿಕ ನಡಿಗೆಯೆಂದರೂ ಇದು ದಲಿತ ಸಮುದಾಯಗಳ ಒಳಗಿನ ಪ್ರಜ್ಞಾಪಾತಳಿ. ಬರಹದ ಕುಶಲಗಾರಿಕೆ ಮತ್ತು ಜೀವ ಸಾಪೇಕ್ಷದ ಸೋಪಜ್ಞತೆಗಳಿಂದಾಗಿ ಈ ಕಾದಂಬರಿ ಇಂದಿಗೂ ಪ್ರಸ್ತುತ ಮತ್ತು ಹೆಚ್ಚು ಜನಪ್ರಿಯವೂ ಆಗಿ ವಿದ್ವತ್ ಲೋಕದಲ್ಲಿ ಚರ್ಚೆಗೆ ಒಳಪಟ್ಟಿದೆ. 2020 ರ ಕರ್ನಾಟಕ ಸಾಹಿತ್ಯ ಅಕಾಡೆಮಿ ಪುರಸ್ಕಾರದಂತಹ ನಾಡಿನ ಹಲವು ಗೌರವಪೂರ್ಣ ಪ್ರಶಸ್ತಿಗಳನ್ನು ಸಿದ್ಧಿಸಿಕೊಂಡಿದೆ. ಇದೀಗ ಇಂಗ್ಲೀಷ್‌ಗೂ ಅದು ಅನುವಾದಗೊಂಡಿದೆ.

'ಮಹಾಬಿಂದು' ಕಾದಂಬರಿಯೂ ಕೂಡ ಬುದ್ಧ, ಬುದ್ಧನ ಬಿಕ್ಕುಗಳೊಂದಿಗಿನ ಆಂತರ್ಯದ ಸಂವಾದದೊಂದಿಗೆ ಆರಂಭವಾಗಿ ಈ ಲೋಕದ ಪಯಣವನ್ನು ಕೂಡಿಕೊಂಡಿದೆ. ಅಂಬೇಡ್ಕರ ಭಾರತವನ್ನು ಕಟ್ಟಿಕೊಡುವ ವಿಶ್ವಾತ್ಮಕ ಗುಣ ಚಾರಿತ್ರಿಕವಾಗಿ ಈ ಕಾದಂಬರಿಯನ್ನು ಬಾಳಿಸಿದೆ. ಸಮಕಾಲೀನ ಮತ್ತು ವಿವೇಕಪೂರ್ಣ ಅನುಭವಗಳು ಕನಸಿನ ಮೂಲಕ, ವಾಸ್ತವದ ಮೂಲಕ, ಲೋಕದ ಅನುಭವಗಳ ಮೂಲಕ, ದೇಶ ನಾಡಿನ ಎಲ್ಲ ಅರಿವಿನ ಕಥನಗಳ ಮೂಲಕ ಹೊಸ ಅನುಭವವನ್ನು ಸಹೃದಯ ಓದುಗನಿಗೂ, ಸಾಮಾಜಿಕ ಹಿತಚಿಂತಕನಿಗೂ ದಾಟಿಸಿನಿಲ್ಲುವಲ್ಲಿ ಈ ಕೃತಿಯ ಸಾಫಲ್ಯತೆ ಇದೆ. ಜಾಗತಿಕ ಹಿತಚಿಂತಕರ ಚಿಂತನೆಯ ಜೊತೆ ನಮ್ಮ ದೇಸಿ ಹಿತಚಿಂತನೆಯನ್ನು ಅನ್ವಯಗೊಳಿಸುವುದು ಇವರ ಗುಣ. 'ಬೆಳಕಿನ ಬೆಳಕು ಮಹಾಬೆಳಕು' ಎಂಬಂತೆ ಈ ಕಾದಂಬರಿ ಇಪ್ಪತ್ತೊಂದನೆ ಶತಮಾನದ ಕೊರೋನಾ ಅಣುವಿನ ಉದ್ವಿಗ್ನತೆಯ ಕಾಲಮಾನದಲ್ಲಿ ಹುಟ್ಟಿಕೊಂಡದ್ದು. 'ಮಹಾಬಿಂದು'ವನ್ನು ಹಸ್ತಪ್ರತಿಯಲ್ಲಿಯೇ ಓದಿ ಖುಷಿಪಟ್ಟವನು ನಾನು. ಮನುಷ್ಯನ ಜೀವ ಜಗತ್ತಿನ ವಿವೇಕದ ಜೊತೆ ಸದಾ ಸಂವಾದಿಸುವ ಇವರ ಜೀವಪರ ಬರಹಗಳು ಬುದ್ಧ ಭಾರತ ಮತ್ತು ಅಂಬೇಡ್ಕರ್ ಭಾರತಗಳೆರಡನ್ನೂ ಸೃಜಿಸಿ ನಿಂತಿವೆ ಎಂಬುದಕ್ಕೆ ಈ ಕೃತಿ ಸಾಕ್ಷಿಯಾಗಿದೆ. ಇಲ್ಲಿನ ಹಲವು ಮುಖ್ಯ ಸಂಗತಿಗಳು ಅವರ ಎಲ್ಲ ಬರಹ, ಚಿಂತನೆಗಳ ಜೀವಸಾಂದ್ರತೆಯೂ ಹೌದು.

ಬದುಕಿಗೆ ಸೋಲೆಂಬುದು ಇರಬಾರದು ಹಾಗೆ ಮನುಷ್ಯನ ಜೀವಸೆಲೆ ಆರಬಾರದು. ಅದು ಸದಾ ಪ್ರವಹಿಸುತ್ತಲೇ ಕಾಣುವ ಸತ್ಯಗಳ ಕಡೆ ದಾರ್ಶನಿಕರು ಹೆಜ್ಜೆ ಇಟ್ಟಂತೆ ನಾವು ಹೆಜ್ಜೆ ಇರಿಸಬೇಕೆಂಬ ನಿಲುವು ಈ 'ಮಹಾಬಿಂದು'ವನ್ನು ರೂಪಿಸಿದೆ. ಕೊರೋನಾ ಕಾಲದಲ್ಲಿ ಶಿಥಿಲಗೊಂಡ ಮನುಷ್ಯ ಸಂಬಂಧಗಳಲ್ಲಿ ಎಲ್ಲೋ ತಾಯ್ತನದ ಒಂದು ಎಸಳು ದೊರೆತಿದೆ. ಕಾದಂಬರಿಕಾರರು ಇರುವ ಪ್ರದೇಶದಲ್ಲಿ ಬೌದ್ಧವಿಹಾರ ಇರುವುದರಿಂದ, ಇಲ್ಲಿನ ಸಹಜತೆಯ ಸೌಹಾರ್ದತೆಯ ಬದುಕು ಇಡೀ ಕಲ್ಯಾಣ ಕರ್ನಾಟಕವನ್ನು ಕಟ್ಟಿಬೆಳೆಸಿರುವುದರಿಂದ ಇಂತಹ ಬರಹಗಳು ಅಂಥವರಿಂದ



ಮಾತ್ರ ಸಾಧ್ಯ. ಕವಿರಾಮಾರ್ಗಕಾರ, ವಚನಕಾರರು, ದಾಸರು, ತತ್ವಪದಕಾರರು, ಸೂಫಿ, ನಾಥ, ಆರೂಢ, ಕನ್ನಡ ಜನಪದ ಗುರುಪರಂಪರೆಗಳೆಲ್ಲ ಸಂಗಮಿಸಿವೆ ಇಲ್ಲಿ. ಬಿಸಿಲಿನ ನಾಡು ಬೆಳಕಿನ ಹಾಡಾಗಿದೆ. ಭೀಮೆ, ಕೃಷ್ಣೆಯರು ಕೂಡಿಹರಿದು ತುಂಗಭದ್ರೆಯರ ಒಡಲೂ ತಂಪಾಗಿ ಕಡಲಾದ ಜ್ಞಾನ ಇಲ್ಲಿನದು. ಸಾಗರದ ಮುತ್ತಿನ ಮೃದುಕಾಠಿಣ್ಯತೆಯ ಹೊಂದಿ ಸಾಗಿರುವ ನೆನಹುಗಳ ಜೀವಪರ ಹೆಣಿಗೆ ಮತ್ತು ಇದು ತಲೆಮಾರುಗಳ ನೆಲವನ್ನು ಬಾಳಿಸುವ ತಥಾಗತನ ಕಥನ ಇಡೀ ಪೋತೆಯವರ ಒಟ್ಟಂದದ ಜೀವಬದುಕನ್ನು ಸೆರೆಹಿಡಿದಿದೆ. ಅವರ ಮನೆಯ ಹೆಸರು ಅಭಯಪೂರ್ಣವರ್ಷ. ಆ ಪೂರ್ಣತೆಯಲ್ಲಿ ತಾಯಿ ಅಂಬವ್ವನೂ, ತಂದೆ ತಿಪ್ಪಣ್ಣನೂ ಅರಿವಿನ ಬೆಳಕಾಗಿರುವರು. ಲಲಿತಾ ಅವರ ಸಾಂಗತ್ಯದ ಗೂಡೂ ಬರಹಕ್ಕೆ ಜೀವನೀಡಿರುವುದು. ಶ್ರೀಶೈಲದ ಬೆಳಕಿನ ಕುಡಿಹಂಬಲಕ್ಕೆ ಹೃದಯದೊಡಲು ತೆರೆದು ಜನಪದ ಬದುಕನ್ನೂ ಕಲಾತ್ಮಕವಾಗಿ ಕಟ್ಟಿ ಹಾಡಿದ ಅಕ್ಕನಂತಹ ದಿಟ್ಟ ಹೆಂಗುರುಳಿನ ಭಾವ ಪೋತೆಯವರದು. ಅವರ ರಮಾಬಾಯಿ ಅನುವಾದಿತ ಕಾದಂಬರಿ ನಾಟಕವಾಗಿ ಇಂದು 'ರಮಾಸಾಹೇಬಾ' ಪುಟ್ಟ ಸಿನೇಮಾಕ್ಕೆ ವಸ್ತುವಾಗಿ, ಪೋತೆಯವರೇ ಡಾ.ಬಾಬಾಸಾಹೇಬ ಅಂಬೇಡ್ಕರರೂ ಆಗಿ ಅಭಿವ್ಯಕ್ತಿಗೊಳ್ಳುತ್ತಿರುವುದೂ ಒಂದು ಯೋಗವೇ.

ಪೋತೆಯವರು ಸಂದಿಸುವ ತಿಳಿವಿನ ಲೋಕ ವಿಸ್ತಾರದ್ದು. ಅಶೋಕ, ಬಸವಣ್ಣನ, ಕಬೀರದಾಸ, ಕನಕ–ಪುರಂದರ, ಸರ್ವಜ್ಞ, ಶಾಹು–ನಾಲ್ವಡಿ ಮಹಾರಾಜರು, ಭೀಮಾ ಕೋರೆಗಾಂವ್ ಯೋಧರು, ಜ್ಯೋತಿ ಬಾ ಪುಲೆ, ಸಾವಿತ್ರಿಬಾಯಿ ಪುಲೆ, ಅಂಬೇಡ್ಕರ್, ಗಾಂಧಿ, ದಲಿತ– ಬಂಡಾಯದ ಸಿದ್ದಲಿಂಗಯ್ಯ, ಚೆನ್ನಣ್ಣ ವಾಲೀಕಾರ ಇಲ್ಲಿಂದ ಬಾಬಾಸಾಹೇಬರೆಡೆಗೆ ಸಾಗಿ ನಿಂತು ತಮ್ಮ ಪರಿಸರದ 'ದೊಡ್ಡ ಸಾಹೇಬರ'ವರೆಗೂ (ಮಲ್ಲಿಕಾರ್ಜುನ ಖರ್ಗೆಯವರು) ಅವರ ವ್ಯಕ್ತಿತ್ವ ಸಾಧನೆಯ ಹಲವು ಮೂಲಚೂಲಗಳು ಸಾಂಸ್ಕೃತಿಕವಾಗಿ, ಚಾರಿತ್ರಿಕವಾಗಿ ಹರಡಿನಿಂತಿವೆ. ಬಾನಲ್ಲಿ ನಕ್ಷತ್ರಗಳು ಹೊಳಪುಗೊಳ್ಳುವ ಹಾಗೆ ಅವರ ಬರಹಗಳಿವೆ. 'ಬಾಬಾಸಾಹೇಬರೆಡೆಗೆ' ಎನ್ನುವ ಖರ್ಗೆಯವರ ಜೀವನ ಕಥನವನ್ನೂ ಪ್ರೊ.ಪೋತೆಯವರು ಹದವಾಗಿ ನಿರೂಪಿಸಿರುವರು. ವರ್ತಮಾನದ ಬಿಕ್ಕಟ್ಟುಗಳಿಗೂ ವಿವೇಕದ ದನಿಯಾಗುತ್ತಾ ಸಾಗುವ ಕ್ರಮದಲ್ಲಿಯೇ ಪೋತೆಯವರ ಬರಹವಿದೆ. ಇಡೀ ಅವರ ಚಮ್ಮಾವುಗೆ, ಬೆತ್ತಲಾದ



ಚಂದ್ರ,ಕರುಳರಿಯುವ ಹೊತ್ತು, ಗಾಂಧಿ ಪ್ರತಿಮೆ, ಅನೇಕಲವ್ಯಗಳಂತಹ ಕಥಾಲೋಕವನ್ನೂ ಕಾದಂಬರಿಯ ಭಾವವನ್ನೂ ಬುದ್ಧನ ಅದಮ್ಯ ಅಂತಃಕರಣ ತಟ್ಟಿದೆ. ಅಂಬೇಡ್ಕರರ ವೈಚಾರಿಕತೆ ಹೊಸಮೈ ಪಡೆದಿದೆ. ಈ ಮೂಲಕ ವಿಜಯಪುರ ಗುಲ್ಬರ್ಗಾವಷ್ಟೇ ಅಲ್ಲ., ಭಾರತದ ಮಣ್ಣಿನಾಳದಲ್ಲಿರುವ ಬಹುತ್ವದ ಜೀವಸಂಕುಲದ ಸೆಲೆಯನ್ನು ತುಂಬಿಕೊಡುವ ಮಮತೆ ಮತ್ತು ಔದಾರ್ಯತೆ ಖಂಡಿತ ಇವರ ಕೃತಿಗಳನ್ನು ಸರ್ವಕಾಲವೂ ಬಾಳಿಸುತ್ತವೆ. ನೂರರ ಆಸುಪಾಸು ಇರುವ ಅವರ ಕೃತಿಗಳು ಅವರ 58 ರ ವಯೋಮಾನವನ್ನೂ ಅಷ್ಟೇ ಸಮತೆಯ ಹೂ ಹಣ್ಣಿನ ಫಲದಂತೆ ಬಾಳಿಸಿವೆ. ಅಷ್ಟೇ ಬಹುಮಾನ-ಪುರಸ್ಕಾರಗಳೂ ಸಂದಿವೆ. ಎರಡು ಬಾರಿ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪುಸ್ತಕ ಬಹುಮಾನವೇ ಅವರ ಬರಹದ ಸೌಂದರ್ಯಶಕ್ತಿ.

ಕಾವ್ಯ, ಕತೆ, ಕಾದಂಬರಿ, ನಾಟಕ, ವಿಮರ್ಶೆ, ಸಂಶೋಧನೆ, ಪ್ರಬಂಧ, ಪ್ರವಾಸ, ಅನುವಾದ, ಸಂಪಾದನೆ ಹಲವು ಮಾನವಿಕ ಪ್ರಕಾರಗಳಲ್ಲಿ ಪ್ರೊ.ಪೋತೆಯವರು ಎತ್ತಿದ ಕೈ. ಪೂರ್ವ ಪಶ್ಚಿಮದ ಪ್ರವಾಸಗಳು ಅವರ ಬೌದ್ಧಿಕತೆಗೆ ಅಚ್ಚುಮೆಚ್ಚು. ಇಂತಹ ಜೀವ ಮಿಡಿತದ ಬರಹವನ್ನು ಓದುಗನಿಗೆ ನೀಡಿದ,ತಾವೂ ಒಂದು ಕರುಣೆಯ ಪಾತ್ರವಾದ ಪ್ರೊ.ಎಚ್.ಟಿ.ಪೋತೆಯವರಿಗೆ ಇಂದು ಅಖಿಲಭಾರತ ದಲಿತ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷ ಸ್ಥಾನ ಒದಗಿಬಂದಿರುವುದು ನಾಡಿನ ಅಭಿಮಾನ. ಡಾ.ಅರ್ಜುನ ಗೊಳಸಂಗಿ ಅವರ ಬಳಗ ಒಂದು 'ಪ್ರಬುದ್ಧ ಪ್ರಜಾಪ್ರಭುತ್ವ ಭಾರತ' ವೆಂಬ ಚಿಂತನೆಯ ಹೆಣಿಗೆ ಹಾಕಿ ಕುಳಿತಿದೆ ಇಲ್ಲಿ. ಈ ಮುಖ್ಯ ಆಶಯದಂತೆಯೇ ಇದೇ ಜುಲೈ 29, 30ರಂದು ಪೋತೆಯವರ ತಾಯ್ನೆಲ ವಿಜಯಪುರದಲ್ಲಿ ಈ ಎರಡು ದಿನಗಳ ಸಮ್ಮೇಳನ ಜರುಗಲಿದೆ. ನಮ್ಮೆಲ್ಲರ ಎದೆಭಾವದ ಅಭಿನಂದನೆಗಳು ಅವರಿಗೆ ಸಲ್ಲಲಿ. ಕಾಂತಾರವನ್ನು ದಾಟಿನಿಲ್ಲುವ ಶಕ್ತಿ ಆಯುಷ್ಯವೂ ಅವರಿಗೆ ದಕ್ಕಲಿ. 'ತಥಾಗತನ ಅನಂತಾನಂತವಾದ ಮೈತ್ರಿ ಕರುಣೆಯ ಬೆವರೇ ನಮ್ಮ ಬಣ್ಣ' ಎನ್ನುವ ಪ್ರೊ. ಎಚ್.ಟಿ ಪೋತೆಯವರ ಕಾವ್ಯದ ಸದಾಶಯವೂ ನಮ್ಮೆಲ್ಲರ ಬದುಕಾಗಲಿ.



# ದಲಿತಪರ ಚಿಂತಕರಾದ ಪ್ರೊ.ಎಚ್.ಟಿ.ಪೋತೆ ಅವರೊಂದಿಗೆ...



## ಸಂದರ್ಶನ

ಭಾರತದಲ್ಲಿ ಚರಿತ್ರೆಯಲ್ಲಿ ಸಾವಿರಾರು ವರ್ಷಗಳ ಕಾಲ ಸಮಾನತೆಯ ಅವಕಾಶಗಳಿಂದ ವಂಚಿತವಾದ ದಮನಿತ ಸಮುದಾಯಗಳಿಗೆ ದನಿಯಾದವರು ಬಾಬಾಸಾಹೇಬ್ ಅಂಬೇಡ್ಕರ್. ಇವರ ನಿಸ್ವಾರ್ಥ ಹೋರಾಟದ ಫಲವಾಗಿ ಸಮಾಜದ ಕಟ್ಟಕಡೆಯ ವರ್ಗವು ಕೂಡ ಶಿಕ್ಷಣ ಪಡೆದು, ಸಮಾನತೆಯತ್ತ ದಾಪುಗಾಲಿಡುತ್ತಿದೆ. ಇದರ ಫಲವಾಗಿ ದಮನಿತ ಸಮುದಾಯಗಳಲ್ಲಿ ಹಲವಾರು ಪ್ರತಿಭಾನ್ವಿತರು ತಮ್ಮ ವಿಶಿಷ್ಟ ಶಕ್ತಿ, ಸಾಮರ್ಥ್ಯ ಹಾಗೂ ಪ್ರತಿಭೆಯನ್ನು ಅನಾವರಣಗೊಳಿಸುವ ಮೂಲಕ ಬಾಬಾಸಾಹೇಬರ ತತ್ವ-ಸಿದ್ಧಾಂತಗಳನ್ನು ಎತ್ತಿಹಿಡಿಯುವ ಕಾಯಕದಲ್ಲಿ ತಲ್ಲೀನರಾಗಿದ್ದಾರೆ. ಇವರ ತುಡಿತ-ಮಿಡಿತ, ಚಿಂತನ-ಮಂಥನಗಳು ಸಮಸಮಾಜದ ಕನಸ್ಸೊತ್ತು ಸಾಗುತ್ತಿವೆ. ಹೀಗೆ ಬಾಬಾಸಾಹೇಬರ ಸೈದ್ಧಾಂತಿಕ ಆಶಯಗಳ ಮೂಲಕ ದಮನಿತರ ಬದುಕಿನಲ್ಲಿ ಸಮಾನತೆ, ಸ್ವಾಭಿಮಾನ ಹಾಗೂ ಸ್ವಾವಲಂಬನೆಯನ್ನು ಸಾಧಿಸುವ ನೆಲೆಯಲ್ಲಿ ಚಿಂತನೆಗಳನ್ನು ಬಿತ್ತರಿಸುವ ಹಲವಾರು ಚಿಂತಕರು, ಲೇಖಕರು ಹಾಗೂ ಸಾಹಿತಿಗಳು ನಮ್ಮ ಮುಂದಿದ್ದಾರೆ. ಅಂತಹವರಲ್ಲಿ ಪ್ರೊ. ಎಚ್.ಟಿ. ಪೋತೆಯವರು ಒಬ್ಬರಾಗಿದ್ದಾರೆ.




ಕೆ.ಎ.ಓಬಳೇಶ್
ದಾವಣಗೆರೆ
ಮೊ: 9591420216


ಎಚ್.ಟಿ. ಪೋತೆಯವರು ದಿನಾಂಕ 01 ಜೂನ್ 1965ರಲ್ಲಿ ವಿಜಯಪುರ ಜಿಲ್ಲೆ, ಇಂಡಿ ತಾಲ್ಲೂಕಿನ ಹಂಜಗಿ ಗ್ರಾಮದಲ್ಲಿ ತಿಪ್ಪಣ್ಣ ಹಾಗೂ ಅಂಬವ್ವ ದಂಪತಿಗಳ ನಾಲ್ಕನೇ ಮಗನಾಗಿ ಜನಿಸಿದರು. ಇವರು ಪ್ರಾಥಮಿಕ ಶಿಕ್ಷಣವನ್ನು ಸ್ವಗ್ರಾಮವಾದ ಹಂಜಗಿಯಲ್ಲಿ ಪಡೆಯುತ್ತಿರುವ ಸಂದರ್ಭದಲ್ಲಿ 1972ರಲ್ಲಿ ಬರಗಾಲದ ಕಾರಣದಿಂದಾಗಿ ವಿಜಯಪುರ ಹಾಗೂ ಇಂಡಿಯ ವಸತಿ ಶಾಲೆಯಲ್ಲಿ, ಪ್ರೌಢ ಶಿಕ್ಷಣವನ್ನು ನಿಂಬಾಳದಲ್ಲಿ, ಪದವಿಪೂರ್ವ ಮತ್ತು ಪದವಿ ಶಿಕ್ಷಣವನ್ನು ವಿಜಯಪುರದಲ್ಲಿ ಪೂರೈಸಿದರು. ನಂತರ ಕನ್ನಡ ಮತ್ತು ಜಾನಪದ ವಿಷಯದಲ್ಲಿ ಸ್ನಾತಕೋತ್ತರ ಪದವಿಯನ್ನು ಗುಲಬರ್ಗಾ ವಿಶ್ವವಿದ್ಯಾಲಯದಿಂದ ದ್ವಿತೀಯ ರ್‍ಯಾಂಕ್‌ನೊಂದಿಗೆ ಪಡೆದರು. ಇದೇ ವಿಶ್ವವಿದ್ಯಾಲಯದಲ್ಲಿ 'ಹೈದ್ರಾಬಾದ ಕರ್ನಾಟಕದ ಜನಪದ ವಾದ್ಯಗಳು' ಎಂಬ ವಿಷಯದಲ್ಲಿ ಎಂ.ಫಿಲ್ ಪದವಿಯನ್ನು, 'ಹೈದ್ರಾಬಾದ ಕರ್ನಾಟಕದ ಜನಪದ ಪ್ರದರ್ಶನ ಕಲೆಗಳು' ಎಂಬ ಮಹಾಪ್ರಬಂಧಕ್ಕೆ ಡಾಕ್ಟರೇಟ್ ಪದವಿಯನ್ನು ಪಡೆದಿರುತ್ತಾರೆ. ಬೆಳಗಾವಿ ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯದಿಂದ ನೀರನೆಳಲು ಅಂಬೇಡ್ಕರ್ ಚಿಂತನೆಯಾಧಾರಿತ ಲೇಖನಗಳು ಗ್ರಂಥಕ್ಕೆ ಡಿ.ಲಿಟ್. ಪದವಿ ಪಡೆದಿದ್ದಾರೆ.

ಗುಲಬರ್ಗಾ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿರುವ ಪೋತೆಯವರು ಬೋಧನೆಯ ಜೊತೆಗೆ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಕರ್ನಾಟಕ ವಿಶ್ವವಿದ್ಯಾಲಯದ ಮೌಲ್ಯಮಾಪನ ಕುಲಸಚಿವರಾಗಿ, ಗುಲಬರ್ಗಾ ವಿಶ್ವವಿದ್ಯಾಲಯದ ಪ್ರಸಾರಾಂಗ ನಿರ್ದೇಶಕರಾಗಿ, ಪಾಲಿ ಮತ್ತು ಬೌದ್ಧ ಅಧ್ಯಯನ ಸಂಸ್ಥೆ ನಿರ್ದೇಶಕರಾಗಿ, ಕಲಾನಿಕಾಯದ ಡೀನರಾಗಿ, ಹಲವಾರು ಅಧ್ಯಯನ ಕೇಂದ್ರಗಳ ಸಂಯೋಜಕರಾಗಿ ಆಡಳಿತಾತ್ಮಕ ಹುದ್ದೆಗಳನ್ನು ನಿಭಾಹಿಸಿದ ಕೀರ್ತಿಗೂ ಭಾಜನರಾಗಿರುತ್ತಾರೆ. ಬೋಧನೆ, ಆಡಳಿತಾತ್ಮಕವಾದ ಹುದ್ದೆಗಳನ್ನು ನಿಭಾಯಿಸುವುದರೊಂದಿಗೆ ಸಾಹಿತ್ಯ ಮತ್ತು ಸಂಶೋಧನಾ ಕ್ಷೇತ್ರದಲ್ಲಿ ಇವರ ಹೆಸರು ಮುಂಚೂಣಿಯಲ್ಲಿದೆ. ಜಾನಪದ ಕ್ಷೇತ್ರವೊಂದರಲ್ಲಿಯೇ ಇವರು 17ಕ್ಕೂ ಹೆಚ್ಚು ಸಂಶೋಧನಾತ್ಮಕವಾದ ಅಧ್ಯಯನ ಕೃತಿಗಳನ್ನು ರಚಿಸಿದ್ದಾರೆ. ದಲಿತ ಸಂವೇದನೆಗಳನ್ನು ಅನಾವರಣಗೊಳಿಸುವ ನೆಲೆಯಲ್ಲಿ ಬಾಬಾಸಾಹೇಬರ ತತ್ವ-ಸಿದ್ಧಾಂತಗಳಿಗೆ ಪೂರಕವಾದ 15ಕ್ಕೂ ಅಧಿಕ ಕೃತಿಗಳನ್ನು ಪ್ರಕಟಿಸಿದ್ದಾರೆ. ಹಾಗೆಯೇ ಸೃಜನಶೀಲ ಸಾಹಿತ್ಯ ಪ್ರಕಾರವಾದ ಕಥೆ, ಕಾದಂಬರಿ, ಪ್ರಬಂಧ, ಜೀವನ ಚರಿತ್ರೆ, ಅನುವಾದ, ಸಂಪಾದನೆ ಮುಂತಾದ ಕ್ಷೇತ್ರಗಳನ್ನು ಪ್ರಧಾನವಾಗಿಟ್ಟುಕೊಂಡು 60ಕ್ಕೂ ಹೆಚ್ಚು ಕೃತಿಗಳನ್ನು ಕನ್ನಡ ಸಾರಸ್ವತ ಲೋಕಕ್ಕೆ ಸಮರ್ಪಿಸಿದ್ದಾರೆ. ಇವುಗಳಲ್ಲಿ ಚಮ್ಮಾವುಗೆ, ಬೆತ್ತಲಾದ ಚಂದ್ರ, ಕರುಳರಿಯುವ ಹೊತ್ತು, ಮಾದನ ಕರೆಂಟ್ ಕುತಂತ್ರ ಎಂಬ ಕಥಾ ಸಂಕಲನಗಳು, 'ಬಯಲೆಂಬೊ ಬಯಲು' ಕಾದಂಬರಿ ಇದು ಕನ್ನಡ ದಲಿತ ಸಾಹಿತ್ಯದ ಮೊದಲ ಬಯೋಪಿಕ್ ಕೃತಿ, ಗಾಂಧಿಪ್ರತಿಮೆ' ಇದು ಪ್ರಬಂಧ ಸಂಕಲನ. ಇವು ಇವರ ಸೃಜನಶೀಲ ಸಾಹಿತ್ಯ ಕೃತಿಗಳಲ್ಲಿ ಪ್ರಮುಖವಾಗಿವೆ. ಪ್ರೊ. ಎಚ್.ಟಿ. ಪೋತೆಯವರು ತಮ್ಮಲ್ಲಿರುವ ವಿದ್ವತ್ತಿನಿಂದಾಗಿ ಹಲವಾರು ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದ ವಿಚಾರ ಸಂಕಿರಣಗಳಲ್ಲಿ ಭಾಗವಹಿಸಿ ಸಂಶೋಧನಾ ಪ್ರಬಂಧಗಳನ್ನು ಮಂಡಿಸಲು ಇಂಗ್ಲೆಂಡ್, ಐರ್ಲೆಂಡ್ ಹಾಗೂ ಆಸ್ಟ್ರೇಲಿಯಾ ದೇಶಗಳಿಗೆ ಹೋಗಿಬಂದಿದ್ದಾರೆ. ಇವರ ಸಾಹಿತ್ಯ ಕೃತಿಗಳು ಕರ್ನಾಟಕದ ಹಲವಾರು ವಿಶ್ವವಿದ್ಯಾಲಯಗಳಲ್ಲಿ ಪಠ್ಯವಾಗಿವೆ. ಸಂಶೋಧನಾ ಕ್ಷೇತ್ರದಲ್ಲಿ ಇವರು ಹೊಂದಿರುವ ಪಾಂಡಿತ್ಯದಿಂದಾಗಿ 24 ಎಂ.ಫಿಲ್, 22 ಪಿಎಚ್.ಡಿ

ಹಾಗೂ 4 ಪೋಸ್ಟ್ ಡಾಕ್ಟರಲ್ ಪದವಿಧರರಿಗೆ ಮಾರ್ಗದರ್ಶನ ಮಾಡಿರುತ್ತಾರೆ.
ಸಾಹಿತ್ಯ ಹಾಗೂ ಸಂಶೋಧನಾ ಕ್ಷೇತ್ರಕ್ಕೆ ನೂರಾರು ಕೃತಿಗಳನ್ನು ನೀಡಿರುವ ಇವರ ಸಾಹಿತ್ಯ ಸೇವೆಯನ್ನು ಪರಿಗಣಿಸಿ 2011ರಲ್ಲಿ ವಿಜಯಪುರ ಜಿಲ್ಲಾ ಪ್ರಥಮ ದಲಿತಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷ ಗೌರವ ಲಭಿಸಿದೆ. ಹಾಗೆಯೇ 2013ರಲ್ಲಿ ಇಂಡಿ ತಾಲ್ಲೂಕು ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿ. ಹಾಗೂ 2019ರಲ್ಲಿ ಬಸವಕಲ್ಯಾಣದ ಉರಿಲಿಂಗಪೆದ್ದಿ ಮಠ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ




ಆಯೋಜಿಸಿದ ಎರಡು ದಿನಗಳ 'ಸಂವಿಧಾನ ಸಂರಕ್ಷಣಾ' ಪ್ರಥಮ ಸಮ್ಮೇಳನದ ಸರ್ವಾಧ್ಯಕ್ಷರಾಗಿದ್ದರು. ಪ್ರೊ. ಪೋತೆ ಸಾಹಿತ್ಯ ಸೇವೆಯನ್ನು ಪರಿಗಣಿಸಿ ಹಲವಾರು ಸಂಘ, ಸಂಸ್ಥೆಗಳು ಸುಮಾರು ಇಪ್ಪತ್ತೈದಕ್ಕೂ ಹೆಚ್ಚು ಪ್ರಶಸ್ತಿ, ಪುರಸ್ಕಾರಗಳನ್ನು ಇವರ ಮುಡಿಗೇರಿವೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ; ಗುಲಬರ್ಗಾ ವಿಶ್ವವಿದ್ಯಾಲಯದಿಂದ ಎರಡು ಬಾರಿ 'ಕನ್ನಡ ರಾಜ್ಯೋತ್ಸವ ಪ್ರಶಸ್ತಿ', ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯಿಂದ ಎರಡು ಬಾರಿ 'ರಾಜ್ಯ ಪ್ರಶಸ್ತಿ', ಕರ್ನಾಟಕ ಸಾಹಿತ್ಯ ಅಕಾಡೆಮಿಯಿಂದ 'ಅಂಬೇಡ್ಕರ್ ಭಾರತ' ಪುಸ್ತಕಕ್ಕೆ ಪುಸ್ತಕ ಬಹುಮಾನ, ಗೊರುಚ ಜಾನಪದ ಪ್ರಶಸ್ತಿ, 'ಬಸವಶ್ರೀ ಪ್ರಶಸ್ತಿ', 'ಡಾ. ಬಿ.ಆರ್. ಅಂಬೇಡ್ಕರ್ ಪ್ರಶಸ್ತಿ' ಹೀಗೆ ಹಲವಾರು ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ. ಪ್ರೊ. ಎಚ್.ಟಿ. ಪೋತೆಯವರ ಸಾಧನೆಯನ್ನು ವಿವರವಾಗಿ ಬಿಚ್ಚಿಡಲು ಪ್ರಸ್ತುತ ಲೇಖನದಲ್ಲಿ ಸ್ಥಳಾವಕಾಶದ ಕೊರತೆಯಿಂದಾಗಿ ಸಂಕ್ಷಿಪ್ತಗೊಳಿಸಲಾಗಿದೆ.
ಬಾಬಾಸಾಹೇಬ್ ಅಂಬೇಡ್ಕರ್ ಅವರ ಸೈದ್ಧಾಂತಿಕ ಚಿಂತನೆಗಳಿಂದ ಪ್ರಭಾವಿತರಾಗಿ, ದಲಿತ ಸಂವೇದನೆಗಳನ್ನು ಮೈಗೂಡಿಸಿಕೊಂಡು, ಕನ್ನಡ ಸಾರಸ್ವತ ಲೋಕದ ದಲಿತಸಾಹಿತ್ಯ ಪ್ರಕಾರವನ್ನು ಶ್ರೀಮಂತಗೊಳಿಸಿರುವ ಪ್ರೊ. ಎಚ್.ಟಿ. ಪೋತೆಯವರು ತಮ್ಮ ಸಾಹಿತ್ಯದ ಹಿಂದಿನ ತುಡಿತ–ಮಿಡಿತಗಳನ್ನು ನಮ್ಮೊಂದಿಗೆ ಹಂಚಿಕೊಂಡಿದ್ದಾರೆ. ಇದರ ಸಂಕ್ಷಿಪ್ತ ನೋಟ ಹೀಗಿದೆ;

**▶▶ನಿಮ್ಮ ಸಾಹಿತ್ಯಕ್ಕೆ ಪ್ರೇರಣೆ ಮತ್ತು ಪ್ರಭಾವಗಳೇನು?**

ನಾನು ವಿದ್ಯಾರ್ಥಿ ಹಂತದಿಂದಲೂ ಹಾಸ್ಟೆಲ್‌ನಲ್ಲಿ ಇದ್ದುಕೊಂಡು ಚಳವಳಿಯಲ್ಲಿ ತೊಡಗಿಸಿಕೊಂಡು ಬಂದವನು. ಹೀಗಾಗಿ ಹೋರಾಟದ ಗುಣಗಳನ್ನು ಅಂದಿನಿಂದಲೇ ಮೈಗೂಡಿಸಿಕೊಂಡವನು. ಹಾಗೆಯೇ ನಮ್ಮ ತಂದೆ ಆಗಿನ ಕಾಲಕ್ಕೆ ಆರನೇ ತರಗತಿ ಓದಿದವರು. ನಮ್ಮ ಬಾಲ್ಯದ ದಿನಗಳಲ್ಲಿ ಕುಮಾರ ಕಕ್ಕಯ್ಯಪೋಳ ಅವರು ಇಂಡಿ ತಾಲ್ಲೂಕಿನಲ್ಲಿ ತಹಶೀಲ್ದಾರ್ ಆಗಿದ್ದರು. ನಮ್ಮ ತಂದೆಯವರು ಕುಮಾರ ಕಕ್ಕಯ್ಯಪೋಳ ಅವರು ಬರೆದಿರುವ 'ಮೂಕ ಭಾಷಣ' ಎಂಬ ಪುಸ್ತಕವನ್ನು ಓದಿ, ಅಂಬೇಡ್ಕರ್ ಅವರ ಬದುಕಿನ ಕುರಿತು ನಮಗೆ ಹೇಳುತ್ತಿದ್ದರು. ಅಂದಿನಿಂದಲೇ ನಮ್ಮ ತಂದೆಯವರು ಅಂಬೇಡ್ಕರ್ ಅವರ ಬಗ್ಗೆ ನಮ್ಮ ತಲೆಯೊಳಗೆ ಅವರ ಹೋರಾಟದ ಚಿತ್ರಣವನ್ನು ಬಿತ್ತುತ್ತ ಬಂದರು. ನಾನು ಸಾಹಿತಿಯಾಗಬೇಕೆಂದು ಯಾವುದೇ ಆಸೆಪಟ್ಟವನಲ್ಲ. ಸೋಶಿಯಾಲಜಿ ಓದಬೇಕೆಂಬ ಹಂಬಲವಿತ್ತು. ಆದರೆ, ಯಾರೋ ಸ್ನೇಹಿತರು ಬಂದು ಸೋಶಿಯಾಲಜಿ ಮಾಡುವುದರಿಂದ ಬಿ.ಇಡಿ ಮಾಡುವುದಕ್ಕೆ ಬರುವುದಿಲ್ಲ. ಮುಂದೆ ನೌಕರಿಗೆ ಸಮಸ್ಯೆಯಾಗುತ್ತದೆ ಎಂದು ಹೇಳಿದಾಗ ನಾನು ಐಚ್ಛಿಕ ಕನ್ನಡವನ್ನು ಆಯ್ದುಕೊಂಡೆ. ನಂತರ ಸ್ನಾತಕೋತ್ತರ ಪದವಿಗೆ ಬಂದಾಗ ಬಹುತೇಕ ಸಾಹಿತಿಗಳನ್ನು ನೋಡಿ ಸಾಹಿತ್ಯದಲ್ಲಿ ಆಸಕ್ತಿ ಬೆಳೆಸಿಕೊಂಡೆ. ಆಗ ಚೆನ್ನಣ್ಣ ವಾಲೀಕಾರ್ ಅವರಂತಹ ಬರಹಗಾರರೆ ಅಂದು ನಮಗೆ ಹೆಚ್ಚು ಪ್ರಭಾವ ಬೀರಿದ್ದು. ಆ ವೇಳೆಗಾಗಲೇ ನಾನು ಬಾಲ್ಯದಿಂದ ಅಂಬೇಡ್ಕರ್ ವಿಚಾರಗಳನ್ನು ಕೇಳಿ ಬೆಳೆದಿದ್ದ ಕಾರಣ ಇಲ್ಲಿ ಸುಲಭವಾಗಿ ದಕ್ಕಿದವು. ನಮಗೆ ಅಂಬೇಡ್ಕರ್ ವಿಚಾರಗಳು ಹೆಚ್ಚು ದಕ್ಕಿದ್ದೆ ನಮ್ಮ ತಂದೆಯವರಿಂದ. ನಮ್ಮ ತಂದೆ ನಾನು ಮದುವೆಯಾದ ವರ್ಷ ಅಂಬೇಡ್ಕರ್ ತೀರಿಕೊಂಡರು ಎಂದು ಹೇಳುತ್ತಲೇ ನಮ್ಮೊಳಗೆ ಓದಿನ ಛಲವನ್ನು ಮೂಡಿಸುತ್ತಿದ್ದರು. ಸಂಶೋಧನ ಅಧ್ಯಯನಕ್ಕೆ ಸೇರಿಕೊಂಡಾಗ ಬರವಣಿಗೆಯಲ್ಲಿ ತೊಡಗಿಸಿಕೊಳ್ಳುವುದಕ್ಕೆ ಸಾಕಷ್ಟು ಅವಕಾಶಗಳು ಸಿಕ್ಕವು.

**▶▶ನೀವು ಚಳುವಳಿಗಳಲ್ಲಿ ತೊಡಗಿಸಿಕೊಳ್ಳಲು ಪ್ರೇರಣೆಯಾಗಿದ್ದು ಹೇಗೆ?**

ವಿದ್ಯಾರ್ಥಿ ದೆಸೆಯಲ್ಲಿ ನಾವು ಹಾಸ್ಟೆಲ್‌ಗಳಲ್ಲಿ ಇರುವಾಗ ವಸತಿ ನಿಲಯದ ಸಮಸ್ಯೆಗಳನ್ನೆತ್ತಿ ಕೊಂಡು ಹೋರಾಟ ಮಾಡುತ್ತಿದ್ದೇವು ಆಮೂಲಕ ಚಳವಳಿಗಳಲ್ಲಿ ಭಾಗವಹಿಸುವುದಕ್ಕೆ ಆರಂಭಿಸಿದ್ದು. 1981ರಲ್ಲಿ ವಿಜಯಪುರದಲ್ಲಿ ಡಿ.ಎಸ್.ಎಸ್ ಕಟ್ಟುವ ಆರಂಭದಲ್ಲಿ ನಾನು ಆಗ ಪಿ.ಯು.ಸಿ ವಿದ್ಯಾರ್ಥಿ. ಆಗ ಈ ಸಂಘಟನೆಯಲ್ಲಿ ನಾನು ಸಕ್ರಿಯ ಕಾರ್ಯಕರ್ತನಾಗಿ ತೊಡಗಿಕೊಂಡಿದ್ದೆ. ನಂತರದ ದಿನಗಳಲ್ಲಿ ಈ ಸಂಘಟನೆ ಕೆಲವು ಕಾರಣಗಳಿಂದ ಕ್ಷೀಣಿಸಿತು. ಮುಂದೆ ನಾನು ಎಂ.ಎ ಪದವಿ ಮುಗಿಸಿ ಕೊಂಡು ಬಂದ ಸಂದರ್ಭದಲ್ಲಿ ಮತ್ತೇ ದಲಿತ ಸಂಘರ್ಷ ಸಮಿತಿಯನ್ನು ಪುನಃ ನಿರ್ಮಾಣ ಮಾಡಿದೆವು. ಆಗ ಸಂಘಟನೆಯ ಉದ್ಘಾಟನೆಗೆ ದಿ.ತ್ಯಾಗಿ, ಎನ್.ವೆಂಕಟೇಶ್ ಆಗಮಿಸಿದ್ದರು. ಆಗ ನಾನು ಇದರ ಖಜಾಂಚಿಯಾಗಿ ಕಾರ್ಯನಿರ್ವಹಿಸಿದ್ದೆ. ಡಿ.ಜಿ.ಸಾಗರ್ ಅವರೆಲ್ಲ ಆಯೋಜನೆ ಮಾಡುವ ಕಾರ್ಯಕ್ರಮಗಳಲ್ಲಿ ನಾನು ಕುಳ್ಳಗೆ ಇದ್ದ ಕಾರಣ ಸ್ಲೋಗನ್ ಹಾಕಲು ನನ್ನ ಮುಂದೆ ಬಿಡುತ್ತಿದ್ದರು. ನಾನು ಮೊದಲು ಸ್ಲೋಗನ್ ಹಾಕುತ್ತಿದ್ದೆ. ಆ ನಂತರ ಹಿಂದಿನವರು ಕೂಗುತ್ತಿದ್ದರು. ಹೀಗೆ ದಲಿತ ಸಂಘರ್ಷ ಸಮಿತಿಯ ಮೂಲಕ ಸಾಮಾಜಿಕ ಅನ್ಯಾಯದ ವಿರುದ್ಧ ಹಲವಾರು ಹೋರಾಟಗಳನ್ನು ಮಾಡಿಕೊಂಡು ಬಂದಿದ್ದೇನೆ. ಕಾಲೇಜು ಮತ್ತು ವಿಶ್ವವಿದ್ಯಾಲಯದಲ್ಲಿಯ ದಿನಗಳು ನನ್ನನ್ನು ಸಂಘಟನೆಯಲ್ಲಿ ತೊಡಗಿಸಿಕೊಳ್ಳಲು ಹೆಚ್ಚು ಅವಕಾಶ ಕಲ್ಪಿಸಿಕೊಟ್ಟವೆ.

**▶▶ನೀವು ಮೊದಲು ರಚಿಸಿದ ಸಾಹಿತ್ಯ ಕೃತಿ ಯಾವುದು?**

ಎಂ.ಎ ಓದುವಾಗ ಆರಂಭಿಕ ಹಂತದಲ್ಲಿ ನನಗೆ ಒಂದಿಷ್ಟು ಲೇಖನಗಳನ್ನು ಬರೆಯುವ ಹವ್ಯಾಸವಿತ್ತು. ಆಗ ಯಾವುದೇ ಸ್ವತಂತ್ರ ಕೃತಿ ರಚನೆ ಮಾಡಿರಲಿಲ್ಲ. ನಾನು ಎಂ.ಎ ಮುಗಿಸಿ ಉದ್ಯೋಗವನ್ನು ಹುಡುಕುವ ಕಾಲಕ್ಕಾಗಲೇ

ನನಗೆ ಮದುವೆಯಾಗಿ ಒಂದು ಮಗುವಿತ್ತು. ಆಗ ನನ್ನ ತಮ್ಮ ನಮ್ಮಣ್ಣ ಇಷ್ಟೆಲ್ಲ ಓದಿಯು ಆತನಿಗೆ ಒಂದು ಸಣ್ಣ ನೌಕರಿಯು ಸಿಕ್ಕಿಲ್ಲವಲ್ಲ ಎಂದು ಆಲೋಚಿಸಿ, ಒಮ್ಮೆ ನನ್ನ ಬಳಿ ಬಂದು 'ಅಣ್ಣ ನೀನು ನೌಕರಿಗೆ ಹೋಗುವುದಕ್ಕೆ ಇನ್ನೂ ಏನು ಬೇಕು' ಎಂದು ಕೇಳಿದ. ಆಗ ನಾನು ಎಲ್ಲಿಯಾದರು ಉಪನ್ಯಾಸಕನಾಗಿ ನಾನು ಕೆಲಸಕ್ಕೆ ಹೋಗಬೇಕಾದರೆ ಈಗಿರುವ ಮೆರಿಟ್ ಮಾತ್ರವೇ ಸಾಲದು. ಇದರೊಂದಿಗೆ ಒಂದು 'ಎಡಿಟಿಂಗ್' (ಸಂಪಾದನೆ) ಕೃತಿಯಾದರು ಇರಬೇಕು. ಅದಕ್ಕೆ ಕನಿಷ್ಠ ಹತ್ತು ಸಾವಿರವಾದರೂ ಬೇಕಾಗುತ್ತೆ. ಅಷ್ಟು ದುಡ್ಡು ಎಲ್ಲಿಂದ ತರುವುದು ಎಂದು ಹೇಳಿದೆ. ಪಾಪ ಅವನಿಗೆ ಎಡಿಟಿಂಗ್ ಎಂದರೇನು ಎಂಬುದು ತಿಳಿಯದೆ ನೀನು ಅದಕ್ಕೆ ಸಿದ್ಧತೆ ಮಾಡಿಕೊ, ನಾನು ಹಣದ ವ್ಯವಸ್ಥೆ ಮಾಡುತ್ತೇನೆ ಎಂದು ಹೇಳಿ, ಕಸಾಯಿಖಾನೆಯಲ್ಲಿ ಕೆಲಸ ಮಾಡುತ್ತಿದ್ದ ಮಾದಿಗ ಸಮುದಾಯದ ತನ್ನ ಗೆಳೆಯನ ಬಳಿ ಹೇಳಿಕೊಂಡಾಗ, ಆ ಹುಡುಗ ನನಗೆ ಯಾವುದೇ ಬಡ್ಡಿ ಇಲ್ಲದೆ ಎಂಟು ಸಾವಿರ ರೂಪಾಯಿಗಳನ್ನು ಕೊಟ್ಟು ಕಳುಹಿಸಿದ್ದ. ಆ ಹಣ ತೆಗೆದುಕೊಂಡು ಗದಗಕ್ಕೆ ಹೋಗಿ ಮೊದಲ ಸಂಪಾದಿತ ಕೃತಿಯಾದ 'ಅಂಬೇಡ್ಕರ್ ವಿಚಾರತರಂಗ'ವನ್ನು ಪ್ರಕಟಿಸಿದೆ. ಮುಂದೆ ಈ ಕೃತಿಯ ಸಹಕಾರ ಹಾಗೂ ನನ್ನ ಮೆರಿಟ್ ಕಾರಣದಿಂದ ನೌಕರಿ ಸಿಕ್ಕಿತು. ಆದರೆ, ಪುಸ್ತಕ ಪ್ರಕಟಿಸಿದರೆ ಮಾತ್ರವೇ ಬೇಗ ಕೆಲಸ ಸಿಗುತ್ತದೇ ಎಂಬ ಕಲ್ಪನೆಯ ಕಾರಣಕ್ಕೆ ನಾನು ಸಂಪಾದಿತ ಕೃತಿಯನ್ನು ಮೊದಲು ಪ್ರಕಟಿಸಿದ್ದು. ನಾನು ಗ್ರಾಮೀಣ ಭಾಗದಲ್ಲಿ ಬೆಳೆದ ಕಾರಣ ಜಾನಪದದ ಬಗ್ಗೆ ವಿಶೇಷವಾದ ಆಸಕ್ತಿಯಿತ್ತು. ಆದ ಕಾರಣ ನಾನು ಜಾನಪದ ಕ್ಷೇತ್ರವನ್ನು ಸಂಶೋಧನೆಗೆ ಆಯ್ದುಕೊಂಡು ಎಂ.ಫಿಲ್ ಹಾಗೂ ಪಿಎಚ್.ಡಿ ಪಡೆದುಕೊಂಡೆ. ನಂತರ ಅಂಬೇಡ್ಕರ್ ಚಿಂತನೆಗಳ ನೆಲೆಯಲ್ಲಿ ವೈಚಾರಿಕ ಸಾಹಿತ್ಯ ಕ್ಷೇತ್ರಕ್ಕೆ ಕಾಲಿಟ್ಟೆ. ಹೀಗಾಗಿ ನಾನು ಜಾನಪದ ಮತ್ತು ಅಂಬೇಡ್ಕರ್ ಚಿಂತನಧಾರೆಗಳನ್ನು ಆಧಾರವಾಗಿಟ್ಟುಕೊಂಡು ಇಷ್ಟೆಲ್ಲ ಸಾಹಿತ್ಯ ಕೃತಿ ರಚನೆ ಮಾಡಲು ಸಾಧ್ಯವಾಯಿತು. ನಂತರ ಸಂಶೋಧನೆಯಾಚೆ ಸೃಜನಶೀಲ ಸಾಹಿತ್ಯ ಪ್ರಕಾರವನ್ನು ಆಯ್ದುಕೊಂಡರು ಕೂಡ, ಇಲ್ಲಿಯೂ ಅಂಬೇಡ್ಕರ್ ಅವರ ಸೈದ್ಧಾಂತಿಕ ತುಡಿತವನ್ನು ಅನಾವರಣಗೊಳಿಸುವ ನೆಲೆಯಲ್ಲಿಯೇ ಹಲವಾರು ಕಥಾ ಸಂಕಲನ, ಕಾದಂಬರಿ ಹಾಗೂ ಪ್ರಬಂಧ ಕೃತಿಗಳನ್ನು ರಚಿಸಿದ್ದೇನೆ. ಹೀಗೆ ಸಂಪಾದನೆಯಿಂದ ಆರಂಭಗೊಂಡ ನನ್ನ ಸಾಹಿತ್ಯ ಪಯಣವು ಸಾಹಿತ್ಯ ವಿವಿಧ ಪ್ರಕಾರಗಳಲ್ಲಿ ಸಾಗುತ್ತ ಬಂದಿದೆ.

**▶▶ನೀವು ಬಾಲ್ಯದಲ್ಲಿ ಅನುಭವಿಸಿದ ಅಸಮಾನತೆ, ಅಪಮಾನಗಳು ನಿಮ್ಮ ಸಾಹಿತ್ಯ ಕೃಷಿಗೇನಾದು ಪ್ರಭಾವ ಬೀರಿವೆಯಾ?**

ಶೋಷಿತ ಸಮುದಾಯದ ಯಾರಿಗೆ ಆಗಲಿ ಬಾಬಾಸಾಹೇಬ್ ಅಂಬೇಡ್ಕರ್ ಅವರು ದಕ್ಕುವವರೆಗೂ ನಮ್ಮೊಳಗಿನ ಸೀಮಿತ ನೆಲೆಯಲ್ಲಿಯೇ ಒಂದಿಲ್ಲೊಂದು ರೀತಿಯಲ್ಲಿ ಹೋರಾಟವನ್ನು ನಡೆಸಿಕೊಂಡು ಬಂದಿರುತ್ತೇವೆ. ಎರಡನೇ ಹಂತದಲ್ಲಿ ಬಾಬಾಸಾಹೇಬರ ವಿಚಾರಗಳು ನಮ್ಮ ತಲೆಯೊಳಗೆ ಪ್ರವೇಶ ಪಡೆದರೆ ಹೋರಾಟಕ್ಕೆ ನಿಂತುಕೊಳ್ಳುತ್ತೇವೆ. ನಾವು ಊರಲ್ಲಿ ಒಂದಿಷ್ಟು ಅನುಕೂಲಸ್ಥರಾಗಿದ್ದರು ಕೂಡ ನಮ್ಮ ಹಸುಗಳು ಗೌಡರ ಹೊಲಕ್ಕೆ ಹೋದ ಕಾರಣ ಅವುಗಳಿಗೆ ಮೇವು ನೀರು ಹಾಕದಂತೆ ಕಟ್ಟಿ ಹಾಕಿದ್ದರು. ಗೌಡನ ಉದ್ದೇಶ ನಮ್ಮ ತಂದೆಯನ್ನು ಕಟ್ಟಿಹಾಕಿ ಹೊಡೆಯಬೇಕು ಎಂಬುದಾಗಿತ್ತು. ಆದರೆ, ನಮ್ಮ ಅಜ್ಜಿ ಇದಕ್ಕೆ ಆಸ್ಪಾದ ಮಾಡಿಕೊಡದೆ ತಮ್ಮ ಮಕ್ಕಳನ್ನು ರಕ್ಷಣೆ ಮಾಡಿದ್ದರು. ಆ ಸಮಯದಲ್ಲಿ ನಮ್ಮ ಊರಿನಲ್ಲಿರುವ ಒಬ್ಬ ಮುಸಲ್ಮಾನ್ ವ್ಯಕ್ತಿ ನಮ್ಮ ಪರವಾಗಿ ನಿಂತು ನಮ್ಮ ದನಗಳನ್ನು ಬಿಡಿಸಿಕೊಟ್ಟಿದ್ದರು. ಆಗ ನಾನು ಎರಡನೇ ತರಗತಿ ಓದುತ್ತಿದ್ದೆ. ಇದು ನನಗೊಂದು ದೊಡ್ಡ ಅನುಭವವಾಯಿತು. ಅವರ ದನಗಳು ನಮ್ಮ ಹೊಲದಲ್ಲಿ ಬಂದು ಬೆಳೆ ನಾಶ ಮಾಡಿದರು ಏನು ಮಾಡುವಂತಿರಲಿಲ್ಲ. ಆದರೆ ನಮ್ಮ ದನಗಳು ಹೋದರೆ ಹೀಗೆಲ್ಲ ಅಪಮಾನ ಮಾಡುತ್ತಿದ್ದರು. ನಮ್ಮ ಊರಿನಲ್ಲಿ ಬ್ರಾಹ್ಮಣರು ಇರಲಿಲ್ಲ. ಆದರೂ ನಾವು ನ್ಯಾಯಬೆಲೆ ಅಂಗಡಿಯಲ್ಲಿ ರೇಷನ್ ತರುವ ಕಾರಣಕ್ಕೆ ಲಿಂಗಾಯತ ಕೇರಿಗೆ ಪ್ರವೇಶಿಸುತ್ತೇವೆ ಎಂದು ನಮ್ಮನ್ನು ಮುಸಲ್ಮಾನರ ಕೇರಿಗೆ ಹಾಕಿದ್ದರು. ನಾವು ಊರಿನಲ್ಲಿ ಮುಸಲ್ಮಾನರ ಕೇರಿಯಲ್ಲಿ ಧೈರ್ಯವಾಗಿ ಓಡಾಡುವಷ್ಟು, ಲಿಂಗಾಯತ ಕೇರಿಯಲ್ಲಿ ಓಡಾಡುವಂತಹ ಪರಿಸ್ಥಿತಿ ಇರಲಿಲ್ಲ. ಆದರೆ, ಬ್ರಾಹ್ಮಣಿಸಂ ಎನ್ನುವಂತದ್ದನ್ನು ಲಿಂಗಾಯತರಿಂದ ಆರಂಭಗೊಂಡು ತಳವಾರರ ತನಕ ನಮ್ಮ ಮೇಲೆ ಪ್ರಯೋಗ ಮಾಡುತ್ತಿದ್ದರು. ನಮ್ಮ ಸಮುದಾಯದ ಹಿರಿಯರನ್ನು ಕೂಡ ಏಕವಚನದಲ್ಲಿಯೇ ಕರೆಯುತ್ತಿದ್ದರು. ಶಾಲೆಯಲ್ಲಿಯೂ ನಾವು ಹಿಂದಿನ ಸಾಲಿನಲ್ಲಿಯೇ ಕೂರಬೇಕಾದ ಪರಿಸ್ಥಿತಿಯಿತ್ತು. ಇಲ್ಲಿಯವರೆಗೂ ನನಗೆ ನಮ್ಮೂರ ಹನುಮಂತ ದೇವರ ಗುಡಿಯೊಳಗೆ ಪ್ರವೇಶ ಮಾಡಲು ಸಾಧ್ಯವಾಗಿಲ್ಲ ಅಂದರೆ, ತೀರಾ ಸಾಮಾನ್ಯ ವರ್ಗದ ಪರಿಸ್ಥಿತಿ ಹೇಗಿರಬೇಕು. ದಲಿತರ ಬದುಕಿನಲ್ಲಿ ಆಧುನಿಕ ಯುಗದಲ್ಲೂ ಯಾವುದೇ ಬದಲಾವಣೆಯಾಗಿಲ್ಲ.

**▶▶ಉತ್ತರ ಕರ್ನಾಟಕ ಪ್ರಾಂತ್ಯದಲ್ಲಿ ಸಮಾನತೆ ಮತ್ತು ಸೌಹಾರ್ದ ನೆಲೆಯಲ್ಲಿ ವಚನ ಚಳವಳಿಯಾದಿಯಾಗಿ ಹಲವಾರು ದಾರ್ಶನಿಕ ಪಂಥಗಳು ಕಾರ್ಯಪ್ರವೃತ್ತವಾಗಿವೆ. ಇವು ನಿಮ್ಮ ಸಾಹಿತ್ಯ ಕೃಷಿಗೇನಾದರು ಪ್ರೇರಣೆಯಾಗಿದೆಯಾ?**

ಆರಂಭಿಕ ಹಂತದಲ್ಲಿ ನಾನು ಶಿಕ್ಷಣಕ್ಕಾಗಿ ಕಲಬುರಗಿಗೆ ಬರುವ ಸಂದರ್ಭಕ್ಕಾಗಲೇ ಹೋರಾಟಗಳಲ್ಲಿ ತೊಡಗಿಸಿಕೊಂಡ ಕಾರಣ ನಾಯಕತ್ವದ ಗುಣಗಳನ್ನು ಬೆಳೆಸಿಕೊಂಡಿದ್ದೆ. ಇದರ ನಡುವೆಯೇ ಬಸವಣ್ಣ ನಮಗೆ ತುಂಬಾ ಇಷ್ಟವಾದ ವ್ಯಕ್ತಿ. ಬಸವಾದಿ ಶರಣರ ಚಳವಳಿ ಎಂದು ನಾವು ಪ್ರೀತಿಸುವುದು ನಾನು ಇಂದಿನ ಲಿಂಗಾಯತರನ್ನು ನೋಡಿ ಅಲ್ಲ. ಇಂದಿನ ಲಿಂಗಾಯತರನ್ನು ಗಮನಿಸಿದರೆ ಅವರಿಗೂ ವಚನ ಸಾಹಿತ್ಯಕ್ಕೂ ಯಾವುದೇ ಸಂಬಂಧವಿಲ್ಲ. ಲಿಂಗಾಯತರು ನಮ್ಮನ್ನು ಕೆಟ್ಟದಾಗಿ ನಡೆಸಿಕೊಂಡರು ಕೂಡ, ನಾವು ಇಂದು ತಲೆ ಎತ್ತಿ ನಿಲ್ಲುವುದಕ್ಕೆ ವಚನಸಾಹಿತ್ಯ ದೊಡ್ಡ ಶಕ್ತಿಯನ್ನು ನೀಡಿದೆ. ನಾನು ಸಾಹಿತ್ಯದ ವಿದ್ಯಾರ್ಥಿಯಾದ ಕಾರಣ ವಚನದ ಒಳಾರ್ಥ, ದಲಿತ ವಚನಕಾರರು ತೋರಿದ ಸಾಮಾಜಿಕ ಪ್ರತಿರೋಧಗಳಿವೆಯಲ್ಲ, ಅದು ಸಹಜವಾಗಿಯೇ ನಮ್ಮಲ್ಲೊಂದು ಶಕ್ತಿಯನ್ನು ನೀಡಿದೆ. ಇಲ್ಲಿ ಬಹುತೇಕ ವಚನಕಾರರು ದಲಿತರೇ ಆದ ಕಾರಣ ನಾನು ಇದನ್ನು ಭಾರತದ ಮೊದಲ 'ದಲಿತ ಚಳವಳಿ' ಎಂದೇ ಗುರುತಿಸುತ್ತೇನೆ. ಹಾಗೆಯೇ ದಾಸ ಸಾಹಿತ್ಯದ ಪುರಂದರ ಮತ್ತು ಕನಕದಾಸರ ಸಾಮಾಜಿಕ ತುಡಿತಗಳು ಶೋಷಿತರ ವಿಮೋಚನೆಯನ್ನು ಎತ್ತಿಹಿಡಿದಿವೆ. ಇಂತಹ ಅಂಶಗಳು ನಮಗೆ ಹೆಚ್ಚು ಪ್ರೇರಕ ಶಕ್ತಿಯಾಗಿವೆ. ಹಾಗೆಯೇ ತತ್ವಪದ ಪರಂಪರೆಗೆ ಬಂದರೂ ಅಲ್ಲಿಯೂ ಹೆಚ್ಚು ಜನ ದಲಿತರಿದ್ದಾರೆ. ಆದರೆ, ಲಿಂಗಾಯತ ತಂತ್ರದಿಂದ ಅದನ್ನು ಲಿಂಗಾಯಿತಿಕರಣ ಮಾಡಲಾಗಿದೆ. ಆದರೆ ಬ್ರಾಹ್ಮಣ್ಯ ಹಾಗೂ ಲಿಂಗಾಯಿತಿಕರಣವನ್ನು ಮೆಟ್ಟಿ ನಿಂತು ನಮ್ಮ ಅಸ್ತಿತ್ವವನ್ನು ಕಟ್ಟಿಕೊಳ್ಳುವ ಪ್ರಯತ್ನಕ್ಕೆ ಮುಂದಾಗಿದ್ದೇವೆ. ಹಾಗೆಯೇ ಈ ಭಾಗದಲ್ಲಿ ಅಂಬೇಡ್ಕರ್ ಪ್ರಭಾವ ಹೆಚ್ಚಾದ ಕಾರಣ ನಮಗೆ ಈ ಎಲ್ಲಾ ದಾರ್ಶನಿಕ ಚಿಂತನೆಗಳೊಂದಿಗೆ ಅಂಬೇಡ್ಕರ್ ಅವರ ಸೈದ್ಧಾಂತಿಕ ಆಯಾಮಗಳು ಹೆಚ್ಚು ಪ್ರಭಾವ ಬೀರಿವೆ.

**ನೀವು ಅಂಬೇಡ್ಕರ್ ಅವರ ಸೈದ್ಧಾಂತಿಕ ಚಿಂತನೆಗಳನ್ನು ಎತ್ತಿಹಿಡಿಯುವ ನೆಲೆಯಲ್ಲಿ ಸಾಕಷ್ಟು ಸಾಹಿತ್ಯ ಕೃಷಿಯನ್ನು ನಡೆಸಿದ್ದಿರಿ. ನಿಮ್ಮ ಈ ಕೃತಿಗಳು ಇಂದಿನ ದಲಿತ ವಿದ್ಯಾವಂತ ವರ್ಗದ ಮೇಲೆ ಹೇಗೆ ಪ್ರಭಾವ ಬೀರಿವೆ?**

ಎಪ್ಪತ್ತರ ದಶಕದ ನಂತರದಲ್ಲಿ ಬಂದ ಯುವ ಪೀಳಿಗೆಗೆ ಅಂದರೆ, ನಮ್ಮ ವಯೋಮಾನದವರಿಗೆ ಏನಾದರು ಹೊಸದನ್ನು ತಿಳಿದುಕೊಳ್ಳಬೇಕು. ಏನಾದರು ಬದಲಾವಣೆಗೆ ಮುಂದಾಗಬೇಕು ಎಂಬ ತುಡಿತವಿತ್ತು. ಆದರೆ, ಇಂದಿನ ಹೊಸ ಪೀಳಿಗೆಯನ್ನು ನೋಡಿದಾಗ ಅವರ ಸ್ವಂತ ಬದುಕನ್ನು ರೂಪಿಸಿಕೊಳ್ಳುವ ಮಹತ್ವಾಕಾಂಕ್ಷೆಗಳಿಲ್ಲ. ನಾವು ಬದುಕನ್ನು ರೂಪಿಕೊಳ್ಳಲು ನಮ್ಮ ಮುಂದೆ ಹಲವಾರು ಮಾದರಿಗಳಿವೆ. ಅವುಗಳಲ್ಲಿ ಬುದ್ಧ, ಬಸವ, ಅಂಬೇಡ್ಕರ್ ಇದ್ದಾರೆ. ನಾವು ತುಂಬಾ ಸೂಕ್ಷ್ಮವಾಗಿ ಗಮನಿಸಬೇಕು. ನಾವು ಬಾಬಾಸಾಹೇಬ್ ಕಣ್ಣಿನ ಮೂಲಕವೇ ಬುದ್ಧನನ್ನಾಗಲಿ, ಬಸವಣ್ಣನನ್ನಾಗಲಿ, ಗಾಂಧಿಯನ್ನಾಗಲಿ ಓದುವುದು. ನಮ್ಮ ಜ್ಞಾನವಾಗಲಿ, ಸ್ವಾಭಿಮಾನದ ಪಥ ಯಾವುದು ಎಂದರೆ ಅದು ಬಾಬಾಸಾಹೇಬ್ ಅಂಬೇಡ್ಕರ್ ಪಥ. ಎಲ್ಲವನ್ನೂ ನಾವು ಆಗು ಮಾಡಿಕೊಳ್ಳುವುದು ಬಾಬಾಸಾಹೇಬರ ದೃಷ್ಟಿಕೋನದಿಂದ. ಆದರೆ ದುರಾದೃಷ್ಟವೆಂದರೆ ಇಂದಿನ ಯುವ ಪೀಳಿಗೆಗೆ ಹೆಚ್ಚಿನ ಅಧ್ಯಯನದ ಕೊರತೆಯಿದೆ. ಸಾಹಿತ್ಯಿಕವಾದ ಹಾಗೂ ಸಾಮಾಜಿಕ ಆದರ್ಶಗಳನ್ನು ವಿದ್ಯಾರ್ಥಿಗಳು ಅಳವಡಿಸಿಕೊಳ್ಳುವುದಕ್ಕೆ ವ್ಯಾಪಕವಾದ ಅಧ್ಯಯನ

ಮತ್ತು ಚಳವಳಿ, ಹೋರಾಟಗಳಲ್ಲಿ ತೊಡಗಿಸಿಕೊಳ್ಳುವ ಗುಣ ಅವರಲ್ಲಿ ಇಲ್ಲದಾಗಿದೆ. ನಮ್ಮ ಬಿಡುಗಡ ಏನಿದ್ದರೂ ಬಾಬಾಸಾಹೇಬರ ಮೂಲಕವೇ ಎಂಬುದನ್ನು ಅರಿತುಕೊಂಡರೆ ಮಾತ್ರ ಸಾಮಾಜಿಕ ಬದಲಾವಣೆ ಸಾಧ್ಯ. ಸಮಾಜಿಕ ಬದಲಾವಣೆಯಲ್ಲಿ ನಾವು ಎಲ್ಲವನ್ನೂ ವಿರೋಧಿಸುವುದಲ್ಲ, ಟೀಕಿಸುವುದಲ್ಲ. ನಮ್ಮ ಬಗ್ಗೆ ತುಡಿಯುವಂತಹ ಮನಸ್ಸಿರುವ ಚಿಂತಕರನ್ನು ನಾವು ಉಳಿಸಿಕೊಳ್ಳಬೇಕಾಗಿದೆ. ಹೀಗಾಗಿ ನಾವು ಬ್ರಾಹ್ಮಣ್ಯವನ್ನು ವಿರೋಧಿಸಬೇಕೆ ವಿನಃ ಬ್ರಾಹ್ಮಣರನ್ನಲ್ಲ. ಬ್ರಾಹ್ಮಣ್ಯ ಅನ್ನುವುದು ಅದು ಒಂದು ಜಾತಿ, ಸಮುದಾಯಕ್ಕೆ ಸಮೀತವಾಗಿಲ್ಲ. ಅದು ಎಲ್ಲ ಜಾತಿಗಳಲ್ಲೂ ಆವರಿಸಿಕೊಂಡಿದೆ.

**▸▸ದಲಿತ ಸಾಹಿತಿಗಳು ಅಂಬೇಡ್ಕರ್ ವಾದಕ್ಕಿಂತ ಕಮ್ಯುನಿಸ್ಟ್ ಮತ್ತು ಸಮಾಜವಾದವನ್ನು ಒಪ್ಪಿಕೊಂಡ ಕಾರಣ ಅಂಬೇಡ್ಕರ್ ಸಿದ್ಧಾಂತಗಳು ವಿಸ್ಮೃತಿಗೊಂಡ ಸಾಧ್ಯತೆಗಳೇನಾದರು ಇದೆಯಾ?**

ಕರ್ನಾಟಕದ ದೃಷ್ಟಿಯಿಂದ ಹೇಳುವುದಾದರೆ ಮೈಸೂರು ಸಂಸ್ಥಾನವು ರಾಜ್ಯದ ವಿವಿಧ ಭಾಗಕ್ಕಿಂತ ಐವತ್ತು ವರ್ಷ ಶೈಕ್ಷಣಿಕವಾಗಿ ಮುಂದೆ ಇತ್ತು. ನಾಲ್ವಡಿಯವರ ಹೋರಾಟದ ಫಲವಾಗಿ ಈ ಭಾಗದ ಜನತೆ ಶಿಕ್ಷಣದಲ್ಲಿ ಮುಂದೆ ಇದ್ದರು. ಅಲ್ಲಿ ಅವರಿಗೆ ಮೊದಲು ಪರಿಚಯವಾಗಿದ್ದು ಗಾಂಧೀಜಿ. ಹೀಗಾಗಿ ಈ ಭಾಗದ ಜನತೆ ಗಾಂಧಿ ಕಣ್ಣಿನಿಂದ ಅಂಬೇಡ್ಕರ್ ಅವರನ್ನು ನೋಡುತ್ತಾರೆ. ಈ ಕಾರಣಕ್ಕೆ ದೇವನೂರು ಮಹಾದೇವ ಅವರಿಗೆ ಗಾಂಧಿವಾದ ಮತ್ತು ಸಮಾಜವಾದ ಮುಖ್ಯವಾಗುತ್ತದೆ. ಸಿದ್ಧಲಿಂಗಯ್ಯನವರು ಕಮ್ಯುನಿಷ್ಟ್ ಸಿದ್ಧಾಂತದ ಮೂಲಕ ಅಂಬೇಡ್ಕರ್ ಅವರನ್ನು ನೋಡುತ್ತಾರೆ. ಹಾಗಂತ ಇಬ್ಬರಲ್ಲೂ ಅಂಬೇಡ್ಕರ್‌ವಾದ ಇಲ್ಲ ಎಂದು ಹೇಳಲಾಗದು. ಅವರಿಬ್ಬರು ಮಹಾನ್ ಅಂಬೇಡ್ಕರ್ ವಾದಿಗಳು. ಆದರೆ, ಮುಂಬೈ ಕರ್ನಾಟಕ ಮತ್ತು ಹೈದ್ರಬಾದ್ ಕರ್ನಾಟಕಕ್ಕೆ ಬಂದರೆ ಅಂಬೇಡ್ಕರ್ ಕಣ್ಣಿನ ಮೂಲಕ ಗಾಂಧಿಯನ್ನು ನೋಡುತ್ತೇವೆ. ಮುಂಬೈ ಕರ್ನಾಟಕ ಪ್ರಾಂತ್ಯವು ಅಂಬೇಡ್ಕರ್ ಅವರು ಬಾಳಿ ಬದುಕಿದ ಪ್ರಾಂತ್ಯಕ್ಕೆ ಹೊಂದಿಕೊಂಡ ಕಾರಣ ಅಂಬೇಡ್ಕರ್ ಅವರ ಪ್ರಭಾವ ಹೆಚ್ಚಾಗಿದೆ. ಹಾಗೆಯೇ ಅಂಬೇಡ್ಕರ್ ತರುವಾಯ ಹೈ.ಕದಲ್ಲಿ ಬಿ.ಶ್ಯಾಮಸುಂದರ್ ಅವರು ದೊಡ್ಡ ನಾಯಕತ್ವವನ್ನು ವಹಿಸಿಕೊಂಡ ಕಾರಣ ಈ ಭಾಗದ ದಲಿತರು ಧೈರ್ಯವಾಗಿ 'ಜೈಭೀಮ್' ಎಂಬ ಘೋಷಣೆ ಬಳಸುತ್ತಾರೆ. ಭಾರತದಲ್ಲಿ ಯಾವುದೇ ಭಾಗದಲ್ಲಿ ಅಂಬೇಡ್ಕರ್ ತರುವಾಯ ಶ್ಯಾಮಸುಂದರ್ ಅವರಂತಹ ನಾಯಕ ರೂಪಗೊಳ್ಳಲೇ ಇಲ್ಲ. ಬಿ. ಶ್ಯಾಮಸುಂದರ್ ಕಿರಿಯ ಸಮಕಾಲೀನರಾದ ಮಲ್ಲಿಕಾರ್ಜುನ ಖರ್ಗೆಜಿಯವರು ದಲಿತರಲ್ಲಿ ಶಿಕ್ಷಣ ಬೆಳೆಸಲು ಕಾರಣರಾಗಿರುವಂತೆ, ಅಂಬೇಡ್ಕರ್ ತತ್ವ, ಚಿಂತನೆ, ಬೌದ್ಧಧಮ್ಮ ತತ್ವದ ಪ್ರಚಾರ ಪ್ರಸಾರದಲ್ಲಿ ಶ್ರಮಿಸಿದ ಬಹುದೊಡ್ಡ ನಾಯಕರು. ನೀವು ಹೇಳಿದಂತೆ ಸಮಾಜವಾದ ಮತ್ತು ಕಮ್ಯುನಿಷ್ಟ್ ವಾದಗಳ ಪ್ರವೇಶದಿಂದಾಗಿ ಅಂಬೇಡ್ಕರ್ ವಾದದ ಪ್ರಭಾವ ಗೊತ್ತಾಗದಂತೆ ಕಡಿಮೆಯಾಗುತ್ತ ಸಾಗಿದೆ. ಬಂಡಾಯ ಚಳವಳಿಗೆ ಕಮ್ಯುನಿಷ್ಟ್ ಪ್ರಧಾನವಾಯಿತು. ಇಲ್ಲಿ ಅಂಬೇಡ್ಕರ್ ಚಿಂತನೆ ಪ್ರಧಾನವಾಗಲೇ ಇಲ್ಲ. ಹಾಗೆಯೇ ಮಹಿಳಾ ಚಳವಳಿಗಳಿಗೆ ಪಾಶ್ಚಿಮಾತ್ಯ ಸಿದ್ಧಾಂತಗಳು ಪ್ರಧಾನವಾದವು. ಆದರೆ ಮಹಿಳೆಯರ ಹಕ್ಕಿಗಾಗಿ ಹೋರಾಡಿ, ತನ್ನ ಮಂತ್ರಿ ಪದವಿಯನ್ನೇ ಕಳೆದುಕೊಂಡ ಬಾಬಾಸಾಹೇಬರ ತತ್ವ ಸಿದ್ಧಾಂತಗಳು ಮುಖ್ಯವಾಗಲೇ ಇಲ್ಲ. ಹಾಗೆಯೇ ವಿಶೇಷವಾಗಿ ಕೃಷಿ ನೀತಿಯನ್ನು ಪ್ರತಿಪಾದಿಸಿದ ಅಂಬೇಡ್ಕರ್ ಅವರ ಚಿಂತನೆಗಳು ಕೃಷಿ ಚಳಿವಳಿಗೆ

ಪ್ರಧಾನವಾಗಲೇ ಇಲ್ಲ. ಹೀಗೆ ಭಾರತದಲ್ಲಿ ಹಲವಾರು ಸಿದ್ಧಾಂತಗಳ ಪ್ರಭಾವಕ್ಕೊಳಗಾಗಿ ದೇಶೀಯ ನೆಲೆಯ ಅಂಬೇಡ್ಕರ್ ವಾದವನ್ನು ಜಾತಿಕಾರಣಕ್ಕೆ ಉಳಿದವರು ನಿರ್ಲಕ್ಷ್ಯ ಮಾಡುತ್ತಾರೆ. ಇದಕ್ಕೆ ಪ್ರಮುಖ ಕಾರಣ ಅಂಬೇಡ್ಕರ್ ಜನಿಸಿದ ಜಾತಿಯ ಕಾರಣವಲ್ಲದೆ ಮತ್ತೇನೂ ಅಲ್ಲ. ಕರ್ನಾಟಕದಲ್ಲಿಯೇ ನೀವು ನೋಡುವುದಾದರೆ ಸರ್ವೋದಯ ಪಕ್ಷ ಮುನ್ನೆಲೆಗೆ ಬರಲೇ ಇಲ್ಲ. ಇದಕ್ಕೆ ಕಾರಣ ಇದರ ನಾಯಕತ್ವ ವಹಿಸಿಕೊಂಡಿರುವ ದೇವನೂರು ಮಹಾದೇವ ದಲಿತನೆಂಬ ಕಾರಣಕ್ಕಾಗಿ. ಹಾಗೆಯೇ ಅಹಿಂದ ಚಳವಳಿಯ ನೇತೃತ್ವವನ್ನು ಸಿದ್ಧರಾಮಯ್ಯ ವಹಿಸಿಕೊಂಡ ಕಾರಣ ಜನ ಅವರನ್ನು ಬೆಂಬಲಿಸಿದರು. ಹೀಗಾಗಿಯೇ ಅಂಬೇಡ್ಕರ್ ಸಿದ್ಧಾಂತಗಳು ಎಷ್ಟೇ ಗಟ್ಟಿ ಇದ್ದರು, ಅವರನ್ನು ವಿದೇಶಗಳೆಲ್ಲ ಮಹಾನಾಯಕ ಎಂದು ಒಪ್ಪಿಕೊಂಡರು ನಮ್ಮಲ್ಲಿ ಒಪ್ಪಿಕೊಳ್ಳುವ ಮನಸ್ಥಿತಿ ಸಿದ್ಧವಾಗಿಲ್ಲ.

**▸▸ಬಾಬಾಸಾಹೇಬರು ತಮ್ಮ ತ್ರಿವಳಿ ಸೂತ್ರಗಳಲ್ಲಿ ಶಿಕ್ಷಣಕ್ಕೆ ಮೊದಲ ಆದ್ಯತೆಯನ್ನು ನೀಡಿದ್ದಾರೆ. ಇದಕ್ಕೆ ಕಾರಣವೇನು?**

ಜಗತ್ತನ್ನು ನಾವು ಹೊಸದಾಗಿ ರೂಪಿಸಬೇಕು ಎಂದರೆ ಅದಕ್ಕೆ ಅಕ್ಷರಜ್ಞಾನ



ಬೇಕು. ಅಕ್ಷರಜ್ಞಾನವಿಲ್ಲದೆ ಏನು ಮಾಡಲು ಸಾಧ್ಯವಿಲ್ಲ. ಆ ಅಕ್ಷರಜ್ಞಾನ ಇಲ್ಲದೆ ಹೋಗಿದ್ದರೆ ನನ್ನನ್ನು ಒಳಗೊಂಡಂತೆ ದಲಿತ ಜಗತ್ತಿನಲ್ಲಿ ಮುಂಚೂಣಿಯಲ್ಲಿರುವ ನಾಯಕರೆಲ್ಲ ಈ ಸ್ಥಾನಕ್ಕೆ ಬರಲು ಸಾಧ್ಯವೇ ಇರಲಿಲ್ಲ. ಇದರ ಅರಿವು ಮತ್ತು ಮಹತ್ವ ಅಂಬೇಡ್ಕರ್ ಅವರಿಗೆ ಸ್ಪಷ್ಟವಾಗಿ ತಿಳಿದಿತ್ತು. ಹೀಗಾಗಿ ಅಂಬೇಡ್ಕರ್ ಅವರು ಬರೀ ಶಿಕ್ಷಣ ಪಡೆದರೆ ಸಾಲುದು, ಅದು ಶೀಲದಿಂದ ಕೂಡಿದ ಶಿಕ್ಷಣವಾಗಿರಬೇಕು ಹಾಗೂ ಆ ಶಿಕ್ಷಣವೇತ್ತ ವ್ಯಕ್ತಿಗೆ ಧೈರ್ಯವಿರಬೇಕು. ಇಲ್ಲದಿದ್ದರೆ ಅದನ್ನು ಸಶಕ್ತವಾಗಿ ಪ್ರತಿಪಾದಿಸಲು ಸಾಧ್ಯವಾಗಲಾರದು ಎಂದು ಹೇಳುತ್ತಾರೆ. ಬಾಬಾಸಾಹೇಬರು ಆತ್ಮಾನಂದಕ್ಕೊ ಅಥವಾ ವಿಲಾಸಿ ಜೀವನಕ್ಕಾಗಿಯೋ ಓದಲಿಲ್ಲ. ಅವರು ಓದಿದ್ದು ತಳಸಮುದಾಯಗಳ ಬಿಡುಗಡೆಗಾಗಿ. ಅವರು ನಮ್ಮ ಹಾಗೆ ಸ್ವಾರ್ಥಿ ಆಗಿದ್ದರೆ ಜಗತ್ತಿನ ಎಲ್ಲಾ ದೇಶಗಳಲ್ಲಿಯೂ ಬಂದೊಂದು ಬಂಗಲೆ ಕಟ್ಟಿ, ಆಸ್ತಿ ಮಾಡುವಷ್ಟು ಶಕ್ತಿಯಿತ್ತು. ಆದರೆ, ಅವರು ಪಡೆದ ಶಿಕ್ಷಣವನ್ನು ತನ್ನ ನಾಡಿನ ಶೋಷಿತ ಜನರ ಪ್ರಗತಿಗಾಗಿ ಧಾರೆಯೆರೆದರು. ದಮನಿತ ಸಮುದಾಯಗಳು ಸಾಮಾಜಿಕ ಸಮಾನತೆಯನ್ನು ಸಾಧಿಸಬೇಕಾದರೆ, ಮೊದಲು ಶಿಕ್ಷಣ ಪಡೆಯಬೇಕು. ಆನಂತರ ಆರ್ಥಿಕ ಪ್ರಬಲತೆಯನ್ನು ಸಾಧಿಸಬೇಕು. ಆಗ ಸಾಮಾಜಿಕ ಸಮಾನತೆ ತಾನಾಗಿಯೇ ಲಭಿಸುತ್ತದೆ. ಹೀಗಾಗಿ ಅಕ್ಷರ ಮಾರ್ಗದಿಂದ ಮಾತ್ರವೇ ಆರ್ಥಿಕವಾಗಿ ಸದೃಢವಾದಲು ಸಾಧ್ಯ. ಅಕ್ಷರ ಎನ್ನುವುದು ಅರಿವಿನ ಮಾರ್ಗ. ಇದರಲ್ಲಿ ಜಗತ್ತನೇ

ಗೆಲ್ಲುವ ಸಾಮರ್ಥ್ಯ ಅಡಗಿದೆ. ಈ ಕಾರಣಕ್ಕಾಗಿ ಬಾಬಾಸಾಹೇಬರು ಶಿಕ್ಷಣಕ್ಕೆ ಮೊದಲ ಆದ್ಯತೆಯನ್ನು ನೀಡಿದ್ದಾರೆ.

**ಸಂವಿಧಾನ ಕಾರ್ಯರೂಪಕ್ಕೆ ಬಂದು ಏಳು ದಶಕಗಳು ಕಳೆದರೂ ದಮನಿತ ಸಮುದಾಯಗಳ ಬದುಕಿನಲ್ಲಿ ಗಣನೀಯವಾದ ಬದಲಾವಣೆಗಳು ಕಾಣುತ್ತಿಲ್ಲ. ಹಲ್ಲೆ, ಅಪಮಾನ, ಶೋಷಣೆಗಳು ನಿರಂತರವಾಗಿ ನಡೆಯುತ್ತಲೆ ಇವೆ. ಇದರ ಬಗ್ಗೆ ತಮ್ಮ ನಿಲುವೇನು?**

ಸಂವಿಧಾನ ರಚನಕಾರರಾದ ಬಾಬಾಸಾಹೇಬರೆ ಹೇಳುತ್ತಾರೆ, 'ಸಂವಿಧಾನ ಎಷ್ಟೇ ಒಳ್ಳೆಯದಿದ್ದರೂ ಆಡಳಿತ ಮಾಡುವವರು ಕೆಟ್ಟವರಿದ್ದರೆ ಯಾವುದೇ ಪ್ರಯೋಜನವಾಗದು' ಎಂದು ಆರಂಭಿಕ ದಿನಗಳಲ್ಲಿಯೇ ಹೇಳಿದ್ದಾರೆ. ನಮ್ಮನ್ನು ಆಳುತ್ತ ಬಂದಿರುವ ವರ್ಗಕ್ಕೆ ತಳವರ್ಗಗಳು ಮೇಲೆ ಬರುವ ಅಗತ್ಯವಿಲ್ಲ. ಹೀಗಾಗಿ ಸಂವಿಧಾನದ ಆಶಯಗಳಿಗೆ ಪೆಟು ಬಿದ್ದಿದ್ದು ಎಲ್ಲಿ ಎಂದರೆ ಆಳುವ ವರ್ಗ ಮನಃಸಾಕ್ಷಿಯಿಂದ ಸಂವಿಧಾನವನ್ನು ಪರಿಪಾಲನೆ ಮಾಡದಿರುವಲ್ಲಿ. ಹೀಗಾಗಿ ಇಂದಿಗೂ ಭಾರತದಲ್ಲಿ ಸಂವಿಧಾನ ಪರಿಪೂರ್ಣವಾಗಿತಿ  ಅನುಷ್ಠಾನಗೊಂಡಿಲ್ಲ. ಸಂವಿಧಾನಬದ್ಧವಾಗಿ ದೇಶವನ್ನು ನಡೆಸುವ ವ್ಯಕ್ತಿಯಾಗಲಿ, ಸರ್ಕಾರವಾಗಲಿ ಬಂದಿದ್ದರೆ ನಾವು ಎಪ್ಪತ್ತು ವರ್ಷಗಳ ಕಾಲ ಮೀಸಲಾತಿಯನ್ನು ತೆಗೆದುಕೊಳ್ಳುವ ಪರಿಸ್ಥಿತಿ ನಿರ್ಮಾಣವಾಗುತ್ತಿರಲಿಲ್ಲ.

**ದಲಿತರಿಗೆ ಬೌದ್ಧಧರ್ಮ ಅನಿವಾರ್ಯವೇ?**

ದಲಿತರು ಹಿಂದುಧರ್ಮದ ಶೋಷಣೆ ಹಾಗೂ ಅಪಮಾನದಿಂದ ಬಿಡುಗಡೆಯಾಗಬೇಕಾದರೆ ಈ ನೆಲದ ಮೂಲ ಧರ್ಮವಾದ ಬೌದ್ಧಧರ್ಮ ಸ್ವೀಕಾರದ ಅನಿವಾರ್ಯತೆ ಇದೆ. ಅದು ಬಾಬಾಸಾಹೇಬರು ಕಟ್ಟಿಕೊಟ್ಟ ಸ್ವಾಭಿಮಾನದ ಮಾರ್ಗ ಇದರಿಂದ ಮಾತ್ರವೇ ದಲಿತರು ಸಾವಿರಾರು ವರ್ಷಗಳ ಶೋಷಣೆಯಿಂದ ಬಿಡುಗಡೆ ಪಡೆದುಕೊಂಡು ಸ್ವಾಭಿಮಾನದ ಬದುಕನ್ನು ಕಟ್ಟಿಕೊಳ್ಳಲು ಸಾಧ್ಯವಾಗುತ್ತದೆ. ಹಿಂದೂಧರ್ಮದಲ್ಲಿದ್ದು ಎಷ್ಟೇ ಶಿಕ್ಷಣ, ಆಸ್ತಿ, ಅಂತಸ್ತು ಗಳಿಸಿದರೂ ಸ್ವಾಭಿಮಾನದಿಂದ ಬದುಕಲು ಸಾಧ್ಯವಿಲ್ಲ. ಇದು ಬಾಬಾಸಾಹೇಬರಿಗೆ ಸ್ಪಷ್ಟವಾಗಿ ತಿಳಿದ ಕಾರಣವೇ 'ನಾನು ಹಿಂದೂವಾಗಿ ಹುಟ್ಟಿದ್ದೇನೆ. ಆದರೆ ಹಿಂದೂವಾಗಿ ಸಾಯಲಾರೆ' ಎಂಬ ಮಾತಿನಂತೆ ಬೌದ್ಧಧಮ್ಮಕ್ಕೆ ಮತಾಂತರಗೊಂಡರು. ಈ ಹಾದಿಯಲ್ಲಿ ನಾವೆಲ್ಲ ಸಾಗಬೇಕಾಗಿರುವುದು ಅನಿವಾರ್ಯವಾಗಿದೆ.

**ನೀವು ದಲಿತ ಚಿಂತಕರಾಗಿ, ಅಂಬೇಡ್ಕರ್ ಅನುಯಾಯಿಗಳಾಗಿ ದಲಿತರು ಸ್ವಾಭಿಮಾನದ ಬದುಕನ್ನು ಕಟ್ಟಿಕೊಳ್ಳುವುದಕ್ಕೆ ಪೂರಕವಾಗಿ ನಿಮ್ಮ ಸಂದೇಶವೇನು?**

ಸ್ವಾಭಿಮಾನದ ಬದುಕನ್ನು ಕಟ್ಟಿಕೊಳ್ಳಬೇಕಾದರೆ ಗಂಭೀರವಾಗಿ ಶಿಕ್ಷಣವನ್ನು ಪಡೆದುಕೊಳ್ಳಬೇಕು. ಶಿಕ್ಷಣದ ಜೊತೆಗೆ ಬಾಬಾಸಾಹೇಬರ ತತ್ವ ಸಿದ್ದಾಂತ ಹಾಗೂ ಅವರ ಆದರ್ಶಗಳನ್ನು ಅಳವಡಿಸಿಕೊಂಡಾಗ ಮಾತ್ರ ನಮ್ಮ ಬಿಡುಗಡೆ ಸಾಧ್ಯ ಇದೆಯೇ ಹೊರತು, ಕೇವಲ ಅಂದರೆ ಅಕ್ಷರ ಜ್ಞಾನವೆಂಬ ಶಿಕ್ಷಣದಿಂದಲೂ ಬಿಡುಗಡೆಯ ಸಾಧ್ಯವಿಲ್ಲ. ಬಿಡುಗಡೆ ಎಂದರೆ ನಾನೊಬ್ಬ ನೌಕರನಾಗಬಹುದು. ಆದರೆ, ನಾನೊಬ್ಬ ಸ್ವಾಭಿಮಾನಿಯಾಗಿ ಬದುಕಬೇಕೆಂದರೆ ಶಿಕ್ಷಣದ ಜೊತೆಗೆ ಅಂಬೇಡ್ಕರ್ ಚಿಂತನೆಯ ಅರಿವು ಬೇಕೆಬೇಕು. ಅವರ ಚಿಂತನೆಗಳಲ್ಲಿ ರಾಷ್ಟ್ರೀಯತೆಯಿದೆ, ಜ್ಯಾತ್ಯಾತೀತ ದೃಷ್ಟಿಯೊಂದಿಗೆ ಎಲ್ಲಾ ರೀತಿಯ ಬಂಧನದಿಂದ ಬಿಡುಗಡೆಯಿದೆ. ಬಾಬಾಸಾಹೇಬರ ಸಿದ್ಧಾಂತಗಳ ಅರಿವಿನೊಂದಿಗೆ ಶಿಕ್ಷಣ ಪಡೆದವನು ಇನ್ನೊಬ್ಬರಿಗೆ ಸಹಾಯಕನಾಗಿ, ಇನ್ನೊಬ್ಬರಿಗೆ ಆಸರೆಯಾಗಿ ಬದುಕುತ್ತಾನೆ. ಹೀಗಾಗಿ ಬಾಬಾಸಾಹೇಬರನ್ನು ಅರಿತುಕೊಳ್ಳದ ಶಿಕ್ಷಣ ಪರಿಪೂರ್ಣ ಶಿಕ್ಷಣವಾಗಲಾರದು. ನೀವು ಸೂಕ್ಷ್ಮವಾಗಿ ಗಮನಿಸಿ, ಅಂಬೇಡ್ಕರ್ ಅವರನ್ನು ಒಪ್ಪಿಕೊಳ್ಳದ, ಅವರನ್ನು ಟೀಕೆಗೆ ಒಳಪಡಿಸುವ ಪ್ರತಿಯೊಬ್ಬನಲ್ಲಿಯೂ ವಕ್ರ ದೃಷ್ಟಿಕೋನಗಳು ಜಾಸ್ತಿ ಇರುತ್ತವೆ. ಯಾರು ಅಂಬೇಡ್ಕರ್ ಅವರ ದೃಷ್ಟಿಕೋನವನ್ನು ಒಪ್ಪಿಕೊಂಡಿರುತ್ತಾರೊ ಅವರಲ್ಲಿ ಸಾಮಾಜಿಕ ನ್ಯಾಯ ಅಂತರ್ಗತವಾಗಿರುತ್ತದೆ. ಹೀಗಾಗಿ ದಮನಿತರು ಸ್ವಾಭಿಮಾನದಿಂದ ಬದುಕಬೇಕಾದರೆ ಅಂಬೇಡ್ಕರ್ ಅವರನ್ನು ಒಪ್ಪಿಕೊಂಡು ನಡೆಯಬೇಕು. ಅಂಬೇಡ್ಕರ್ ಎಂದರೆ ಬಿಡುಗಡೆ, ಅದು ಸ್ವಾಭಿಮಾನ, ಅದು ಬುದ್ಧತ್ವ ಅಷ್ಟೇ ಅಲ್ಲ. ಅದರೊಳಗೆ ಜಾಗತಿಕ ನೆಲೆಯ ವೈಚಾರಿಕ ಹಾಗೂ ವೈಜ್ಞಾನಿಕ ತತ್ವ ಅಡಗಿದೆ. ದಲಿತ, ಶೋಷಿತರು, ಮಹಿಳೆಯರ ಅಸ್ಮಿತೆಯೆಂದರೆ ಅದು ಬಾಬಾಸಾಹೇಬ್ ಅಂಬೇಡ್ಕರ್ ಎಂಬುದನ್ನು ಮನದಟ್ಟು ಮಾಡಿಕೊಳ್ಳಬೇಕಾಗಿದೆ.



ಪ್ರೊ.ಎಚ್.ಟಿ.ಪೋತೆಯವರು ಮೂಲತಃ ಜಾನಪದ ಕ್ಷೇತ್ರದ ಸಂಶೋಧಕ, ವಿದ್ವಾಂಸ, ವೈಚಾರಿಕ, ಪ್ರಗತಿಪರ ಚಿಂತಕ, ಸಂವೇದನಾಶೀಲ ಕಥೆಗಾರ, ಕಾದಂಬರಿಕಾರ, ಪ್ರಬಂಧಕಾರ, ವಿಮರ್ಶಕ, ದಲಿತ ಸಾಹಿತ್ಯದ ಗಟ್ಟಿ ಬರಹಗಾರ. ಅವರ ಬರಹ ನಮ್ಮ ನಾಡಿನ ಸಾಂಸ್ಕೃತಿಕ, ಸಾಹಿತ್ಯಕ ಪ್ರಾದೇಶಿಕ ಭಾಷಾ ಸೊಗಡು ಹಾಗೂ ಪ್ರತಿರೋಧದ ಗುಣ ಲಕ್ಷಣಗಳನ್ನು ಹೊಂದಿದೆ.




# ಪ್ರೊ.ಎಚ್.ಟಿ.ಪೋತೆಯವರ ಸಂಪಾದಿತ ಕೃತಿಗಳ ಆಶಯ

ಬುದ್ಧ, ಬಸವ, ಫುಲೆ, ಶಾಹು, ಪೆರಿಯಾರ್, ನಾರಾಯಣಗುರು ಹಾಗೂ ಡಾ.ಬಾಬಾಸಾಹೇಬ್ ಅಂಬೇಡ್ಕರ್ ಮುಂತಾದ ದಾರ್ಶನಿಕರ ವಿಚಾರಧಾರೆ, ದೂರದೃಷ್ಟಿ, ಪ್ರಬುದ್ಧ ಭಾರತದ ಕನಸು, ಸಮಸಮಾಜದ ಚಿಂತನೆಗಳ ಪ್ರಭಾವಕ್ಕೊಳಗಾಗಿ ಬರಹಕ್ಕಿಳಿದವರು ಪ್ರೊ.ಎಚ್.ಟಿ.ಪೋತೆಯವರು. ಕರ್ನಾಟಕದಲ್ಲಿನ ಎಪ್ಪತ್ತರ ದಶಕದ ದಲಿತ ಬಂಡಾಯ ಸಾಹಿತ್ಯ ಚಳುವಳಿ, ಸಾಮಾಜಿಕ ಬದ್ಧತೆಯ ತುಡಿತದ ಹಿಂದೆ ಶೂದ್ರ ಪ್ರಜ್ಞೆಯ ಜಾಗೃತಿ ಇವರನ್ನು ಎಚ್ಚರಿಸುತ್ತಾ ಬಂದಿವೆ. ಕಳೆದ ಮೂರು ದಶಕಗಳಿಂದ ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಾ, ನಿರಂತರವಾಗಿ ಸಾಹಿತ್ಯಕ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ನೂರಾರು ಮೌಲಿಕ ಕೃತಿಗಳನ್ನು ಪ್ರಕಟಿಸಿರುವ ಪ್ರೊ. ಎಚ್.ಟಿ.ಪೋತೆಯವರು ಸಂವೇದನಾಶೀಲ, ಕ್ರಿಯಾಶೀಲ, ಸೃಜನಾತ್ಮಕ ಬರಹಗಾರರಾಗಿ, ಸಂಶೋಧಕರಾಗಿ ದಲಿತ ಸಮುದಾಯಗಳ ನೋವು, ಕಷ್ಟ ಕಾರ್ಪಣ್ಯ, ಅವಮಾನಗಳನ್ನು ಕಂಡುಂಡವರು.

ಪ್ರೊ.ಎಚ್.ಟಿ.ಪೋತೆಯವರ ಸಂಪಾದಿತ ಕೃತಿಗಳನ್ನು ಅವಲೋಕಿಸುವುದು ಈ ಲೇಖನದ ಪ್ರಮುಖ ಉದ್ದೇಶವಾಗಿದೆ. ಪ್ರೊ.ಎಚ್.ಟಿ.ಪೋತೆಯವರು ಮೂಲತಃ ಜಾನಪದ ಕ್ಷೇತ್ರದ ಸಂಶೋಧಕ, ವಿದ್ವಾಂಸ, ವೈಚಾರಿಕ, ಪ್ರಗತಿಪರ ಚಿಂತಕ, ಸಂವೇದನಾಶೀಲ ಕಥೆಗಾರ, ಕಾದಂಬರಿಕಾರ, ಪ್ರಬಂಧಕಾರ, ವಿಮರ್ಶಕ, ದಲಿತ ಸಾಹಿತ್ಯದ ಗಟ್ಟಿ ಬರಹಗಾರ. ಅವರ ಬರಹ ನಮ್ಮ ನಾಡಿನ ಸಾಂಸ್ಕೃತಿಕ, ಸಾಹಿತ್ಯಕ ಪ್ರಾದೇಶಿಕ ಭಾಷಾ ಸೊಗಡು ಹಾಗೂ ಪ್ರತಿರೋಧದ ಗುಣ ಲಕ್ಷಣಗಳನ್ನು ಹೊಂದಿದೆ. ತಳಸಮುದಾಯದ ಪ್ರತಿಭಟನಾತ್ಮಕ ಆರ್ತನಾದಗಳು ಸಂಕೇತಗಳಾಗಿವೆ. ಹೀಗಾಗಿ ಯಾವುದೇ ಕೃತಿ ಸಂಪಾದಿಸಿದರು ಆ ಗುಣವನ್ನು ಉಳಿಸಿಕೊಂಡು ಬಂದಿದ್ದಾರೆ.



**ಡಾ.ಸಂತೋಷಕುಮಾರ ಎಸ್.ಕಂಬಾರ**
ಕನ್ನಡ ಅತಿಥಿ ಪ್ರಾಧ್ಯಾಪಕರು
ಕನ್ನಡ ಅಧ್ಯಯನ ಸಂಸ್ಥೆ
ಗುಲಬರ್ಗಾ ವಿಶ್ವವಿದ್ಯಾಲಯ,
ಕಲಬುರಗಿ
ಮೊ: 9916335656

ಜಾನಪದ ಮತ್ತು ಅಂಬೇಡ್ಕರ್ ವಾದ, ದಲಿತ ಪ್ರಜ್ಞೆಗೆ ಸಂಬಂಧಿಸಿದ, ಪ್ರಾಚೀನ ಕಾವ್ಯಗಳು, ವಚನಗಳು, ಕೀರ್ತನೆಗಳು, ದಲಿತ ಬಂಡಾಯ ಕಥೆ, ಕಾವ್ಯ, ವಿಮರ್ಶಾ ಲೇಖನ, ನಾಟಕಗಳು ಸೇರಿವೆ. ತಮ್ಮ ಅಭಿರುಚಿಗೆ ತಕ್ಕಂತೆ ವಿಷಯಗಳನ್ನು ಆಯ್ದುಕೊಂಡು ಓದುಗರ ಹಾಗೂ ವಿದ್ಯಾರ್ಥಿಗಳ ಹಿತದೃಷ್ಟಿ ಇಟ್ಟುಕೊಂಡು ಕೃತಿಗಳನ್ನು ಸಂಪಾದನೆ ಮಾಡಿದ್ದಾರೆ. 1)ಜನಪದ ಕಲೆ ಸಂಸ್ಕೃತಿ 2)ಜಾನಪದ ಆಯಾಮಗಳು 3)ಜನಪದ ಕಥನ ಗೀತೆಗಳು 4)ಜನಪದ ಕಲೆ:ಸಮಸ್ಯೆ-ಸವಾಲುಗಳು 5)ದಲಿತ ಜಾನಪದ ಸಂಪುಟ 6)ಕಲ್ಯಾಣ ಕರ್ನಾಟಕದ ಜಾನಪದ ವಿದ್ವಾಂಸರು 7)ಕರ್ನಾಟಕ ದಲಿತ ಜಾನಪದ ವಿದ್ವಾಂಸರು 8)ಬೌದ್ಧಕಥಾ ಸಂಪುಟ 9)ಜಾಗತಿಕ ಚಿಂತಕರು:ಬಸವಣ್ಣ10) ರಾಮಾಯಣ ಮಹಾನ್ವೇಷಣಂ: ದರ್ಶನ 11) ಕೋಮು ಸೌಹಾರ್ದತೆ 12)ವಿಚಾರ ಸಾಹಿತ್ಯ 13) ಜ್ಞಾನ ಗಂಗಾ-2 14)ಕಲಾಗಂಗಾ-1 15)ಕಲಾಗಂಗಾ-2 16)ಶಿವಸಂಕಥನ 17)ಕಲ್ಯಾಣ ಕರ್ನಾಟಕದ ಕನ್ನಡ ಪ್ರಜ್ಞೆ 18)ವಿರಾಟಪರ್ವ ಸಂಗ್ರಹ 19)ನಡುಗನ್ನಡ ಕಾವ್ಯ ಸಂಗ್ರಹ 20)ಆಯ್ದ ವೈಚಾರಿಕ ಲೇಖನಗಳು 21)ಆಯ್ದ ಸಣ್ಣಕಥೆಗಳು 22)ದಲಿತ ಬಂಡಾಯ ಕಾವ್ಯ 23) ಆಯ್ದ ಕೀರ್ತನೆಗಳು 24)ಜಾನಪದ ಸಂಗ್ರಹ 25)ಜನಪದ ಕಲೆಗಳ ಗೀತ ಸಂಗ್ರಹ 26)ಕನ್ನಡ ದಲಿತ ಸಾಹಿತ್ಯ-1 27)ದಲಿತ ಸಾಹಿತ್ಯ ಸಂಪುಟ ಜಾನಪದ ಮುಂತಾದ ಐವತ್ತಕ್ಕೂ ಹೆಚ್ಚು ಕೃತಿಗಳು ಇವರ ಸಂಪಾದಕತ್ವದಲ್ಲಿ ಪ್ರಕಟಗೊಂಡಿವೆ.

ಕಲಾಗಂಗಾ-1,2: ಈ ಕೃತಿಗಳು ಸಂಶೋಧನೆ ವಿಮರ್ಶಾ ದೃಷ್ಟಿಯಿಂದ ಹಾಗೂ ದಾಖಲೆಯ ದೃಷ್ಟಿಯಿಂದ ಮಹತ್ವಪೂರ್ಣವಾಗಿವೆ. ಸಾಹಿತ್ಯ ವಿಮರ್ಶೆ ಹಾಗೂ ಸಂಶೋಧನೆಗೆ ಸಂಬಂಧಿಸಿದ ಯುವ ಸಂಶೋಧಕರಿಗೆ ಪ್ರೋತ್ಸಾಹ ನೀಡಲು ಅವರು ಶೋಧಿಸಿ ಬರೆದ ಸಂಶೋಧನ ಲೇಖನಗಳನ್ನು ಆಯ್ಕೆ ಮಾಡಿ ಸಂಪಾದಿಸಿ ಪ್ರತಿ ವರ್ಷ ಪ್ರಕಟಿಸುತ್ತ ಬಂದಿದೆ. ಇದು




ಪಿಎಚ್.ಡಿ. ಅಧ್ಯಯನ ಕೈಗೊಂಡಿರುವ ವಿದ್ಯಾರ್ಥಿಗಳಿಗೆ ಉಪಯುಕ್ತವಾದ ಯೋಜನೆಯಾಗಿದೆ.

**ಆಯ್ದ ಸಣ್ಣಕಥೆಗಳು:** ಹೊಸಗನ್ನಡ ಸಾಹಿತ್ಯದಲ್ಲಿ ಕಥಾಸಾಹಿತ್ಯ ಉಳಿದ ಸಾಹಿತ್ಯ ಪ್ರಕಾರಗಳಿಗಿಂತಲೂ ವ್ಯಾಪಕವಾಗಿ ಬೆಳೆದಿದೆ. ನವೋದಯ, ಪ್ರಗತಿಶೀಲ, ನವ್ಯ ಹಾಗೂ ದಲಿತ ಬಂಡಾಯ ಕಾಲಘಟ್ಟಗಳು ಪ್ರಮುಖವಾದವುಗಳು. ದಲಿತ ಬಂಡಾಯೋತ್ತರ ಘಟ್ಟದಲ್ಲಿ ಪ್ರಕಟವಾದ ಸಾವಿರಾರು ಕಥೆಗಳಲ್ಲಿ ಕೆಲವನ್ನು ಆಯ್ದುಕೊಳ್ಳುವುದು ತುಂಬಾ ಕಷ್ಟದ ಕೆಲಸ. ಇಂತಹ ಸಂದಿಗ್ಧ ಸಂದರ್ಭದಲ್ಲಿ ಪ್ರೊ. ಎಚ್.ಟಿ.ಪೋತೆಯವರು ದಲಿತರು ನೂರಾರು ವರ್ಷಗಳಿಂದ ಧನಿಕರ, ಮೇಲ್ವರ್ಗದವರ ಶೋಷಣೆಗೆ ಗುರಿಯಾಗಿ, ವರ್ಣ ವ್ಯವಸ್ಥೆ ಆಧಾರಿತ ಜಾತಿ ಪದ್ಧತಿಯ ಕಾರಣಕ್ಕಾಗಿ ಕೆಳಸಮುದಾಯಗಳು ನಲುಗಿ ಹೋಗಿವೆ. ಇಚಿಥಾ ಸಮಾಜದ ಜನರು ಅನುಭವಿಸಿದ ನೋವು-ಅವಮಾನಗಳಿಗೆ ಸ್ಪಂದಿಸಿ ಬರೆದದ್ದು ದಲಿತ ಸಾಹಿತ್ಯ ರೂಪ ಪಡೆಯಿತು.ದೇವನೂರು ಮಹಾದೇವ, ಸಿದ್ಧಲಿಂಗಯ್ಯ, ಮೂಡ್ನಾಕೂಡು ಚಿನ್ನಸ್ವಾಮಿ, ಮನ ಜವರಯ್ಯ, ಮೊಗಳ್ಳಿ ಗಣೇಶ, ಮಾಲಗತ್ತಿ ಬರಗೂರು, ಚೆನ್ನಣ್ಣ ವಾಲೀಕಾರ, ಎಚ್.ಟಿ.ಪೋತೆ, ಕಾಳೇಗೌಡ ನಾಗವಾರ, ಗೀತಾ ನಾಗಭೂಷಣ ಮುಂತಾದವರು ಕಥಾ ಸಾಹಿತ್ಯವನ್ನು ಸಮೃದ್ಧವಾಗಿ ಬೆಳೆಸುತ್ತಿದ್ದಾರೆ ಈ ಕಥೆಗಳ ಆಶಯ ಯುವಪೀಳಿಗೆ ಅರ್ಥೈಸಿಕೊಳ್ಳಲಿ ಎಂಬ ಮಹತ್ವಕಾಂಕ್ಷೆಯಿಂದ ಸಂಪಾದಿಸಿದ್ದಾರೆ. ಈ ಕೃತಿ 2009ರಲ್ಲಿ ಕನ್ನಡ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗೆ ಪಠ್ಯವಾಗಿದೆ.

**ಆಯ್ದ ವೈಚಾರಿಕ ಲೇಖನಗಳು:** ವಿಚಾರವಂತಿಕೆ ಮನುಷ್ಯನ ಸ್ವತ್ತು. ಇತರ ಪ್ರಾಣಿಗ ವರ್ಗದಿಂದ ಅವನನ್ನು ಬೇರ್ಪಡಿಸುವ ಮತ್ತು ಜೀವಸಂಕುಲದಲ್ಲಿ ಪ್ರಬಲವನ್ನಾಗಿಸುವ ವಿಶಿಷ್ಟ ಗುಣಗಳು ಬುದ್ಧಿವಂತಿಕೆ, ವಿಚಾರವಂತಿಕೆಗಳು. ವೈಚಾರಿಕತೆಯನ್ನು ಶರಣರ ಪರಿಭಾಷೆಯಲ್ಲಿ ಜಂಗಮ ಎಂದು ಹೇಳಿರಬಹುದು. ವೈಚಾರಿಕತೆ ಎಂಬುದು ಅಂತಃಶೋಧ, ಚಿಂತನಶೀಲತೆ, ಅದು ಮನುಷ್ಯನ ಬದುಕಿನ ಆರಂಭದಿಂದ ಅಂತ್ಯದವರೆಗೆ ಎಲ್ಲ ವಸ್ತುವಿಷಯ ಮತ್ತು ಸಂಧರ್ಭಗಳು ವೈಚಾರಿಕ ತೆಕ್ಕೆಯಲ್ಲಿ ಬರುತ್ತವೆ. ಅದರಲ್ಲಿ ವರ್ಗ, ವರ್ಣ, ಜಾತಿ,ಲಿಂಗ, ಅಂತಸ್ತು, ಶಿಕ್ಷಣ, ಸಾಹಿತ್ಯ ಮುಂತಾದವುಗಳಿವೆ. ದಾರ್ಶನಿಕರು, ಸಮಾಜ ಸುಧಾರಕರಾದ ಮಹಾತ್ಮ ಗಾಂಧಿ, ಡಾ.ಬಿ.ಆರ್.ಅಂಬೇಡ್ಕರ್, ರಾಮಮನೋಹರ ಲೋಹಿಯಾ, ಮತ್ತು ರಾಷ್ಟ್ರಕವಿ ಕುವೆಂಪು ಮುಂತಾದವರ ವಿಚಾರ ಪ್ರಧಾನವಾದ ಹದಿಮೂರು ಲೇಖನಗಳನ್ನು ಸಂಗ್ರಹಿಸಿ ಕೊಟ್ಟಿದ್ದಾರೆ. ಈ ಕೃತಿ 2010ರಲ್ಲಿ ಸ್ನಾತಕೋತ್ತರ ಕನ್ನಡ ವಿದ್ಯಾರ್ಥಿಗಳಿಗೆ ಪಠ್ಯವಾಗಿದೆ.

**ಜಾನಪದ ಆಯಾಮಗಳು:**

ಗುಲಬರ್ಗಾವಿಶ್ವವಿದ್ಯಾಲಯದ ಜಾನಪದ ವಿಭಾಗದ ಬೆಳ್ಳಿಹಬ್ಬದ ಸವಿನೆನಪಿಗಾಗಿ ಕನ್ನಡ ಅಧ್ಯಯನ ಸಂಸ್ಥೆಯು ಈ ಕೃತಿಯನ್ನು ಪ್ರಕಟಿಸಿದೆ. ಡಾ. ಎಚ್. ಟಿ. ಪೋತೆಯವರು ಈ ಕೃತಿಯ ಸಂಪಾದಕರಾಗಿದ್ದಾರೆ. ಈ ಕೃತಿ ಜಾನಪದದ ವಿವಿಧ ಕ್ಷೇತ್ರಗಳಿಗೆ ಸಂಬಂಧಿಸಿದ 39 ಲೇಖನಗಳನ್ನು ಒಳಗೊಂಡಿದೆ. ಜಾನಪದ ಕ್ಷೇತ್ರದಲ್ಲಿ ಅಧ್ಯಯನ ಮಾಡುವವರಿಗೆ ಇದೊಂದು ಆಕರ ಗ್ರಂಥವಾಗಿದೆ.

**ಜನಪದ ಕಲೆಗಳ ಗೀತ ಸಂಗ್ರಹ:**

ಜನಪದ ಸಮಾಜವು ಆದರ್ಶ, ಶೀಲ, ಕೌಶಲ್ಯ ಹಾಗೂ ಮೌಲ್ಯಭರಿತ ಜೀವನಕ್ಕೆ ಮಾರ್ಗದರ್ಶನ ತೋರುವಂತವುಗಳಾಗಿವೆ. ಇಲ್ಲಿ ಕಲೆ ಪ್ರಧಾನವಾಗಿದ್ದು, ವಾದ್ಯ, ನೃತ್ಯ ಹಾಗೂ ಸಂಕೀರ್ಣ ಹಾಡುಗಳು. ನ್ಯಾಯ, ನೀತಿ, ತ್ಯಾಗ, ಪಾವಿತ್ರ್ಯತೆ, ಸಹಬಾಳ್ವೆ, ಧರ್ಮ ಕುರಿತಾದ ವಿಚಾರಗಳನ್ನು ಗೌರವಿಸುವುದರ ಮೂಲಕ ಜನಪದ ಪ್ರದರ್ಶನ ಕಲಾ ಮೇಳಗಳು ಸಮಾಜವನ್ನು ಒಳ್ಳೆಯ ಮಾರ್ಗದಲ್ಲಿ ನಡೆಸಿಕೊಂಡು ಬಂದಿವೆ. ಇಂತಹ ಏಕತಾರಿ ಹಾಡು, ದುಂದುಮೆ ಹಾಡು, ಡೊಳ್ಳಿನ ಹಾಡು, ಕಂಸಾಳೆ ಹಾಡು, ಮೋಹರಂ ಹಾಡು, ಕೋಲಾಟದ ಹಾಡು, ಗೀಗೀ ಹಾಡು, ಮತ್ತು ಗೊಂದಲಿಗರ ಹಾಡು ಮುಂತಾದವುಗಳನ್ನು ಸಂಗ್ರಹಿಸಿದ್ದಾರೆ. ಈ ಕೃತಿ 2010ರಲ್ಲಿ ಸ್ನಾತಕೋತ್ತರ ಕನ್ನಡ ವಿದ್ಯಾರ್ಥಿಗಳಿಗೆ ಪಠ್ಯವಾಗಿದೆ.

**ಕಲ್ಯಾಣ ಕರ್ನಾಟಕ ಜಾನಪದ ವಿದ್ವಾಂಸರು:** ಕಲ್ಯಾಣ ಕರ್ನಾಟಕ ಭಾಗದ ಜಾನಪದ ವಿದ್ವಾಂಸರು ನೀಡಿದ ಮಹತ್ವದ ಸಾಧನೆ, ಸಂಶೋಧನೆ, ಸಾಹಿತ್ಯಕ ಕೊಡುಗೆಯನ್ನು ಇಲ್ಲಿ ಗುರುತಿಸಲಾಗಿದೆ. ಜಾನಪದ ಸಾಧಕರನ್ನು ಪರಿಚಯಿಸುವ ಪ್ರಥಮ ಕೃತಿಯಾಗಿದೆ. ಇದರಲ್ಲಿ ಕಲ್ಯಾಣ ಕರ್ನಾಟಕದ ಮೂವತ್ತು ಜನ ಜಾನಪದ ವಿದ್ವಾಂಸರ ಸಾಹಿತ್ಯ ಸಾಧನೆಯ ಪರಿಚಯವಿದೆ.

**ಕರ್ನಾಟಕದ ದಲಿತ ಜಾನಪದ ವಿದ್ವಾಂಸರು:** ಕರ್ನಾಟಕದ ದಲಿತ ಜಾನಪದ ವಿದ್ವಾಂಸರು ಕನ್ನಡ ಸಾರಸ್ವತ ಲೋಕಕ್ಕೆ ನೀಡಿದ ಮಹತ್ವದ ಸಾಧನೆ, ಸಾಹಿತ್ಯಕ ಸಂಶೋಧನೆ, ವಿದ್ವತ್ ಪೂರ್ಣ ಕೊಡುಗೆಯನ್ನು ಇಲ್ಲಿ ಗುರುತಿಸಲಾಗಿದೆ. ಕರ್ನಾಟಕದ ದಲಿತ ಜಾನಪದ ಸಾಧಕರನ್ನು ಪರಿಚಯಿಸುವ ಪ್ರಥಮ ಕೃತಿಯಾಗಿದೆ. ಇದರಲ್ಲಿ ಕರ್ನಾಟಕದ ಮೂವತ್ತು ಜನ ಜಾನಪದ ವಿದ್ವಾಂಸರ ಸಾಹಿತ್ಯ ಸಾಧನೆಯ ಪರಿಚಯವಿದೆ.

**ಆಯ್ದ ಕೀರ್ತನೆಗಳು:** ಕನ್ನಡ ಸಾಹಿತ್ಯದಲ್ಲಿ ವಚನ ಸಾಹಿತ್ಯ ಮತ್ತು ಕೀರ್ತನ ಸಾಹಿತ್ಯಕ್ಕೆ ಸಿಕ್ಕ ಮನ್ನಣೆ ಬೇರಾವ ಪ್ರಕಾರಕ್ಕೆ ದೊರಕಿಲ್ಲ. ಬಸವಾದಿ ಶರಣರು ಚಿಂತಿಸಿದಂತೆ ಕನಕದಾಸ, ಪುರಂದರ ದಾಸರು ಮನುಷ್ಯ ಮುಖಿಯಾಗಿ ಆಲೋಚಿಸಿ ಸಮಸಮಾಜದ ನಿರ್ಮಾಣದ ಕನಸನ್ನು ಬಿತ್ತಿದರು. ಭಕ್ತನ ಭಕ್ತಿಯ ತನ್ಮಯತೆ, ಭಕ್ತನ ಪರವಶತೆ, ತೀವ್ರವಾದ ಭಾವಗಳು ಜನಸಾಮಾನ್ಯರನ್ನು ಜಾಗೃತಗೊಳಿಸುವ ನಿಟ್ಟಿನಲ್ಲಿ ಕೀರ್ತನೆಗಳು ನಲಿದಾಡಿದವು. ಈ ಕೃತಿಯಲ್ಲಿ ಆರು ಜನ ಕೀರ್ತನೆಕಾರರ ಆಯ್ದ ಕೀರ್ತನೆಗಳು ಮೂಡಿಬಂದಿವೆ. ಇದು ಸ್ನಾತಕೋತ್ತರ ಕನ್ನಡ ಪ್ರಥಮ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ ಪಠ್ಯವಾಗಿದೆ.

**ಜಾಗತೀಕ ಚಿಂತಕ: ಬಸವಣ್ಣ:** ಕನ್ನಡ ಭಾಷಾಭಿವೃದ್ಧಿ ಯೋಜನೆಯಲ್ಲಿ ಪ್ರಕಟಿಸಲಾದ ಕೃತಿ. ಈ ಕೃತಿಯು ವಚನಾಂದೋಲನ ಕೇವಲ ಸಾಹಿತ್ಯಕ ನೆಲೆಯಲ್ಲಿ

ಗುರುತಿಸಬಾರದು. ಮಾನವೀಯತೆ, ಸಕಲಜೀವಿಗಳ ಲೇಸನ್ನೇ ಬಯಸುವ ವಿಶಾಲ ಹೃದಯವಂತಿಕೆಯ ಚೌಕಟ್ಟಿನಲ್ಲಿ ಗುರುತಿಸಬೇಕು. ಈ ಕೃತಿ ವಚನ ಚಳವಳಿಯ ಧೋರಣೆ ಮತ್ತು ಆಶಯವನ್ನು ತಿಳಿದುಕೊಳ್ಳಲು ಸಾಧ್ಯವಾಗುತ್ತದೆ. ಈ ಕೃತಿಯಲ್ಲಿ ಸಂಕಲಿತವಾಗಿರುವ ವಚನಗಳು ಬೂಟಾಟಿಕೆಯ ಭಕ್ತರನ್ನು, ಢಾಂಬಿಕ ಭಕ್ತರನ್ನು, ಅಂತರಂಗ ಶುದ್ಧವಿಲ್ಲದವರನ್ನು ವಿಷಯ ಲಂಪಟರನ್ನು ತರಾಟೆಗೆ ತೆಗೆದುಕೊಳ್ಳುತ್ತವೆ. ವಚನಗಳ ಸಾಮಾಜಿಕ ಆಯಾಮವನ್ನು ಅರಿಯಲು ಈ ಕೃತಿಯಲ್ಲಿನ ವಚನಗಳು ವಿಷಯ ವಸ್ತು ಪೂರಕ ಸಾಮಗ್ರಿಗಳಾಗಿವೆ. ವಚನ ಸಾಹಿತ್ಯದ ಸಂಶೋಧಕರಿಗೆ, ವಿಮರ್ಶಕರಿಗೆ ಇದೊಂದು ಉಪಯುಕ್ತ ಆಕರ ಗ್ರಂಥವಾಗಿದೆ. ಒಟ್ಟು ಆಶಯವನ್ನು ಕಟ್ಟಿಕೊಡುವಲ್ಲಿ ಈ ಕೃತಿ ಸಫಲವಾಗಿದೆ ಎಂದು ಹೇಳಬಹುದು.

**ಕನ್ನಡ ದಲಿತ ಸಾಹಿತ್ಯ ಸಂಪುಟ–1:** ಬಾಬಾ ಸಾಹೇಬ ಡಾ.ಬಿ.ಆರ್.ಅಂಬೇಡ್ಕರ್ ಅವರ 125ನೆಯ ಜಯಂತ್ಯೋತ್ಸವದ ಅಂಗವಾಗಿ ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆ ಹಾಗೂ ಪ್ರಸಾರಾಂಗದ ಸಂಯುಕ್ತಾಶ್ರಯದಲ್ಲಿ 21,22, ಹಾಗೂ 23 ಜನೇವರಿ 2017ರಂದು ಮೂರು ದಿನಗಳ ಕಾಲ ನಡೆದ ಕನ್ನಡ ದಲಿತ ಸಾಹಿತ್ಯ ಕುರಿತು ರಾಷ್ಟ್ರೀಯ ವಿಚಾರ ಸಂಕಿರಣ ಹಾಗೂ ಚಿತ್ರಕಲಾ ಪ್ರದರ್ಶನ, ಪುಸ್ತಕ ಮಾರಾಟ ಮೇಳ ಕಾರ್ಯಕ್ರಮದಲ್ಲಿ ಮಂಡಿತವಾದ ಪ್ರಬಂಧಗಳನ್ನು ಪುಸ್ತಕ ರೂಪದಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದ ಪ್ರಸಾರಾಂಗ ಪ್ರಕಟಿಸಿದೆ. ಈ ಕೃತಿ ಮೂವತ್ತೆಂಟು ಲೇಖನಗಳನ್ನು ಒಳಗೊಂಡಿದೆ. ಇದರಲ್ಲಿನ ಲೇಖನಗಳು ಸಾಮಾಜಿಕ ನ್ಯಾಯ, ಸ್ವಾಭಿಮಾನದ ನೆಲೆಯಲ್ಲಿ ದಲಿತ ಸಂಸ್ಕೃತಿ, ಚಿಂತನೆಯು ಅಕ್ಷರದ ಮೂಲಕ ಹಕ್ಕೋತ್ತಾಯದ ರೂಪ ತಳೆದು ಕನ್ನಡ ಸಾಹಿತ್ಯಕ್ಕೆ ಹೊಸನೆಲೆಯನ್ನು ಒದಗಿಸಿತು. ಅದರಿಂದಾಗಿ ಕನ್ನಡ ದಲಿತ ಸಾಹಿತ್ಯದ ಸಂವೇದನೆ ಸಂಸ್ಕೃತಿ ಕಾವ್ಯ, ಕಥೆ, ವಿಚಾರ, ವಿಮರ್ಶೆ, ಆತ್ಮಕಥೆ ಮುಂತಾದ ಪ್ರಕಾರಗಳಲ್ಲಿ ಚಿಗುರೊಡೆದು ಸಮೃದ್ಧವಾಗಿ ಬೆಳೆದು ನಿಂತಿದೆ. ಈ ಕಾರ್ಯಕ್ರಮದ ಮೂರು ದಿನದ ಚಿಂತನ–ಮಂಥನ, ಚರ್ಚೆ, ಸಂವಾದಗಳು, ಗೋಷ್ಠಿಗಳ, ಪ್ರಬಂಧ ಮಂಡನೆಗಳ ಲೇಖನಗಳ ಗುಚ್ಛ ಈ ಕೃತಿಯಾಗಿದೆ

**ದಲಿತ ಸಾಹಿತ್ಯ ಸಂಪುಟ, ಜಾನಪದ:** ಇದು ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರಿನಿಂದ ಪ್ರಕಟವಾದ ಕೃತಿ. ಜಾನಪದ ಜಗತ್ತು ಅದು ಜನರ ಸ್ವತ್ತು. ಮೌಖಿಕತೆ ಇದರ ಮೂಲ, ಇದು ಮಾನವ ಸಮಾಜದ ಒಟ್ಟು ಬದುಕನ್ನು ಪ್ರತಿನಿಧಿಸುತ್ತದೆ. ಜಾನಪದ ನಿರಾಭರಣ ಸುಂದರಿ, ಬಡವರ, ದುಡಿಯುವ ವರ್ಗದ, ಹೆಂಗಳೆಯರದು. ಜಾನಪದ ಜಗತ್ತಿನ ಬಗೆಗೆ ಹಿರಿಯ ತಲೆಮಾರಿನಿಂದ ಕಿರಿಯ ತಲೆಮಾರಿನ ಜಾನಪದ ವಿದ್ವಾಂಸರ ಲೇಖನಗಳು ಜನಪದ ಸಂಸ್ಕೃತಿ, ಕ್ರೀಡೆ, ನಂಬಿಕೆ, ಕಲೆ, ಸಾಹಿತ್ಯ ವಿವಿಧಬುಡಕಟ್ಟು ನೆಲೆಗಳ ಅಧ್ಯಯನ, ಜಾನಪದ ಮತ್ತು ಜಾಗತೀಕರಣ, ಕೃಷಿಗೆ ಸಂಬಂಧಿಸಿದ ಮಹತ್ವದ ಲೇಖನಗಳನ್ನು ಸಂಕಲಿಸಿ ವ್ಯಾಪಕ ಹರವು ಚಿಂತನ–ಮಂಥನ, ವಿಮರ್ಶಾ ದೃಷ್ಟಿಕೋನದಿಂದ ರಚನೆಗೊಂಡ ಮೌಲಿಕ ಲೇಖನಗಳ ಸಂಗ್ರಹ ಇದಾಗಿದೆ.

**ಪ್ರಧಾನ ಸಂಪಾದಕದ ಪಠ್ಯಪುಸ್ತಕಗಳು:**

ಗುಲಬರ್ಗಾ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿ, ಅಧ್ಯಯನ ಮಂಡಳಿಯ ಸದಸ್ಯರಾಗಿ, ಅಧ್ಯಕ್ಷರಾಗಿ, ಕಲಾನಿಕಾಯದ ಡೀನರಾಗಿ ಇವರು ಹಲವು ವರ್ಷಗಳವರೆಗೆ ಸ್ನಾತಕ ಮತ್ತು ಸ್ನಾತಕೊತ್ತರ ತರಗತಿಗಳಿಗೆ ಹಲವಾರು ಪಠ್ಯಕೃತಿಗಳನ್ನು ಸಂಪಾದಿಸಿದ್ದಾರೆ. ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾಗಿ ಪ್ರಧಾನ ಸಂಪಾದಕರಾಗಿ ನೂರಾರು ಕೃತಿಗಳನ್ನು ಪ್ರಕಟಿಸಿದ್ದಾರೆ. ಈ ಕೃತಿಗಳ ವೈಶಿಷ್ಟ್ಯವೆಂದರೆ ದೀರ್ಘವಾದ ಪ್ರಸ್ತಾವನೆಗಳು, ಮಾಹಿತಿ ಪೂರ್ಣವಾದ ಅನುಬಂಧಗಳು ಹಾಗೂ ಸಮಕಾಲೀನ ಸಂದರ್ಭಕ್ಕೆ ಅನ್ವಯವಾಗಬಹುದಾದ ಮೌಲಿಕ ಚಿಂತನೆ, ಸರ್ವಕಾಲಿಕ ಸತ್ಯ, ಮಾನವೀಯ ಗುಣ ಲಕ್ಷಣಗಳನ್ನು, ನೈತಿಕ ಮೌಲ್ಯವನ್ನು ಸಾರುವಂತಹ ರಾಮಾಯಣ, ಮಹಾಭಾರತದಂತ ಪ್ರಾಚೀನ ಕಾವ್ಯಗಳನ್ನು ಮತ್ತು ಛಂದಸ್ಸು, ವ್ಯಾಕರಣ ಕೃತಿಗಳನ್ನು, ಹನ್ನೆರಡನೆ ಶತಮಾನದ ಕಲ್ಯಾಣ ನಾಡಿನ ಬಸವಾದಿ ಶರಣರ ತತ್ವ ಸಿದ್ಧಾಂತ, ಆದರ್ಶಪ್ರಾಯ ವಿಚಾರ, ಜನಪರ–ಜೀವಪರ ಚಿಂತನೆ ಹಾಗೂ ಸಮಸಮಾಜ ನಿರ್ಮಾಣದ ಆಶಯಗಳುಳ್ಳ ಶರಣರ ತಾತ್ವಿಕ ನೆಲೆಗಳು, ನಡೆ–ನುಡಿಗಳು ಯುವಕರಿಗೆ ಸ್ಫೂರ್ತಿ ನೀಡಿ, ಪ್ರಗತಿಪರ ಪ್ರಜ್ಞೆ ಮೂಡಲಿ ಎಂಬ ಸದುದ್ದೇಶದಿಂದ ನಡುಗನ್ನಡ ಕಾವ್ಯ ಕೃತಿಗಳನ್ನು, ವೈವಿಧ್ಯತೆಯುಳ್ಳ ಮಹತ್ವದ ವಚನಗಳನ್ನು, ದಾಸರ ತತ್ವಪದ, ಕೀರ್ತನೆಗಳನ್ನು, ಆಧುನಿಕ ಕಾಲಘಟ್ಟದ ನವೋದಯ, ಪ್ರಗತಿಶೀಲ, ನವ್ಯ ಮತ್ತು ದಲಿತ ಬಂಡಾಯ ಕಾಲಘಟ್ಟದ ಕಾವ್ಯ, ಕಥೆ, ಕಾದಂಬರಿ, ಜೀವನ ಚರಿತ್ರೆ, ಆತ್ಮಕಥೆ, ಪ್ರವಾಸ ಕಥನ, ಕಥನ ಗೀತೆ, ಜಾನಪದ ಗೀತೆಗಳು, ಸಂಗ್ರಹಿಸಿ ಸ್ನಾತಕ ಮತ್ತು ಸ್ನಾತಕೋತ್ತರ ವಿವಿಧ ವಿದ್ಯಾರ್ಥಿಗಳ ಬೌದ್ಧಿಕಮಟ್ಟ ಬೆಳೆದು ಭವಿಷ್ಯದ ಬದುಕು ವಿಕಾಸವಾಗಲಿ ಎಂಬ ಹಿತದೃಷ್ಟಿ ಇದೆ.




**ಪ್ರಧಾನ ಸಂಪಾದಕತ್ವದಲ್ಲಿ ಪ್ರಕಟಗೊಂಡ ಪ್ರಮುಖ ಕೃತಿಗಳು:** 1)ಜನಪದ ವೈವಿಧ್ಯ ಸಾಹಿತ್ಯ 2)ಬೌದ್ಧಕಾವ್ಯ ಸಂಪುಟ 3)ಬೌದ್ಧನಾಟಕ ಸಂಪುಟ 4)ಬೌದ್ಧಸಂಶೋಧನಾ ಸಂಪುಟ 5)ಬೌದ್ಧಮಾನವಿಕ ಸಂಪುಟ 6)ಬೌದ್ಧವಿಮರ್ಶಾ ಸಂಪುಟ 7)ಬಸವಣ್ಣ 8)ಅಲ್ಲಮಪ್ರಭು 9)ಚೆನ್ನಬಸವಣ್ಣ 10)ಶೂನ್ಯಸಂಪಾದನೆ 11)ವಚನಕಾವ್ಯ ಚಿಂತನೆ 12)ತಳವರ್ಗದ ವಚನಕಾರರು 13)ಉರಿಲಿಂಗಪೆದ್ದಿ–ಕಾಳವ್ವೆ 14)ವಚನಕಾರ್ತಿಯರು 15) ಮಡಿವಾಳ ಮಾಚಿದೇವ 16)ಶರಣ:ಜಾನಪದ 17)ಹಳಗನ್ನಡ ಕಾವ್ಯಸಂಗ್ರಹ 18)ಶಬ್ದಮಣಿ ದರ್ಪಣ 19)ಯಶೋಧರ ಚರಿತೆ ಸಂಗ್ರಹ 20)ಕನ್ನಡ ಭಾಷಾವಿಜ್ಞಾನ 21)ಚಂಪೂ ವೈವಿಧ್ಯ 22)ನಾಗವರ್ಮನ ಕಾದಂಬರಿ ಸಂಗ್ರಹ 23)ಹಳಗನ್ನಡ ಕಾವ್ಯ ಸಂಗ್ರಹ 24)ನಡುಗನ್ನಡ ಕಾವ್ಯ ಸಂಗ್ರಹ 25)ಹೊಸಗನ್ನಡ ಕಾವ್ಯ ಸಂಗ್ರಹ 26)ಹೊಸಗನ್ನಡ ಕಥಾ ಸಂಗ್ರಹ 27) ಆಧುನಿಕ ವಚನಗಳ ಸಂಗ್ರಹ ಮುಂತಾದ ಕೃತಿಗಳು ಇವರ ಪ್ರಧಾನ ಸಂಪಾದಕತ್ವದಲ್ಲಿ ಪ್ರಕಟಗೊಂಡಿವೆ.

ಹೀಗೆ ಪ್ರೊ.ಎಚ್.ಟಿ.ಪೋತೆಯವರು ಪ್ರಾಚೀನ, ನಡುಗನ್ನಡ, ಆಧುನಿಕ ಕನ್ನಡ ಕಾವ್ಯ, ಕಥೆ, ಕಾದಂಬರಿ, ನಾಟಕ, ಜನಪದ, ವಚನಸಾಹಿತ್ಯ, ಮೀಮಾಂಸೆ, ದಲಿತ ಸಾಹಿತ್ಯ, ಛಂದಸ್ಸು, ವ್ಯಾಕರಣ, ವೈಚಾರಿಕತೆ, ವಿಮರ್ಶೆ, ಜೀವನ ಕಥನ, ಸಾಂಸ್ಕೃತಿ ಕಥನ, ಸಂಶೋಧನೆಗೆ ಸಂಬಂಧಪಟ್ಟ ವೈವಿಧ್ಯಮಯ ಸಾಹಿತ್ಯ ಕೃತಿಗಳನ್ನು ಸಂಪಾದಿಸಿದ್ದಾರೆ. ಅವರ ಕ್ರಿಯಾಶೀಲ ವ್ಯಕ್ತಿತ್ವಕ್ಕೆ ಈ ಎಲ್ಲಾ ಕೃತಿಗಳು ಸಾಕ್ಷಿಯಾಗಿವೆ. ಇವರ ಕೃತಿಗಳು ಹೊಸ ಸಂಗತಿಗಳನ್ನು ಪ್ರಸ್ತುತ ಸಂದರ್ಭಕ್ಕೆ ಅನ್ವಯವಾಗುವಂತಹ ಸಾಂಸ್ಕೃತಿಕ, ಸಾಹಿತ್ಯಕ, ಮೌಲ್ಯ ಹಿರಿಮೆಯನ್ನು ತಿಳಿಸುತ್ತವೆ ಎಂಬುದರಲ್ಲಿ ಎರಡು ಮಾತಿಲ್ಲ.

# ದಲಿತ ಸಾಹಿತ್ಯ ಸಮ್ಮೇಳದನ ಸರ್ವಾಧ್ಯಕ್ಷ

## ಪ್ರೊ.ಎಚ್.ಟಿ.ಪೋತೆ



**ಸೃಜನ ಹಾಗೂ ಸೃಜನೇತರ ಕೃತಿಗಳಿಗೆ ಅವರು ಪಡೆದ ಬಹುಮಾನ, ಪ್ರಶಸ್ತಿ, ಪ್ರಶಂಸೆಗಳ ಸಂಖ್ಯೆ ತುಂಬಾ ದೊಡ್ಡದಿದೆ. ಇಂಡಿ ತಾಲೂಕು ಕನ್ನಡ ಸಾಹಿತ್ಯ ಸಮ್ಮೇಳನ, ವಿಜಯಪುರ ಜಿಲ್ಲಾ ದಲಿತ ಸಾಹಿತ್ಯ ಸಮ್ಮೇಳನ ಹಾಗೂ ಈಗ ೨೦೨೩ರ ಜುಲೈ ೨೯ ಮತ್ತು ೩೦ ರಂದು ವಿಜಯಪುರದಲ್ಲಿ ನಡೆಯುತ್ತಿರುವ ೧೦ನೇ ಅಖಿಲ ಭಾರತ ದಲಿತ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷತೆ ಇವೆಲ್ಲವು ಅವರ ಪ್ರತಿಭೆಗೆ ಸಂದ ಗೌರವ**



**ಡಾ. ಶ್ರೀಶೈಲ ನಾಗರಾಳ**
ಸಹ ಪ್ರಾಧ್ಯಾಪಕರು
ಕನ್ನಡ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ,
ಎಂ.ಎಸ್.ಇರಾಣಿ ಪದವಿ ಮಹಾವಿದ್ಯಾಲಯ, ಕಲಬುರಗಿ
ಮೊ.7892986305

ಪ್ರೊ. ಎಚ್.ಟಿ. ಪೋತೆ ಅವರು ಹೊಸತಲೆಮಾರಿನ ದಲಿತ ಸಂವೇದನೆಯಿಂದ ಬರೆಯುತ್ತಿರುವ ಗಟ್ಟಿ ಬರೆಹಗಾರರು. ಕನ್ನಡ ಸಾಹಿತ್ಯ ಮತ್ತು ಜಾನಪದ ಕ್ಷೇತ್ರಗಳಲ್ಲಿ, ವಿಚಾರ, ವಿಮರ್ಶೆ, ಸಂಶೋಧನೆ ಗಳಲ್ಲಿ ತೊಡಗಿಸಿಕೊಂಡೇ ಅವರು ಬಹು ಬೇಗನೆ ಕತೆಗಾರರಾಗಿ, ಕಾದಂಬರಿಕಾರರಾಗಿ ಕನ್ನಡ ಓದುಗರ, ಚಿಂತಕರ ಗಮನ ಸೆಳೆದಿದ್ದಾರೆ. ಸೃಜನ ಹಾಗೂ ಸೃಜನೇತರ ಕೃತಿಗಳಿಗೆ ಅವರು ಪಡೆದ ಬಹುಮಾನ, ಪ್ರಶಸ್ತಿ, ಪ್ರಶಂಸೆಗಳ ಸಂಖ್ಯೆ ತುಂಬಾ ದೊಡ್ಡದಿದೆ. ಇಂಡಿ ತಾಲೂಕು ಕನ್ನಡ ಸಾಹಿತ್ಯ ಸಮ್ಮೇಳನ, ವಿಜಯಪುರ ಜಿಲ್ಲಾ ದಲಿತ ಸಾಹಿತ್ಯ ಸಮ್ಮೇಳನ ಹಾಗೂ ಈಗ 2023ರ ಜುಲೈ 29 ಮತ್ತು 30 ರಂದು ವಿಜಯಪುರದಲ್ಲಿ ನಡೆಯುತ್ತಿರುವ 10ನೇ ಅಖಿಲ ಭಾರತ ದಲಿತ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷತೆ ಇವೆಲ್ಲವು ಅವರ ಪ್ರತಿಭೆಗೆ ಸಂದ ಗೌರವವಾಗಿವೆ.

ಪೋತೆಯವರ ಹುಟ್ಟೂರು ವಿಜಯಪುರ ಜಿಲ್ಲೆಯ ಇಂಡಿ ತಾಲೂಕಿನ ಹಂಜಗಿ, ಅಲ್ಲಿನ ದಲಿತ ರೈತ ಮನೆತನದ ತಿಪ್ಪಣ್ಣ ಮತ್ತು ಅಂಬವ್ವ ದಂಪತಿಗಳ ಮಗನಾಗಿ ಶಾಲಾ ದಾಖಲಾತಿಯಂತೆ 1, ಜೂನ್ 1965 ರಲ್ಲಿ ಜನಿಸಿದರು. ಇವರದು ಅನೇಕ ದಶಕಗಳ ಕೂಡು ಕುಟುಂಬದ ಮನೆತನ. ಇವರನ್ನೊಳಗೊಂಡು ತಂದೆ ತಾಯಿಗೆ ಏಳು ಜನ ಗಂಡು, ಆರು ಜನ ಹೆಣ್ಣು ಮಕ್ಕಳು, ಗಂಡು ಮಕ್ಕಳಲ್ಲಿ ಹನುಮಂತ ಪೋತೆ ಎರಡ ನೆಯವರು, ಒಂದು ಕಾಲಕ್ಕೆ ಜಮೀನು ಹೊಂದಿದ್ದ ಅನುಕೂಲಸ್ತರು. ಆದರೆ, ಮೇಲಿಂದ ಮೇಲೆ ಆವರಿಸಿ ಕೊಂಡ ಬರ, ವಿಸ್ತಾರಗೊಂಡ ಕುಟುಂಬದಿಂದಾಗಿ ಬಡತನಕ್ಕೆ ತಳ್ಳಲ್ಪಟ್ಟಿತು. ಹೀಗಿದ್ದಾಗ್ಯೂ ಅಲ್ಪ ಸ್ವಲ್ಪ, ಅಕ್ಷರ ಪಡೆದಿದ್ದ ತಂದೆ ತಿಪ್ಪಣ್ಣ ಅಂಬೇಡ್ಕರ್ ಅವರ ವಿಚಾರವಾದದಿಂದ ಪ್ರೇರಿತರಾಗಿದ್ದವರು. ಅಸ್ಪೃಶ್ಯತೆ ಹಾಗೂ ಬಡತನವೆಂಬ ರೋಗ ನಿವಾರಣೆಗೆ ಅಕ್ಷರವೊಂದೇ ಔಷಧವೆಂದು ಮನಗಂಡಿದ್ದರು. ಹಾಗಾಗಿ ಎಲ್ಲ ಮಕ್ಕಳನ್ನು ಶಾಲೆಗೆ ಹಾಕಿದರು. ಆರ್ಥಿಕ ಮುಗ್ಗಟ್ಟಿನಿಂದ ಯಾರಿಗೂ ಪೂರ್ಣ ವಿದ್ಯೆ ಕೊಡಿಸಲಾಗಲಿಲ್ಲ. ಊರಲ್ಲಿನ ಅನೇಕರು ಮಕ್ಕಳನ್ನು ಜೀತಕ್ಕಿಟ್ಟರೆ ನಿನ್ನ ಬಡತನವು ದೂರವಾಗುವುದೆಂದು ನೀಡಿದ ಸಲಹೆಯನ್ನು ದಿಟ್ಟತನದಿಂದ ತಿರಸ್ಕರಿಸಿದ ತಂದೆ, ಏನಾದರೂ ಸರಿ ತನ್ನ ಮಕ್ಕಳು ವಿದ್ಯಾವಂತರಾದರೆ ಸಾಕು ಎಂದು ಬಯಸಿದ್ದರು. ತಂದೆಯ ಬಯಕೆಯನ್ನು ಅಕ್ಷರಶಃ ಪೂರೈಸಿದ್ದು ಎಚ್.ಟಿ. ಪೋತೆಯವರು.

ಪೋತೆಯವರ ಬದುಕಿನುದ್ದಕ್ಕೂ ಸಾಗಿದ ದಾರಿ ತುಂಬಾ ರೋಚಕವಾಗಿದೆ. ಸರಕಾರಿ ಆಶ್ರಮ ಶಾಲೆ ವಿಜಯಪುರದಿಂದ ಪ್ರಾಥಮಿಕ ಹಾಗೂ ನಿಂಬಾಳದ ಆಶ್ರಮ ಶಾಲೆಯಿಂದ ಹೈಸ್ಕೂಲು ಶಿಕ್ಷಣ ಮುಗಿಸಿ ಕಾಲೇಜಿಗೆ ಹೋಗಬೇಕೆಂಬ ಹಂಬಲ, ತುಡಿತ

ಉತ್ಕಟವಾಗಿತ್ತಾದರೂ ಮನೆಯ ಪರಿಸ್ಥಿತಿ, ಎಲ್ಲೆಲ್ಲೂ ಆವರಿಸಿ ಕೊಂಡಿದ್ದ ಬರಗಾಲ ಮನೆಯವರನ್ನು ಕಂಗೆಡಿಸಿತ್ತು. ಪೋತೆಯವರ ಕಾಲೇಜಿಗೆ ಹೋಗಬೇಕೆಂಬ ಹಟ, ತಾಯಿಬೆಂಬಲ ಅಪ್ಪನ ಆರ್ಥಿಕ ಅಸಾಹಯಕತೆ ಕೊನೆಗೆ ಮನೆ ಮಂದಿಗೆ ಕುಡಿಯಲು ಆಸರೆಯಾಗಿದ್ದ ತಾಮ್ರದ ಕೊಡವನ್ನೇ ಮಾರವಾಡಿ ಅಂಗಡಿಯಲ್ಲಿ ಮಾರಿ ಅದರಿಂದ ಬಂದ ಹಣವನ್ನು ತಂದೆ ಇವರಿಗೆ ಕೊಟ್ಟು ಕಲಿಯಲು ವಿಜಯಪುರಕ್ಕೆ ಕಳಿಸುತ್ತಾರೆ. ಆ ಸನ್ನಿವೇಶ ಪೋತೆ ಯವರ ಕಣ್ಣ ಮುಂದೆ ಹಸಿರಾಗಿಯೇ ಇದೆ. ಆವತ್ತು ಅವ್ವ, ಅಪ್ಪ ತಂಗಿಯರು, ತಮ್ಮಂದಿರು ತಮಗೆ ಮಾಡಿದ ತ್ಯಾಗ ದುಡಿಮೆಯಿಂದಾಗಿಯೇ ಇವತ್ತು ನಾನಿಷ್ಟು ಎತ್ತರಕ್ಕೆ




ಬರಲು ಸಾಧ್ಯವಾಯಿತೆಂದು ನೆನಪಿಸಿಕೊಳ್ಳುತ್ತಾರೆ. ಅವರ ಬೆಳವಣಿಗೆಯ ಹಿಂದೆ ಮನೆಯವರ ತ್ಯಾಗ ದುಡಿಮೆ, ಓದು ಬರವಣಿಗೆಗೆ ಬುದ್ಧ, ಬಸವ, ಫುಲೆ, ಅಂಬೇಡ್ಕರ್ ಅವರ ವಿಚಾರಧಾರೆಗಳು ಪ್ರೇರಣೆಯಾಗಿರುವವು.

**ಶಿಕ್ಷಣ–ಹೋರಾಟದ ದಾರಿ:** 1988ರಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದಿಂದ ಕನ್ನಡ ಮತ್ತು ಜಾನಪ ದಲ್ಲಿ ಸ್ನಾತಕೋತ್ತರ ಅಧ್ಯಯನ ಮಾಡಿ ದ್ವಿತೀಯ ರ್‍ಯಾಂಕ್‌ನೊಂದಿಗೆ ತೇರ್ಗಡೆ ಹೊಂದುತ್ತಾರೆ. ಮುಂದು ವರಿದು ಎಂ.ಫಿಲ್. ಮತ್ತು ಪಿಎಚ್.ಡಿ ಪದವಿ ಸಂಪಾದಿಸಿ ಅಕ್ಕಲಕೋಟ, ಕಲಬುರಗಿ ಅಂಬೇಡ್ಕರ್ ಪದವಿ ಮಹಾವಿದ್ಯಾಲಯದಲ್ಲಿ ತಾತ್ಕಾಲಿಕ ಉಪನ್ಯಾಸಕರಾಗಿ ಕೆಲಸಮಾಡಿ ನಂತರ ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಗೆ ಉಪನ್ಯಾಸಕರಾಗಿ ಸೇರಿ, ರಾಯಚೂರು ಸ್ನಾತಕೋತ್ತರ ಕೇಂದ್ರದಲ್ಲಿ ಹತ್ತು ವರ್ಷ ಕೆಲಸಮಾಡಿ ಕನ್ನಡ ಅಧ್ಯಯನ ಸಂಸ್ಥೆಗೆ ವರ್ಗಾವಣೆಗೊಂಡು ಸಹ ಪ್ರಾಧ್ಯಾಪಕ ರಾಗಿ, ಪ್ರಾಧ್ಯಾಪಕರಾಗಿ ಪ್ರಸಾರಾಂಗ ನಿರ್ದೇಶಕರಾಗಿ, ಡಾ. ಬಿ.ಆರ್. ಅಂಬೇಡ್ಕರ್ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ ಹಾಗೂ ಪಾಲಿ ಅಧ್ಯಯನ ಕೇಂದ್ರದ ನಿರ್ದೇಶಕರಾಗಿ ಅರ್ಥಪೂರ್ಣ ಸೇವೆ ಸಲ್ಲಿಸಿ, ಈ ಕೇಂದ್ರಗಳಲ್ಲಿ ಶೈಕ್ಷಣಿಕ ಸಂಶೋಧನಾತ್ಮಕ ಸಾಹಿತ್ಯಕ ಅಭಿವೃದ್ಧಿಗೆ ಶ್ರಮಿಸಿದರು. ಕಲಾನಿಕಾಯದ ಡೀನರಾಗಿ ವಿಶ್ವವಿದ್ಯಾಲಯದ ವಿವಿಧ ಶೈಕ್ಷಣಿಕ ಹುದ್ದೆಗಳಲ್ಲಿ ಸಲ್ಲಿಸಿದ ಸೇವೆ ಅವಿಸ್ಮರಣೀಯ. ಪ್ರೊ. ಪೋತೆಯವರು ವಿದ್ಯಾರ್ಥಿ ದೆಸೆಯಲ್ಲಿಯೇ ಚಳವಳಿಗಳಲ್ಲಿ ಭಾಗವಹಿಸುತ್ತ ವಿದ್ಯಾರ್ಥಿ ಸಂಘಟನೆಯನ್ನು ಮಾಡಿದ್ದಲ್ಲದೆ, ತಾವಿದ್ದ ಹಾಸ್ಟೆಲ್‌ನ ಜ್ವಲಂತ ಸಮಸ್ಯೆಗಳ ಕುರಿತು ದೊಡ್ಡ ಹೋರಾಟ ಮಾಡಿ, ಅಧಿಕಾರಿಗಳ ಕಣ್ಣು ತೆರೆಸಿ, ನೂರಾರು ವಿದ್ಯಾರ್ಥಿಗಳ ಸಮಸ್ಯೆಗಳನ್ನು ದೂರ ಮಾಡಿದರು. ವಿಜಯಪುರ ಜಿಲ್ಲೆಯಲ್ಲಿ ದಲಿತ ಸಂಘರ್ಷ ಸಮಿತಿ ಶಾಖೆ ಪ್ರಾರಂಭಿಸಿ ಕೆಲವು ಕಾಲ ಮುನ್ನಡೆಸುತ್ತಾರೆ. ತ್ಯಾಗಿ, ಡಿ.ಜಿ. ಸಾಗರರಂಥ ಚಳವಳಿಗಾರರನ್ನು ಕರೆಯಿಸಿ ಭಾಷಣ ಮಾಡಿಸಿ ಸಂಘಟನೆಗೆ ಬಲ ತುಂಬುವಲ್ಲಿ ಪೋತೆಯವರ ಪಾತ್ರ ಮಹತ್ವದ್ದಾಗಿತ್ತು.

ಪೋತೆಯವರದು ಹೊರಮುಖಿ ವ್ಯಕ್ತಿತ್ವ, ನೇರವಾಗಿ ನುಡಿಯುವ ಅನ್ಯಾಯವನ್ನು ಸಹಿಸಿಕೊಂಡಿರದ ಪ್ರತಿಭಟನಾ ಮನೋಭವವನ್ನು ಕೆಲವರು ಮೆಚ್ಚಿಕೊಂಡಿದ್ದರು. ವಿಭಾಗದಲ್ಲಾಗಲಿ, ವಸತಿ ನಿಲಯದಲ್ಲಾಗಲಿ ವಿದ್ಯಾರ್ಥಿಗಳಿಗೆ ತೊಂದರೆಯುಂಟಾಗುತ್ತಿದ್ದರೆ ಎಂದೂ ಸಹಿಸಿಕೊಳ್ಳುವವರಲ್ಲ, ನ್ಯಾಯಕ್ಕಾಗಿ ಬೀದಿಗಿಳಿದು ವಿದ್ಯಾರ್ಥಿಗಳನ್ನು ಸಂಘಟಿಸಿ ಹೋರಾಟ ಮಾಡಿ ನ್ಯಾಯ ದೊರಕಿಸಿಕೊಳ್ಳುವವರೆಗೂ ಸುಮ್ಮನಿರುತ್ತಿರಲಿಲ್ಲ. ಇದರಿಂದ ಬಹುಬೇಗನೆ ವಿದ್ಯಾರ್ಥಿ ಸಮುದಾಯದ ನೆಚ್ಚಿನ ಶಿಕ್ಷಕರೆಂಬ ಹೆಸರು ಪಡೆದಿದ್ದಾರೆ. ಒಮ್ಮೆ ವಿಶ್ವವಿದ್ಯಾಲಯದ ಆಡಳಿತ ವ್ಯವಸ್ಥೆ, ವಸತಿ ನಿಲಯದದಲ್ಲಾಗುತ್ತಿದ್ದ ತಾರತಮ್ಯ, ಅನ್ಯಾಯವನ್ನು ಕಂಡು ನೇರವಾಗಿ ಕುಲಪತಿಗಳಾಗಿದ್ದ ಚಲುವರಾಜುರವರ ಕಛೇರಿಗೆ ಹೋಗಿ ತಮ್ಮ ದಿಟ್ಟ ನಿಲುವನ್ನು ತೋರಿ ವಿಶ್ವವಿದ್ಯಾಲಯದ ಧೋರಣೆಯಿಂದ ವಿದ್ಯಾರ್ಥಿಗಳಿಗೆ ಆಗುತ್ತಿದ್ದ ತೊಂದರೆಗಳು, ಅನಾನುಕೂಲತೆಗಳತ್ತ ಗಮನ ಸೆಳೆಯುವಲ್ಲಿ ಯಶಸ್ವಿ ಯಾಗುತ್ತಾರೆ. ಮತ್ತೊಮ್ಮೆ ಅತ್ಯಂತ ಖಡಕ್ ಕುಲಪತಿಯೆಂದೇ ಖ್ಯಾತರಾಗಿದ್ದ ಎನ್. ರುದ್ರಯ್ಯನವರ ಕೈ ಹಿಡಿದು ನ್ಯಾಯ ಕೇಳಿದ ಪ್ರಸಂಗ ನಡೆಯುತ್ತದೆ. ಇಷ್ಟೆಲ್ಲವೂ ಮಾಡಿದ್ದು ಎಂದೂ ತಮ್ಮ ಸ್ವಂತಕ್ಕಾಗಿ ಅಲ್ಲ ಎಂಬುದು ಗಮನಾರ್ಹ. ಪ್ರಶ್ನೆ ಕೇಳುವ, ನ್ಯಾಯಕ್ಕಾಗಿ ಹೋರಾಡುವ, ಮತ್ತೊಬ್ಬರ ಕಷ್ಟ ನಷ್ಟಗಳಿಗೆ ಸ್ಪಂದಿಸುವ, ಕರಗುವ, ಕೈಲಾದ ಸಹಾಯ ಮಾಡುವ ಈ ಗುಣ ಅವರಿಗೆ ಅವರ ತಂದೆಯಿಂದ ಬಂದದ್ದಾಗಿದೆ. ಇವರ ಹೋರಾಟದ ನಡೆಯನ್ನು ನೋಡಿದ ಕುಲಪತಿ ಚಲುವರಾಜು 'ನಿನಗೆ ದೊಡ್ಡ ಭವಿಷ್ಯವಿದೆ. ಚನ್ನಾಗಿ ಓದು, ಮುಂದೆ ಸಾಹಿತ್ಯ ಕ್ಷೇತ್ರದಲ್ಲಿ ಸಿದ್ದಲಿಂಗಯ್ಯನಂತೆ ಬೆಳೆದು ಹೆಸರು ಮಾಡು' ಎಂದು ಭವಿಷ್ಯ ನುಡಿದದ್ದು ಈಗ ಅದು ನಿಜವೇ ಆಗಿರುವುದು ಗಮನಾರ್ಹವಾಗಿದೆ. ಪ್ರೊ. ಪೋತೆಯವರು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಕಾರ್ಯ ನಿರ್ವಹಿಸುವ ಸಂದರ್ಭದಲ್ಲಿ ಸರಕಾರವು ಕಾಲೇಜುಗಳಿಗೆ ಅಧ್ಯಾಪಕರನ್ನು ನೇಮಿಸುವಾಗ ಕನ್ನಡ ಮತ್ತು ಜಾನಪದ ಎಂ.ಎ.ಯನ್ನು ಪರಿ ಗಣಿಸದೆ ಇದ್ದಾಗ ಸರಕಾರಕ್ಕೆ ಪತ್ರ ಬರೆದು ನ್ಯಾಯಾಲಯಕ್ಕೂ ಮೊರೆ ಹೋಗಿ ಸುದೀರ್ಘ ಹೋರಾಟ ಮಾಡಿ ಕನ್ನಡ ಮತ್ತು ಜಾನಪದ ಎಂ.ಎ. ಪದವಿಯನ್ನು ಕನ್ನಡಕ್ಕೆ ತತ್ಸಮಾನ ಎಂದು ನೌಕರಿಗೆ ಪರಿಗಣಿಸು ವಂತೆ ಮಾಡಿದ್ದು ತುಂಬಾ ಮಹತ್ವದ್ದಾಗಿದೆ. ಕರ್ನಾಟಕದಲ್ಲಿ ಅಂಬೇಡ್ಕರರನ್ನು ತಲಸ್ಪರ್ಶಿಯಾಗಿ ಅಧ್ಯಯನ ಮಾಡಿದ ಮತ್ತು ಬರಹದಲ್ಲಿ ಅಳವಡಿಸಿಕೊಂಡ ಲೇಖಕರಲ್ಲಿ ಪೋತೆಯವರೇ ಅಗ್ರ ಪಂಕ್ತಿಯಲ್ಲಿ ನಿಲ್ಲುತ್ತಾರೆ. ಅವರ ವೈಚಾರಿಕ ಬರಹಗಳಲ್ಲಿ, ಕಥೆ, ಕಾದಂಬರಿಗಳಲ್ಲಿ ಪ್ರಬಂಧಗಳಲ್ಲಿ ಅಂಬೇಡ್ಕರ್ ಅವರು ಪ್ರತಿಮೆ, ರೂಪಕಗಳಲ್ಲಿ ಸೃಜನಗೊಳುತ್ತಾರೆ. ಖ್ಯಾತ ಕವಿ, ವಿಮರ್ಶಕರಾದ ಅರವಿಂದ ಮಾಲಗತ್ತಿಯವರು, ಅಂತ ರಾಷ್ಟ್ರೀಯ ಕವಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತರಾದ ಮೂಡ್ನಾಕೂಡು ಚಿನ್ನಸ್ವಾಮಿಯವರು 'ಕನ್ನಡದಲ್ಲಿ ಅಂಬೇಡ್ಕರ್‌ರನ್ನು ಸೃಜನಶೀಲ ನೆಲೆಯಲ್ಲಿ ಅನಾವರಣ ಮಾಡಿದವರಲ್ಲಿ ಪೋತೆಯವರನ್ನು ಬಿಟ್ಟರೆ ನಾವು ಮತ್ತಾರನ್ನೂ ಕಾಣುವುದಿಲ್ಲ' ಎಂಬ ನುಡಿಗಳನ್ನಾಡಿದ್ದನ್ನು ನೋಡುತ್ತೇವೆ. ಕನ್ನಡದ ಶ್ರೇಷ್ಠ ಸಾಹಿತಿ ಕತೆಗಾರ ದೇವನೂರ ಮಹಾದೇವರು ಪೋತೆಯವರ ಸಾಹಿತ್ಯ ಕೃಷಿಗೆ ಬೆರಗುಪಟ್ಟುಕೊಂಡು 'ನನ್ನನ್ನೂ ಮೀರಿಸಿದಿರಿ ತುಂಬಾ ಸಂತೋಷವಾಗ್ತಿದೆ' ಎಂದು

ಬೆನ್ನು ತಟ್ಟಿ ಪ್ರಶಂಸಿದ್ದಾರೆ. ಮತ್ತೋರ್ವ ಚಿಂತಕ ಬಹುಶ್ರುತ ವಿದ್ವಾಂಸ ಶಾಸ್ತ್ರ ಚೂಡಾಮಣಿ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶರವರು ಪೋತೆಯವರ ವಾಗ್ವಿಲಾಸ, ಬರಹದಲ್ಲಿರುವ ಸತ್ವ ಜೀವಪರತೆ ಜನಪರತೆಯನ್ನು ಮುಕ್ತ ಕಂಠದಿಂದ ಮಾತನಾಡಿದ್ದುಂಟು.

**ಸಾಹಿತ್ಯ:** ಪೋತೆಯವರ ಮೇಲೆ ಹಲಸಂಗಿ ಪರಿಸರ ಗೆಳೆಯರ ಬಳಗದ ಮಧುರಚೆನ್ನ, ಸಿಂಪಿ ಲಿಂಗಣ್ಣ, ಪಿ.ಧೂಲಾಸಾಹೇಬ, ಕಾಪಸೆಯವರ ಸಾಹಿತ್ಯದ ಪ್ರಭಾವ ಅವರ ಬದುಕಿನ ಭಾಗವಾಗಿಯೇ ಬಂದಿದೆ. ಅಂಬೇಡ್ಕರ್ ಅವರ ಬದುಕು ಸಾಹಿತ್ಯ ಸೇರಿದಂತೆ ಬುದ್ಧ, ಬಸವ, ಕನಕದಾಸ, ಪೆರಿಯಾರ್ ಬಿ. ಶ್ಯಾಮ ಸುಂದರರಂಥ ಮಹನೀಯರ ಸಾಹಿತ್ಯವನ್ನು ದುಡಿಸಿಕೊಂಡೇ ಸಾಹಿತ್ಯ ಕ್ಷೇತ್ರದಲ್ಲಿ ಗಣನೀಯ ಸಾಧನೆ ಮಾಡಿದ್ದಾರೆ. ಪ್ರಾರಂಭದಲ್ಲಿ ವಿಚಾರ ವಿಮರ್ಶೆಗಳಲ್ಲಿ ಹೊಂದಿದ್ದ ಒಲವು, ನಂತರ ಸೃಜನಶೀಲ ಸಾಹಿತ್ಯದ ಕಡೆಗೆ ಹೊರಳಿಸಿಕೊಂಡರು. ಅವು ಸಣ್ಣಕಥೆ, ಕಾದಂಬರಿ, ಜೀವನ ಚರಿತ್ರೆ, ವೈಚಾರಿಕ ಪ್ರಬಂಧ, ಹೈಕು. ಕವಿತೆಗಳಲ್ಲಿ ಮೂಡಿಬಂದಿವೆ. ಚಮ್ಮಾವುಗೆ, ಬೆತ್ತಲಾದ ಚಂದ್ರ, ಕರುಳರಿಯುವ ಹೊತ್ತು. ಮಾದನ ಕರೆಂಟ ಕತಂತ್ರ, ಅನೇಕಲವ್ಯ, ದೇವರ ಧರ್ಮ ಇವು ಅವರ ಸಣ್ಣ ಕಥಾ ಸಂಕಲನಗಳು. ಬಯಲಂಬೊ ಬಯಲು, ಬಯೋಪಿಕ್ ಕಾದಂಬರಿ, ಮಹಾಬಿಂದು ಬುದ್ಧನ ಕಾಲದಿಂದ ಸಮಕಾಲೀನ ಸಮಾಜೋ ಧಾರ್ಮಿಕವನ್ನು ಕಟ್ಟಿಕೊಡುವ ಕಲ್ಪಿತವಾಸ್ತವ ನೆಲೆಯ ಕಾದಂಬರಿಯಾಗಿದೆ. ಕಥೆ ಕಾದಂಬರಿಗಳಿಗೆ ಪಡೆದ ಪುರಸ್ಕಾರ ಬಹುಮಾನಗಳು ಅನೇಕ.

ರಾಷ್ಟ್ರಕಂಡ ರಾಜಕೀಯ ಮುತ್ಸದ್ಧಿ ಬುದ್ಧನ ಉಪಾಸಕ ಕಾಂಗ್ರೆಸ್ ಪಕ್ಷದ ರಾಷ್ಟ್ರೀಯ ಅಧ್ಯಕ್ಷರಾದ ಶ್ರೀ ಮಲ್ಲಿಕಾರ್ಜುನ ಖರ್ಗೆಯವರ ಕುರಿತಾದ 'ಬಾಬಾಸೇಹಬರೆಡೆಗೆ' ಅವರ ಅತ್ಯಂತ ಮಹತ್ವದ ಕೃತಿ ಯಾಗಿದೆ. ಅದರಂತೆ ಬಿ. ಶಾಮಸುಂದರ್, ಎಲ್ಲರ ಅಂಬೇಡ್ಕರ್, ರಮಾಬಾಯಿ, ಮರಾಠಿಯಿಂದ ಕನ್ನಡಕ್ಕೆ ಅನುವಾದಿ ಸಲ್ಪಟ್ಟ ಕಾದಂಬರಿ ಅದೀಗ ಸಿನೇಮಾ ಆಗಿದೆ. ದಲಿತ ಚಳವಳಿ, ಬುದ್ಧನೆಡೆಗೆ, ಪುಲೆ, ಶಾಹೂ ಮಹಾರಾಜ, ಅಂಬೇಡ್ಕರ್, ಅಂಬೇಡ್ಕರ್ ಮತ್ತು... ಅವೈದಿಕ ಚಿಂತನೆ, ದಲಿತಾಂತರಂಗ, ಜೀವಪರಚಿಂತನೆ, ಶರಣ ಸಂಸ್ಕೃತಿ ಸಂವಾದ, ಸಂಸ್ಕೃತಿ ಸಂಕ್ರಮಣ, ಮೂಲಭಾರತೀಯರು ಒಂದು ಅವಲೋಕನ, ನೀರನೆರಳು ಇವು ಅವರ ವಿಮರ್ಶೆ, ವಿಚಾರಶೀಲ ಕೃತಿಗಳಾಗಿದ್ದರೆ ರಮಾಬಾಯಿ, ಬೆಂದವರು, ಭೂದೇವತೆಗಳ ಪ್ರಣಾಳಿಕೆ ಇವು ಅವರಿಗಿರುವ ಅನ್ಯಭಾಷಾ ತಿಳುವಳಿಕೆ ಅನುವಾದ ಪ್ರಜ್ಞೆಯನ್ನು





ಎತ್ತಿತೋರಿಸುತ್ತವೆ. ಅಲ್ಲದೆ ಕೋಮು ಸೌಹಾರ್ದತೆ, ಮೀಸಲಾತಿ ಸಮಸ್ಯೆ ಸವಾಲುಗಳು, ಲೋಕಮಿತ್ರರ ನಡುವೆ ಇವು ಅಂಥಾಲಜಿಗಳಾಗಿವೆ.

**ವಿದೇಶ ವಿವಿಗಳಲ್ಲಿ ಉಪನ್ಯಾಸ:** ಎಚ್.ಟಿ. ಪೋತೆಯವರು ಆಸ್ಟ್ರೇಲಿಯಾ, ಸಿಂಗಪುರ, ಥಾಯಲ್ಯಾಂಡ, ಇಂಗ್ಲೆಂಡ್, ಐರ್ಲೆಂಡ್ ವಿವಿಗಳಲ್ಲಿ ವಿವಿಧ ವಿಷಯ ಕುರಿತು ವಿದ್ವತ್‌ಪೂರ್ಣ ಪ್ರಬಂಧ ಮಂಡಿಸಿ ತಮ್ಮ ಪ್ರತಿಭೆ ಯನ್ನು ಮೆರೆದಿದ್ದಾರೆ. ಇತೀಚೆಗೆ ಅವರದೆ ಅನುವಾದಿತ ಕಾದಂಬರಿ ರಮಾಬಾಯಿ 'ರಮಾಸಾಹೇಬಾ' ಹೆಸರಿನಲ್ಲಿ ಚಲನಚಿತ್ರವಾಗಿದ್ದು ಅದರಲ್ಲಿ ಎಚ್.ಟಿ. ಪೋತೆಯವರೆ ಅಂಬೇಡ್ಕರ್ ಪಾತ್ರವನ್ನು ಮನೋಜ್ಞವಾಗಿ ಅಭಿನಯಿಸಿ ಚಿತ್ರಿಸಿ ರಸಿಕರ ಸಾಹಿತ್ಯ ಪ್ರಿಯರ ಮೆಚ್ಚುಗೆಗೆ ಪಾತ್ರರಾಗಿರುವರು. ಈಗ ಅವರ ಮುಡಿಗೆ 10 ನೆಯ ಅಖಿಲ ಭಾರತ ದಲಿತ ಸಾಹಿತ್ಯ ಸಮ್ಮೇಳನದ ಕೀರ್ತಿ ಕಿರೀಟ ಪ್ರಾಪ್ತವಾಗಿರುವುದು ಅಭಿನಂದನೀಯ.

# ಅಂಬೇಡ್ಕರ್ ಅರಿವಿನ ಜತೆಗಾರ ಪ್ರೊ.ಎಚ್.ಟಿ.ಪೋತೆ





**ಡಾ.ಅರುಣ್ ಜೋಳದಕೂಡ್ಲಿಗಿ**
ಸಹಾಯಕ ಪ್ರಾಧ್ಯಾಪಕರು,
ಕಲಬುರಗಿ
ಮೊ.9901445702

ಕನ್ನಡದ ಮಟ್ಟಿಗೆ ಅಂಬೇಡ್ಕರ್ ಪ್ರವೇಶವಾದದ್ದು ಬಹಳ ತಡವಾಗಿ. ಸಂವಿಧಾನ ರಚನಾ ಸಭೆಯ ಸದಸ್ಯರಾಗಿದ್ದ ಶಿವಮೊಗ್ಗ ಭಾಗದ ಎಸ್.ವಿ.ಕೃಷ್ಣಮೂರ್ತಿರಾವ್ ಅವರು ಮಗಳು ಚಂದ್ರಾಳಿಗೆ 12.07.1947 ರಿಂದ 19.2.1948 ರ ತನಕ ದೆಹಲಿಯ ಸಂವಿಧಾನ ಸಭೆಯ ಅನುಭವಗಳನ್ನು ಪತ್ರದಲ್ಲಿ ಬರೆಯುತ್ತಾರೆ. ಈ ಪತ್ರದಲ್ಲಿ 'ಡಾ.ಅಂಬೇಡ್ಕರ್ ಅವರ ವಿದ್ವತ್ತು ಅಪಾರವಾದುದು. ಅವರು ಬಹು ಸ್ಪಷ್ಟವಾಗಿಯೂ ಆಧಾರಭೂತವಾಗಿಯೂ ಮಾತನಾಡುತ್ತಾರೆ. ಅವರು ಪಟ್ಟು ಹಿಡಿದರೆ ಕದಲಿಸುವುದು ಕಷ್ಟ. ಸ್ವಲ್ಪ ಕಠಿಣವಾದಿಗಳು' ಎಂದು ಉಲ್ಲೇಖಿಸುತ್ತಾರೆ. ಬಹುಶಃ ಉಪಲಬ್ದ ದಾಖಲೆಗಳಲ್ಲಿ ಇದು ಬಹಳ ಹಳೆಯದು ಅನ್ನಿಸುತ್ತದೆ. 1963 ರಲ್ಲಿ ಕುಮಾರ ವೆಂಕಣ್ಣನವರು ಅಂಬೇಡ್ಕರ್ ಅವರ 'ಅಸ್ಪೃಶ್ಯರು' ಕೃತಿಯನ್ನು ಅನುವಾದಿಸಿದರು. ಹೀಗೆ ನಿಧಾನಕ್ಕೆ 70–80 ರ ದಶಕದಲ್ಲಿ ಅಂಬೇಡ್ಕರ್ ಬರಹಗಳು ದಲಿತ ಚಳವಳಿಯ ಭಾಗವಾಗಿ ಕನ್ನಡಕ್ಕೆ ಪರಿಚಯ ಆಗುತ್ತಾ ಬಂದವು. ಬಿಡಿಬಿಡಿಯಾಗಿ ಅಂಬೇಡ್ಕರ್ ಅವರ ಬರಹಗಳನ್ನು ದೇಜಗೌ, ಹೆಚ್.ಜೆ. ಲಕ್ಕಪ್ಪಗೌಡ ಮುಂತಾದವರು ಅಂಬೇಡ್ಕರ್ ಬಗ್ಗೆ ಬರೆದದ್ದನ್ನು ನೆನೆಯಬಹುದು. ಹೀಗಿರುವಾಗ ಅಂಬೇಡ್ಕರ್ ಚಿಂತನೆಯ ಜತೆ ಕನ್ನಡದ ಅರಿವನ್ನು ವಿಸ್ತರಿಸುವ ನಿರಂತರವಾಗಿ ಕೆಲಸ ಮಾಡಿದವರೂ ಇದ್ದಾರೆ. ಈ ನೆಲೆಯಲ್ಲಿ ಅಂಬೇಡ್ಕರ್ ಅರಿವನ್ನು ಒಂದು ಸ್ಕೂಲ್ ಆಫ್ ಥಾಟ್ ಎನ್ನುವ ಹಾಗೆ ಬರಹ ಮಾಡುತ್ತ ಬಂದವರಲ್ಲಿ ಪ್ರೊ.ಎಚ್.ಟಿ ಪೋತೆ ಅವರ ಹೆಸರು ಮುಖ್ಯವಾದದ್ದು.

ಗುಲ್ಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾದ ಪ್ರೊ.ಎಚ್.ಟಿ ಪೋತೆ ಅವರು ಅಂಬೇಡ್ಕರ್ ಅರಿವನ್ನು ಕನ್ನಡ ಸಂಶೋಧನೆಗೆ ಕಸಿ ಮಾಡಲು ಪ್ರಯತ್ನಿಸಿದ್ದಾರೆ. ದಲಿತ ಚಿಂತನೆ ಮತ್ತು ಅಂಬೇಡ್ಕರ್‌ವಾದವನ್ನು ಆಧರಿಸಿ ಹಲವು ಸಂಶೋಧನೆಗಳನ್ನು ಮಾಡಿಸಿದ್ದಾರೆ. ಇದು ಏಕಕಾಲಕ್ಕೆ ಹೊಸ ತಲೆಮಾರನ್ನು ಅಂಬೇಡ್ಕರ್ ಓದಿಗೆ ಗಂಭೀರವಾಗಿ ತೊಡಗಿಸುವ ಉದ್ದೇಶವಿದ್ದಂತೆ ಕಂಡರೂ, ಕನ್ನಡ ಸಂಶೋಧನೆಯಲ್ಲಿ ಅಂಬೇಡ್ಕರ್ ಅವರ ತಿಳಿವನ್ನು ನೆಲೆಗೊಳಿಸಲು ಪ್ರಯತ್ನಿಸುವುದು ಮತ್ತೊಂದು ಮುಖ್ಯ ಅಂಶವಾಗಿದೆ. ಅಂಬೇಡ್ಕರ್ ಬಗೆಗೆ ನಿರಂತರವಾಗಿ ಬರೆದ ಮತ್ತು ಸದ್ಯಕ್ಕೆ ಅಂಬೇಡ್ಕರ್ ಕುರಿತ ತಿಳಿವಿನ ವಿಸ್ತಾರದ ಹೆಚ್ಚಿನ ಕೃತಿಗಳನ್ನು ಪ್ರೊ.ಪೋತೆ

**ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾದ ಪ್ರೊ.ಎಚ್.ಟಿ ಪೋತೆ ಅವರು ಅಂಬೇಡ್ಕರ್ ಅರಿವನ್ನು ಕನ್ನಡ ಸಂಶೋಧನೆಗೆ ಕಸಿ ಮಾಡಲು ಪ್ರಯತ್ನಿಸಿದ್ದಾರೆ. ದಲಿತ ಚಿಂತನೆ ಮತ್ತು ಅಂಬೇಡ್ಕರ್‌ವಾದವನ್ನು ಆಧರಿಸಿ ಹಲವು ಸಂಶೋಧನೆಗಳನ್ನು ಮಾಡಿಸಿದ್ದಾರೆ.**





**ಆಧ್ಯಾ ಹೋಲಿನ್**




ಅವರು ಬರೆದಿದ್ದಾರೆ. ಅಂಬೇಡ್ಕರ್ ಭಾರತ, ಅಂಬೇಡ್ಕರ್ ಸಂವೇದನೆ, ಅಂಬೇಡ್ಕರ್ ಕಥನ, ಅಂಬೇಡ್ಕರ್ ಫಸಲು ಕೃತಿಗಳನ್ನು ಈ ನೆಲೆಯಲ್ಲಿ ಪರಿಶೀಲಿಸಬಹುದು.

ಅಂಬೇಡ್ಕರ್ ಅರಿವು ನಮ್ಮ ಸೃಜನಶೀಲ ಕೃತಿಗಳಲ್ಲಿಯೂ ನೆಲೆಗೊಳ್ಳಬೇಕು. ಹಾಗೆ ನೆಲೆಗೊಂಡು ಮರುಸೃಷ್ಟಿಯಾಗಬೇಕು. ಆದರೆ ಅದು ಹೆಚ್ಚಾಗಿ ಒಂದು ಕವಿತೆಯಾಗಿಯೋ, ಕತೆಯಾಗಿಯೋ, ವಿಮರ್ಶೆಯಾಗಿಯೋ ಅಂಬೇಡ್ಕರ್ ಪ್ರಭಾವವನ್ನು ಮೊಟುಕುಗೊಳಿಸುವುದಿದೆ. ಅಂಬೇಡ್ಕರ್ ಅರಿವು ಲೇಖಕರ ಎಲ್ಲಾ ಬರಹಗಳ ಒಳಗೂ ಹೆಣಿಗೆಯಾಗಿ ಮರುರೂಪು ಪಡೆದಿರುವುದು ಕಡಿಮೆ. ಹಾಗೆ ನೋಡಿದರೆ ಪ್ರೊ.ಪೋತೆ ಅವರ ಅಂಬೇಡ್ಕರ್ ಅರಿವು ಅಂಬೇಡ್ಕರರ ಕೃತಿಗಳನ್ನು ರಚಿಸಲು ಮಾತ್ರ ಸೀಮಿತವಾಗಿಲ್ಲ. ಅವರ ಚಮ್ಮಾವುಗೆ, ಅನೇಕಲವ್ಯ (ಕತೆ) ಬಯಲೆಂಬೋ ಬಯಲು, ಮಹಾಬಿಂದು, (ಕಾದಂಬರಿ) ಬಾಬಾ ಸಾಹೇಬರೆಡೆಗೆ (ಮಲ್ಲಿಕಾರ್ಜುನ ಖರ್ಗೆಯವರ ಜೀವನ ಕಥನ) ಅವೈದಿಕ ಚಿಂತನೆ ಮೊದಲಾದ ವೈಚಾರಿಕ ಕೃತಿಗಳಲ್ಲಿಯೂ ಅಂಬೇಡ್ಕರ್ ಅರಿವು ಹೆಣಿಗೆಯಾಗಿದೆ. ಬಹುಶಃ ಇದು ಅಂಬೇಡ್ಕರ್ ಚಿಂತನೆಯ ಜತೆ ನಿರಂತರ ಪಯಣದ ಪರಿಣಾಮವಾಗಿದೆ.

ಅಂಬೇಡ್ಕರ್ ವಾಚಿಕೆ (ಕನ್ನಡ,ಇಂಗ್ಲೀಷ್, ಹಿಂದಿ) ಮೂರು ಭಾಷೆಗಳಲ್ಲಿ ಪ್ರಕಟವಾಗಿದೆ. ಇದರದ್ದೇನು ವಿಶೇಷ ಎನ್ನಬಹುದು. ಇದು ಕನ್ನಡ ಪ್ರಜ್ಞೆ ಅಂಬೇಡ್ಕರ್ ಅವರನ್ನು ಪರಿಭಾವಿಸಿದ ಒಂದು ಬಗೆಯನ್ನು ಇಂಗ್ಲೀಷ್ ಓದುಗರಿಗೂ, ಹಿಂದಿ ಓದುಗರಿಗೂ ತಿಳಿಸಿಕೊಡುವ ಪ್ರಯತ್ನವಾಗಿದೆ. ಹಾಗಾಗಿ ಅಂಬೇಡ್ಕರ್ ವಾಚಿಕೆಗಳು ಮುಖ್ಯವಾಗುತ್ತವೆ. ಅಂತೆಯೇ ಅಂಬೇಡ್ಕರ್ ಮತ್ತು. ಕೃತಿಯಲ್ಲಿ ಅಂಬೇಡ್ಕರ್ ಅರಿವಿನ ಜತೆ ಲೋಕಚಿಂತಕರ ಅರಿವನ್ನು ಮುಖಾಮುಖಿ ಮಾಡುವ ಪ್ರಯತ್ನ ಮಾಡಿದ್ದಾರೆ. ತೀರ ಈಚೆಗೆ ಪ್ರಕಟವಾದ 'ಎಲ್ಲರ ಅಂಬೇಡ್ಕರ್' ಕೃತಿ ಪ್ರೊ.ಪೋತೆ ಅವರ ಅಂಬೇಡ್ಕರ್ ಅರಿವಿನ ಪಯಣದ ಸಾಂಕೇತಿಕ ಕೃತಿಯಂತೆ ಕಾಣುತ್ತದೆ. ಕಾರಣ 'ಅಂಬೇಡ್ಕರ್' ಎಲ್ಲರ ಏಳಿಗೆಗಾಗಿ ಕೆಲಸ ದುಡಿದಿದ್ದಾರೆ, ಹಾಗಾಗಿ ಅಂಬೇಡ್ಕರ್ ಎಲ್ಲರ ಎದೆಯೊಳಗೂ ನೆಲೆಗೊಳ್ಳಬೇಕು ಎನ್ನುವ ಕನಸು ಪೋತೆಯವರದಾಗಿದೆ. ಈ ಅರ್ಥದಲ್ಲಿ ಪ್ರೊ.ಪೋತೆ ಅವರು ಅಂಬೇಡ್ಕರ್ ಅರಿವಿನ ಜತೆಗಾರರಂತೆ ಕಾಣುತ್ತಾರೆ.

ಅಖಿಲ ಭಾರತ ದಲಿತ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪದವಿ ಈ ಅಂಬೇಡ್ಕರ್ ಅರಿವಿನ ಪಯಣಕ್ಕೆ ಸಂದ ಗೌರವವಾಗಿದೆ.

# ದಲಿತ ಅಸ್ಮಿತೆ: ಪ್ರೊ.ಎಚ್.ಟಿ.ಪೋತೆ

**ಜಾನಪದ, ಸಂಶೋಧನೆ, ವೈಚಾರಿಕತೆ, ಚಿಂತನೆ, ಕಥೆ-ಕಾದಂಬರಿ, ಪ್ರಬಂಧ, ದಲಿತ ಸಾಹಿತ್ಯ ಕುರಿತು ನಮ್ಮ ಕಾಲಘಟ್ಟವೇ ಬೆರಗಾಗುವಂತೆ ಶೋಧಿಸಿ-ಚಿಂತಿಸಿ-ಬರೆವಣಿಗೆ ಮಾಡಿದ ಬಹು ದೊಡ್ಡ ಲೇಖಕರು ಪ್ರೊ.ಎಚ್.ಟಿ.ಪೋತೆ. ಇಂತಹ ನೆಲೆಗಳಲ್ಲಿಯೇ ಬಂದ ಅಪೂರ್ವಕೃತಿ 'ದಲಿತ ಅಸ್ಮಿತೆ'**



ಕನ್ನಡ ದಲಿತ ಸಾಹಿತ್ಯ ಲೋಕದ ಅನನ್ಯ ಪ್ರತಿಭೆಗಳಿಂದ ವಿದ್ವತ್‌ವಲಯದಲ್ಲಿ ಒಂದು ದೊಡ್ಡ ಕ್ರಾಂತಿ ನಡೆಯಿತು. ದೇವರಾಯ ಇಂಗಳೆ, ಸೂಸಲೆ ಸಿದ್ದಪ್ಪ, ಬಿ. ಶ್ಯಾಮಸುಂದರ್, ಗೋವಿಂದಯ್ಯ, ದೇವನೂರು, ಸಿದ್ಧಲಿಂಗಯ್ಯ, ಮ.ನ.ಜ., ಮೂಡ್ನಾಕೂಡು ಚಿನ್ನಸ್ವಾಮಿ, ಮಾಲಗತ್ತಿ ಅವರ ನಂತರದ ಹೆಸರು ಪ್ರೊ. ಎಚ್.ಟಿ. ಪೋತೆ ಅವರದು. ಸಮಕಾಲೀನ ಸಂದರ್ಭದಲ್ಲಿ ಕೇವಲ ದಲಿತ ಲೇಖಕರಲ್ಲಿ ಅಷ್ಟೇ ಅಲ್ಲ, ಇಡೀ ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ಪ್ರೊ. ಪೋತೆ ಅವರು ಬಹುಮುಖಿ ನೆಲೆಯ ಚಿಂತಕರಾಗಿ, ಬಹುಮುಖ ಸಾಹಿತ್ಯ ಪ್ರಕಾರದಲ್ಲಿ ಕಳೆದ ಮೂರು ದಶಕಗಳಿಂದ ನಿರಂತರ ಅಧ್ಯಯನ, ಅಧ್ಯಾಪನ, ಸಂಶೋಧನೆ, ಬರವಣಿಗೆಯಲ್ಲಿ ತೊಡಗಿಸಿಕೊಂಡವರು. ಜಾನಪದ, ಸಂಶೋಧನೆ, ವೈಚಾರಿಕತೆ, ಚಿಂತನೆ, ಕಥೆ-ಕಾದಂಬರಿ, ಪ್ರಬಂಧ, ದಲಿತ ಸಾಹಿತ್ಯ ಕುರಿತು ನಮ್ಮ ಕಾಲಘಟ್ಟವೇ ಬೆರಗಾಗುವಂತೆ ಶೋಧಿಸಿ-ಚಿಂತಿಸಿ-ಬರೆವಣಿಗೆ ಮಾಡಿದ ಬಹು ದೊಡ್ಡ ಲೇಖಕರು. ಇಂತಹ ನೆಲೆಗಳಲ್ಲಿಯೇ ಬಂದ ಅಪೂರ್ವಕೃತಿ 'ದಲಿತ ಅಸ್ಮಿತೆ'.



ಡಾ. ಹಣಮಂತ ಬಿ. ಮೇಲಕೇರಿ
ಅತಿಥಿ ಉಪನ್ಯಾಸಕರು
ಕನ್ನಡ ಅಧ್ಯಯನ ಸಂಸ್ಥೆ
ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ
ಮೊ:9972869340

'ದಲಿತ ಅಸ್ಮಿತೆ' ಎಂಬ ಚಿಂತನೆ ಲೇಖನಗಳ ಸಂಕಲನವಾಗಿದೆ. ಇದರಲ್ಲಿ ಮೂರು ಗೊಂಚಲಗಳನ್ನು ಮಾಡಿ ವರ್ಗೀಕರಿಸಿದ್ದಾರೆ. ತತ್ವ-ವ್ಯಕ್ತಿ-ವ್ಯಕ್ತಿತ್ವ, ಮೊದಲ ಗೊಂಚಲದಲ್ಲಿ ಹದಿನೈದು ಲೇಖನಗಳಿವೆ. ಗೊಂಚಲು ಎರಡರಲ್ಲಿ ಲೇಖ-ಲೇಖನಿಯಲ್ಲಿ ಹನ್ನೆರಡು ಲೇಖನಗಳಿವೆ. ಗೊಂಚಲು ಮೂರರಲ್ಲಿ ವಾಸ್ತವದ ನೆಲೆಯ ಎರಡು ಲೇಖನಗಳಿವೆ. 29 ಲೇಖನಗಳಿಂದ ಕೂಡಿದ 255 ಪುಟಗಳ ವ್ಯಾಪ್ತಿ ಹೊಂದಿದೆ. ಆಕರ್ಷಕ ಮುಖಪುಟ ಚಿಂತಕರ ಫೋಟೋ ಗಮನ ಸೆಳೆಯುವಂತಿದೆ. ಇದರ ಒಟ್ಟು ಹೂರಣ ದಲಿತ-ಸಮಾಜ-ಸಾಂಸ್ಕೃತಿಕಲೋಕದ ಧ್ವನಿತ್ವ ಲೇಖನಗಳ ಆಶಯಗಳೇ ಆಗಿವೆ. ಪ್ರೊ. ಪೋತೆ ಅವರ ಸಂಘರ್ಷದ ಬದುಕು, ಹೋರಾಟ ಬದ್ಧತೆ, ಬೆಂಕಿಯಲ್ಲಿ ಅರಳಿದ ಹೂವಿನಂತೆ ಅವರ ಎಲ್ಲಾ ಲೇಖನಗಳನ್ನು ಗಮನಿಸಿದಾಗ ವಿಭಿನ್ನವಾದ ಚಿಂತನೆಯನ್ನು ಕಟ್ಟಿಕೊಟ್ಟಿವೆ.

ಬುದ್ಧ-ಬಸವಣ್ಣ ಈ ನಾಡಿಗೆ ಕೊಟ್ಟ ಕಾಣಿಕೆ ಬಹು ದೊಡ್ಡದು. ಅವರ ಜೀವನ-ಹೋರಾಟ-ಸಂದೇಶಗಳು ಪ್ರಸ್ತುತ ಕಾಲಕ್ಕೆ ಹಿಡಿದ ಕನ್ನಡಿ. ಕ್ರಿ.ಪೂ.ದ ಬುದ್ಧ ಹನ್ನೆರಡನೆಯ ಶತಮಾನದ ಬಸವಣ್ಣ ಇಬ್ಬರು ಕಾಲದಿಂದ ಬೇರೆಯಾದರೂ ವಿಚಾರಗಳು, ತತ್ವ ಸಿದ್ಧಾಂತಗಳು ಒಂದೇಯಾಗಿವೆ. ಉತ್ತರ ಮತ್ತು ದಕ್ಷಿಣದ ಎರಡು ಮಹಾಕಥನಗಳು ಎಂಬ ರೂಪಕ ಕೊಡುತ್ತಾರೆ. ಸಿದ್ಧಾರ್ಥ ಜನಸಾಮಾನ್ಯರ ಮನೆಯಲ್ಲಿ ಊಟ ಮಾಡಿದ ಬಸವಣ್ಣ ಮಾದಾರ ಚೆನ್ನಯ್ಯನ ಮನೆಯ ಅಂಬಲಿಯನ್ನುಂಡವರು. ಚೆನ್ನಜ್ಜನ ಕಂಥಕನನ್ನು ಪ್ರೀತಿಸುವುದು, ಹೀಗಾಗಿ ಜೀವಕಾರುಣ್ಯದ ಚಿಂತಕರೆಂಬುದನ್ನು ಗುರುತಿಸಿದ್ದಾರೆ. ಬುದ್ಧನು ಆಸೆಯೇ ದುಃಖಕ್ಕೆ ಮೂಲವೆಂದು, ತನ್ನ ಅರಸೊತ್ತಿಗೆ ಬಿಟ್ಟು ಬಂದವರು. ಬಸವಣ್ಣನವರ ಸಾಮಾನ್ಯ ಜನರ ತಳಸಮುದಾಯಕ್ಕೆ ಮಿಡಿದವರು. ನನ್ನಕ್ಕಳಿಗಿಲ್ಲದ ಜನಿವಾರ ನನಗೇಕೆ ಎಂದು ಪ್ರಶ್ನಿಸಿ ಕಲ್ಯಾಣ ನಾಡಿಗೆ ಹೊರಟು ಬಂದ.

ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ.... ಎಂಬ ವಚನ ಸಾಲುಗಳನ್ನು ತೆಗೆದುಕೊಂಡು ಇಂದಿನ ಅನೇಕ ಕಥೆ-ಕಾದಂಬರಿಗಳು, ದಲಿತ-ಬಂಡಾಯದ ಪ್ರಖರಬರಹಗಾರರ ಲೇಖನಗಳು ಚಳವಳಿಗಳು ಎಲ್ಲಾ ಸೇರಿ

ಶೈಕ್ಷಣಿಕ ಚಿಂತನೆಯ ವಿಚಾರಧಾರೆಗಳಿಗೆ ಜೋಡಿಸಿ ಜಾಗತೀಕರಣದ ಈ ಹೊತ್ತಿನಲ್ಲಿ ತಲ್ಲಣಗಳನ್ನು ಹೇಳಿ ಸ್ಥಾವರ ಎಂಬುದರ ಕಡೆ ಜನ ಸಂಸ್ಕೃತಿ ನಡೆದಿದೆ. ಸ್ಥಾವರ ಬೇಡ ಜಂಗಮದ ಕಡೆ ನಡೆಯಬೇಕೆಂಬ ಆಶಯಗಳನ್ನು ವ್ಯಕ್ತಪಡಿಸುತ್ತಾರೆ.

ಥೈಲ್ಯಾಂಡ್, ಬ್ಯಾಂಕಾಕ್‌ನಲ್ಲಿ ಮಂಡಿಸಿದ ಪ್ರಬಂಧ ಬಸವಣ್ಣ ಬಯಸಿದ್ದ ಸಮಾಜ ಎಂಬ ಲೇಖನದಲ್ಲಿ ವರ್ಗ–ವರ್ಣ ವ್ಯವಸ್ಥೆ ಹೇಳುತ್ತಲೇ ಅಸ್ಪೃಶ್ಯತೆ ಕರಾಳತೆ ಪ್ರಸ್ತಾಪಿಸಿ ಅವರ ಜೀವನ, ಆತನ ಮೇಲೆ ಪ್ರಭಾವ ಬೀರಿದವು. ತಳವರ್ಗದ ಶರಣರು ಅನುಭವ ಮಂಟಪದಲ್ಲಿ ಸೇರಿ ಚರ್ಚಿಸುವುದಲ್ಲದೇ ಆ ಸಮುದಾಯದವರನ್ನು ತಬ್ಬಿಕೊಂಡ ಹರಳಯ್ಯ ದಂಪತಿಗಳು ಮಾಡಿದ ಚಪ್ಪಲಿಯನ್ನು ತಲೆ ಮೇಲೆ ಇಟ್ಟುಕೊಂಡು ತನ್ನ ಗುಣ, ಶ್ರೇಷ್ಠತೆ ಮಾನವೀಯತೆ ಮೆರೆದ ವ್ಯಕ್ತಿತ್ವ ಬಸವಣ್ಣನವರದು. ಬಸವಣ್ಣ ಹೆಂಗರುಳಿನ ಸ್ವಭಾವದ ವ್ಯಕ್ತಿ. ಕಾಯಕ–ದಾಸೋಹಕ್ಕೆ ಕೊಟ್ಟ ಕೊಡುಗೆ ಅಪಾರ. ಶೋಷಣೆರಹಿತ, ಜಾತ್ಯಾತೀತ, ಲಿಂಗ ತಾರತಮ್ಯರಹಿತ, ಮೌಢ್ಯರಹಿತವಾದದ್ದು ಸಮಾನತೆಯ ಸಮಸಮಾಜದ ನಿರ್ಮಾಣದ ಕನಸು ಕುರಿತು ಮನಮಿಡಿಯುವ ಹಾಗೇ ಲೇಖಕ ಪ್ರೊ. ಪೋತೆ ಅವರು ಪ್ರಸ್ತಾಪಿಸಿದ್ದಾರೆ. ಅಂಬೇಡ್ಕರ್ ಅವರ ಕುರಿತು ಪ್ರೊ. ಪೋತೆ ಅವರ ಬರಹ–ಭಾಷಣದಲ್ಲಿ ತಂದು ನಿಲ್ಲಿಸುತ್ತಾರೆ. ಅಂದರೆ ಅಷ್ಟೊಂದು ಪ್ರಭಾವಿತರಾಗಿ ಸಂಪೂರ್ಣ ಅಧ್ಯಯನ ಮಾಡಿದವರು. ತಲಸ್ಪರ್ಶಿಯಾದ ಅವರ ಗ್ರಹಿಕೆ ಸೂಕ್ಷ್ಮತೆಯಿಂದ ಕೂಡಿರುತ್ತವೆ. ಪ್ರಜ್ಞಾಪೂರ್ವಕವಾಗಿಯೇ ತಮ್ಮ ಲೇಖನಿಯೊಳಗಿಂದ ಅಂಬೇಡ್ಕರ್ ಅವರು ಹೇಗೆ ಪ್ರಸ್ತುತರಾಗುತ್ತಾರೆಂಬುದನ್ನು ವಿವಿಧ ನೆಲೆಗಳಲ್ಲಿ ಗ್ರಹಿಸಿದ್ದಾರೆ. ಗಾಂಧಿ ಮತ್ತು ಅಂಬೇಡ್ಕರ್ ಅವರ ಸಾರ್ವಕಾಲಿಕ ಶಕ್ತಿಗಳು ಎಂಬುದನ್ನು ನಿರೂಪಿಸುತ್ತಲೇ ಅವರು ಇಬ್ಬರು ಇಲ್ಲದ ಭಾರತವನ್ನು ಊಹಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಎಂದೇಳುತ್ತಲೇ ಒಬ್ಬರು ಜನಸಾಮಾನ್ಯರ ಉಪ್ಪಿಗಾಗಿ ಹೋರಾಡಿದ ಗಾಂಧಿ, ದುರ್ಬಲ ವರ್ಗದವರ ಏಳ್ಗೆಗಾಗಿ ಹೋರಾಡಿದ ಅಂಬೇಡ್ಕರ್ ಗಾಂಧಿ. ದೇಶ ದಾಸ್ಯದಿಂದ ಹೊರಬೇಕೆಂದರೆ ಅಂಬೇಡ್ಕರ್ ದೇಶದ ದಾಸ್ಯದಿಂದ ಅದರೊಳಗಡೆ ಸಮುದಾಯಗಳು ಶೋಷಣೆ ದಾಸ್ಯದಿಂದ ಹೊರಬರಬೇಕೆಂದಿದ್ದಾರೆ. ಈರ್ವರಲ್ಲಿ ಧರ್ಮ, ಮೀಸಲಾತಿ ಬಗ್ಗೆ ಭಿನ್ನಾಭಿಪ್ರಾಯವಿತ್ತು. ಅದರೊಳಗೆ ಅವರದೇ ಆದ ಮಿತಿಗಳಿದ್ದವು ಎಂದು ಗುರುತಿಸಿದ್ದಾರೆ. ಬಿಡುಗಡೆಯ ಪ್ರಜ್ಞೆಯ ಸಂಕೇತವಾಗಿ, ನೊಂದವರ ಹೊರಗಣ್ಣು–ಒಳಗಣ್ಣುಗಳಾಗಿ ಈರ್ವರು ಕೆಲಸ ಮಾಡಿದ್ದಾರೆ. ಅಂಬೇಡ್ಕರ್ ಬದುಕಬೇಕೆಂಬುದೇ ಬುದ್ಧನ ಬೆಳಕಲ್ಲಿ ಅರಳಿದೆ. ಅಂಬೇಡ್ಕರ್ ತತ್ವ–ಬೌದ್ಧತತ್ವ ತತ್ವದ ಮೇಲೆ ನೆಲೆನಿಂತಿದೆ. ಬುದ್ಧನ ತತ್ವಕ್ಕೆ ಮಾರುಹೋಗಿ ಬೌದ್ಧ ಧಮ್ಮ ಸ್ವೀಕರಿಸಿದರು. ಕಾರಣ ಹಿಂದೂ ಧರ್ಮ ಅದೊಂದು ಆಸೆಯ ಗೋಪುರ. ಹುಲ್ಲು ಸಿಗದು ಹೊಟ್ಟೆ ತುಂಬದು ಅಂತಹ ಪರಿಸ್ಥಿತಿಯನ್ನು ಕಥೆ ಮೂಲಕ ಲೇಖಕರು ನಿರೂಪಿಸಿದ್ದಾರೆ. ದೇಶ–ರಾಷ್ಟ್ರ ಕಂಡ ಚಿಂತಕ ಡಾ. ಅಂಬೇಡ್ಕರ್ ಅವರು ತೀರಾ ಬಡತನದಲ್ಲಿ ಹುಟ್ಟಿ, ಅಸ್ಪೃಶ್ಯತೆ ಅವಮಾನದ ಕರಾಳತೆ, ನೋವುಗಳನ್ನು ಅನುಭವಿಸಿದವರು. ಆದರೆ ಅವರಿಗೆ ಕಬೀರ, ತಂದೆ ರಾಮಜಿ ಸಕ್ಪಾಲ್, ದಾದಾ ಕೆಲೂಸ್ಕರ್, ಜ್ಯೋತಿಬಾಫುಲೆ, ಬುದ್ಧ, ಸಯ್ಯಾಜಿರಾವ ಗಾಯಕವಾಡ, ಛತ್ರಪತಿ ಶಾಹೂ ಮಹಾರಾಜರು, ವಿದೇಶದ ಆರ್.ಎ. ಸೆಲಿಗ್‌ಮನ್, ಜಸ್ಟಿಸ್, ಎಂ.ಜಿ. ರಾನಡೆ, ರಮಾಬಾಯಿ ಅವರ ಪ್ರಭಾವದಿಂದ ಸಂವಿಧಾನ ಶಿಲ್ಪಿಯಾಗಿ, ಚಿಂತಕರಾಗಿ, ಸಾಮಾಜಿಕ ನ್ಯಾಯದ ಹರಿಕಾರರು ಆಗಿರುವುದನ್ನು ತೌಲನಿಕವಾಗಿ ವಿವೇಚಿಸಿದ್ದಾರೆ. ಅಂಬೇಡ್ಕರ್ ದಾರ್ಶನಿಕತೆ ಲೇಖನದಲ್ಲಿ ಅವರ ಬಾಲ್ಯ ಜೀವನ, ಶಿಕ್ಷಣ, ವಿದೇಶ ಪ್ರಯಾಣ, ಮುಕ್ತ ವಾತಾವರಣ, ಅಧ್ಯಯನದ ಫಲಶೃತಿ, ಕರ್ತವ್ಯ ತಂದ ನೋವು, ಇಂಗ್ಲೆಂಡ್ ಪ್ರಯಾಣ, ಕರ್ತವ್ಯ ಕರೆ, ರಾಜಕೀಯದೆಡೆಗೆ, ಸಾರ್ಥಕ ಸಾಧನೆ, ದಾರ್ಶನಿಕರ ವಿಚಾರಗಳು, ರಾಮಕೃಷ್ಣರ ಕುರಿತು ಬೌದ್ಧ ಧರ್ಮದೆಡೆಗೆ ಮತಾಂತರ, ಮೀಸಲಾತಿ, ಶಿಕ್ಷಣ ಚಿಂತನೆ, ಕಾರ್ಮಿಕ ಕಾಳಜಿ ಹೀಗೆ ಸಂಕಿರಣದಲ್ಲಿ ಹಿರಿದಾದ ಅರ್ಥ ಕಲ್ಪಿಸಿಕೊಟ್ಟ ಸಮಗ್ರ ಅಂಬೇಡ್ಕರ್ ವ್ಯಕ್ತಿತ್ವ ದಾರ್ಶನಿಕತೆ ಇಲ್ಲಿ ಅನಾವರಣಗೊಳಿಸಿದ್ದಾರೆ. ಡಾ. ಅಂಬೇಡ್ಕರ್ ಎದುರಿಸಿದ ಕಷ್ಟಗಳನ್ನು ತುಂಬಾ ಅಧ್ಯಯನಪೂರ್ಣವಾಗಿ ದಾಖಲಿಸಿದ್ದಾರೆ. ಕಣ್ಣಲ್ಲಿ ನೀರು ಬರುವ ಹಾಗೇ ಆ ಸನ್ನಿವೇಶ, ಪ್ರಸಂಗ, ಘಟನೆಗಳು ಓದುಗರ ಮನಕಲಕುತ್ತವೆ.

ಡಾ. ಅಂಬೇಡ್ಕರ್ ಪುಸ್ತಕ ಪ್ರೀತಿ ಎಂಬ ಲೇಖನವೂ ಕೂಡಾ ಅಷ್ಟೇ ಮಹತ್ವದ್ದು. ಈ ಪ್ರಪಂಚದಲ್ಲಿ ಪುಸ್ತಕವನ್ನು ಅಂಬೇಡ್ಕರ್ ಪ್ರೀತಿಸಿದಷ್ಟು ಯಾರೂ ಪ್ರೀತಿಸಲಿಲ್ಲ. ಪುಸ್ತಕವೆಂದರೆ ಪಂಚಪ್ರಾಣ ಐವತ್ತು ಸಾವಿರಕ್ಕೂ ಹೆಚ್ಚು ಪುಸ್ತಕ ಹೊಂದಿದ ಗ್ರಂಥಾಲಯವೇ ಅವರಲ್ಲಿತ್ತು. ಅವರ ಓದು ಅಧ್ಯಯನ ಅವರ ವಿದ್ವತ್ ಈ ಪುಸ್ತಕ ಪ್ರೀತಿಯಲ್ಲಿದೆ ಎಂದು ಲೇಖಕರು ಮನಮುಟ್ಟುವಂತೆ ಹೇಳುತ್ತಾರೆ. ಕುವೆಂಪು ಅವರಿಗಿಂತ ಅಂಬೇಡ್ಕರ್ ಹಿರಿಯರು. ಅಂಬೇಡ್ಕರ್ ಚಿಂತನೆಯ ನೆಲೆಯಲ್ಲಿ ಕುವೆಂಪು ಮಾಡಿದರು. ಓ ನನ್ನ ಚೇತನ ಆಗು ನೀ ಅನಿಕೇತನ, ನೂರು ಮತದ ಹೊಟ್ಟ ತೂರಿ ಎಂಬ ಸಾಲುಗಳ ಗುಡಿ ಮಸೀದೆ ಚರ್ಚ ಬಿಟ್ಟು ಹೊರ ಬನ್ನಿ ಎಂಬ ವಿಚಾರಗಳು ಕುವೆಂಪು ಅವರಲ್ಲಿದ್ದವು ಎಂದಿದ್ದಾರೆ.

ಈಡಿಗ ಜನಾಂಗದ ನಾರಾಯಣ ಗುರು ಸಂತನಾಗಿ ಬಾಳಿದ್ದಾರೆ. ಅವರ ವೈಚಾರಿಕ ಪ್ರಗತಿಪರ ಆಶಯಗಳು ಕೇರಳದಲ್ಲಿ ದೊಡ್ಡ ಕ್ರಾಂತಿ ಮಾಡಿದ ಸಾಮಾಜಿಕ ಚಿಂತಕರ ವಿಚಾರಗಳನ್ನು ಕ್ರೋಢೀಕರಿಸಿ ವಿವರಿಸಿದ್ದಾರೆ. ಬಹುಮುಖ್ಯವಾದ ಲೇಖನ ಮಲ್ಲಿಕಾರ್ಜುನ ಖರ್ಗೆ ಬುದ್ಧತತ್ವ ದಾರಿ ಎಂಬ ಲೇಖನ ಕ್ರಿ.ಪೂ. ಬುದ್ಧನ ಕಾಲದಿಂದ ಬಸವಣ್ಣನ ಕಾಲ ಅಂಬೇಡ್ಕರ್ ಕಾಲದವರೆಗೂ ಹರಿದು ಆಧುನಿಕ ಇಂದಿನ ಯುಗದವರೆಗೆ ನೆಲೆನಿಂತ ಲೇಖನವಿದು. ಖರ್ಗೆಯವರು ಶಿಕ್ಷಣ ತಜ್ಞರಾಗಿ, ಸಮಾಜ ಸುಧಾರಕರಾಗಿ, ಕಾನೂನು ಪಂಡಿತರಾಗಿ, ರಾಜಕೀಯ ರಂಗದ ಮುತ್ಸದ್ದಿಯಾಗಿ ಬೆಳೆದು ಬಂದವರು. ರಾಜ್ಯ–ರಾಷ್ಟ್ರ ರಾಜಕಾರಣದಲ್ಲಿ ತತ್ವಬದ್ಧ ರಾಜಕಾರಣಿಯಾದವರು. ಸಂವಿಧಾನದ ರಕ್ಷಕರಾಗಿ ದಮನಿತರ ಪ್ರತಿನಿಧಿಯಾಗಿ ನಿಂತವರು. ಕಲಬುರಗಿಯಲ್ಲಿ ಸಿದ್ಧಾರ್ಥ ಬುದ್ಧ ವಿಹಾರ, ಅಂತರ್‌ರಾಷ್ಟ್ರೀಯ ಪಾಲಿ ಅಧ್ಯಯನ ಕೇಂದ್ರ, ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ, ದೂರದರ್ಶನ, ಇ.ಎಸ್.ಐ. ಆಸ್ಪತ್ರೆ, ಎಂ.ಕೆ. ಟ್ರಸ್ಟ್ (ಮಾಪಣ್ಣ ಖರ್ಗೆ) ಕೆ.ಪಿ.ಇ. ಸಂಸ್ಥೆ ಕಟ್ಟಿ ಬೆಳೆಸಿದವರು. ಬುದ್ಧತ್ವದ ಹಾದಿಯಲ್ಲಿ ನಡೆದವರು ಎಂದಿದ್ದಾರೆ.




ಮಲ್ಲಿಕಾರ್ಜುನ ಖರ್ಗೆ ಅವರ ಜೀವನ ಸಾಧನೆ ಹೋರಾಟ, ಸಾಧನೆಗಳನ್ನು ಹಂತಹಂತವಾಗಿ ಅಷ್ಟೇ ಸಮರ್ಪಕವಾಗಿ ದಾಖಲೆ ಸಮೇತ ನೀಡುವ ಕೆಲಸ ಇಡೀ ವ್ಯಕ್ತಿತ್ವ ಅನಾವರಣವನ್ನು ಬಸವಣ್ಣನ ನೆಲದಿಂದ ಎಂಬ ಲೇಖನ ಕುತೂಹಲಕಾರಿಯಾಗಿ ಮನಮುಟ್ಟುತ್ತವೆ. ಚಂದ್ರಪ್ರಸಾದ ತ್ಯಾಗಿ ಅವರ ದಲಿತ ಸಂಘರ್ಷ ಸಮಿತಿ ಹೋರಾಟದ ಹಾದಿ ಹಾಗೂ ಜಗಜೀವನರಾಮ ನೆನಪು ಲೇಖಕರು ಸಹ ನಮಗೆ ಹೊಸ ಬೆಳಕು ನೀಡುತ್ತವೆ.

ಗೊಂಚಲು ಎರಡರಲ್ಲಿ ಹನ್ನೆರಡು ಲೇಖನಗಳಿವೆ. ಚಿಂತನೆಗೆ ಹಾಗೂ ಅಧ್ಯಯನಕ್ಕೆ ಪೂರಕವಾಗಿವೆ. ಸಾಹಿತ್ಯ ಮತ್ತು ಸಮಾಜ, ವಿಮರ್ಶೆ ಈ ಮೂರು ನೆಲೆಗಳಲ್ಲಿ ಚಿಂತನೆಯ ಎಳೆಗಳನ್ನು ಕ್ರೋಢೀಕರಿಸಿ ವಿಶ್ಲೇಷಿಸಿ ಓದುಗರ ವಲಯಕ್ಕೆ ಚಿಂತನೆ ಮಾಡಲು ಬಿಡುತ್ತಾರೆ. ಸಾಹಿತ್ಯ ಮತ್ತು ಸಮಾಜ ಇವು ಬೇರೆ ಬೇರೆ ಅಲ್ಲ ಪೂರಕವಾಗಿ ಬಂದಿವೆ. ಸಮಾಜವನ್ನು ಒಂದೇ ರೀತಿ ನೋಡುವ ಅಗತ್ಯವಿಲ್ಲ. ಬೇರೆ ಬೇರೆ ವಿಜ್ಞಾನಿ–ಚಿಂತಕ–ಸಾಹಿತಿಗಳು ಬೇರೆ ದೃಷ್ಟಿಯಲ್ಲಿ ನೋಡುವರು. ಸಮಕಾಲೀನ ವಸ್ತುವನ್ನೇ ಸಾಹಿತಿ ಆರಿಸಿಕೊಳ್ಳಬೇಕು. ಪಂಪನಿಂದ ಮುದ್ದಣ್ಣ, ವಚನ, ಕೀರ್ತನ, ತತ್ವಪದ, ಆಧುನಿಕ ಕಾವ್ಯ ಸಾಹಿತ್ಯದಲ್ಲಿ ಸಾಹಿತ್ಯ ಸಮಾಜವನ್ನು ಗಮನಿಸಲು ಸಾಧ್ಯ. ಮ.ನ.ಜ.ರವರ ಸೂರಪ್ಪ, ಸಿದ್ಧಲಿಂಗಯ್ಯರ ಏಕಲವ್ಯ, ಕೆ.ಬಿ. ಸಿದ್ದಯ್ಯರ ಬಕಾಲ, ಬರಗೂರರ ಸೂರ್ಯ ಪುರಾಣ ಕಾಲದಿಂದ ಆಧುನಿಕ ಕಾಲದ ಚಿಂತನೆಗಳನ್ನು ಸಾಹಿತ್ಯದ

ಮೂಲಕ ಮಾಡಿದ್ದಾರೆ. ಜಲಗಾರ, ಬೆರಳ್ಗೆಗೆ ಕೊರಳ್, ಅಲ್ಲದೇ ದೇಶ–ವಿದೇಶದ ಸಾಹಿತ್ಯ ಕನ್ನಡ ಸಾಹಿತ್ಯದ ಪಲ್ಲಟಗಳು, ಮೋಸಕ್ಕೆ, ಜಾತಿಯಡೆಗೆ, ಶೋಷಿತ ದಮನಿತ ಸಮುದಾಯಗಳಿಗೆ ಸಾಹಿತಿಗಳು ಹೇಗೆ ಸ್ಪಂದಿಸಿದ್ದಾರೆ. ಇನ್ನೂ ಹೇಗೆ ಸ್ಪಂದಿಸಬೇಕೆಂಬ ಸಲಹೆಯನ್ನು ನೀಡಿದ್ದಾರೆ. ಸಾಹಿತ್ಯ ಮತ್ತು ಸಮಾಜ ಇವು ಕರುಳಬಳ್ಳಿ ಸಂಬಂಧವೆಂದಿದ್ದಾರೆ.

ವಿಮರ್ಶೆಗೊಳಗಾಗುವ ಬಗೆ ಇದೊಂದು ಅದ್ಭುತವಾದ ಲೇಖನ. ಇದುವರೆಗೂ ವಿಮರ್ಶಾ ಕ್ಷೇತ್ರದಲ್ಲಿ ಬರದೇ ಇರುವ ಹಲವು ಸಂಗತಿಗಳನ್ನು ತಂದು ವಾಸ್ತವಿಕ ಚಿತ್ರಣ ನೀಡುವ ಮೂಲಕ ವಿಮರ್ಶಿಸಿದ್ದಾರೆ. ನಮ್ಮ ಸಂವಿಧಾನದ ಆಶಯಕ್ಕೆ ದಕ್ಕೆ ಬರದ ಹಾಗೇ ನಾವು ವಿಮರ್ಶೆಗೊಳಗಾಗಬೇಕು. ಇರದಿದ್ದರೆ ದೇಶ–ಭದ್ರವಾಗುವುದಿಲ್ಲ ಎಂಬ ಎಚ್ಚರಿಕೆ ನೀಡಿದ್ದಾರೆ. ದಲಿತ ಸಾಹಿತ್ಯ ವಿಮರ್ಶೆ ಮತ್ತು ಸಾಮಾಜಿಕ ಪ್ರಜ್ಞೆ ಎಂಬ ಲೇಖನ ತುಂಬಾ ವ್ಯಾಪ್ತಿಯಿಂದ ಜಗದಗಲ ಹರಡಿಕೊಂಡಿದೆ. ನವೋದಯ ವಿಮರ್ಶೆ ಮೀಮಾಂಸೆ, ಪ್ರಗತಿಶೀಲ ಸಾಹಿತ್ಯ ಮೌಲ್ಯ ನಿರ್ಣಯಗಳು ಸಾಮಾಜಿಕ ಜೀವನ ಸಂಬಂಧದ ಹಿನ್ನೆಲೆ ನವ್ಯ ವ್ಯಕ್ತಿಗಿಂತ ಕೃತಿ ನಿಷ್ಠತೆಗೆ ಬದಲಾಗುವಂತೆ ದಲಿತ ಬಂಡಾಯದಲ್ಲಿ ವಸ್ತುನಿಷ್ಠತೆ ಜೊತೆ ಸಾಮೂದಾಯಿಕ ನೆಲೆ ನಿಂತಿದೆ. ಈ ಮೂರರಲ್ಲಿ ದಲಿತ ಸಾಹಿತ್ಯ ವಿಮರ್ಶೆಯ ಸಾಮಾಜಿಕ ಪ್ರಜ್ಞೆಯ ಹತ್ತು ಹಲವು ಹೊಸ ಆಲೋಚನೆಗಳನ್ನು ನೀಡಿದ್ದಾರೆ.

ಜಾಗತೀಕರಣದ ಈ ಹೊತ್ತಿನಲ್ಲಿ ಸಂಕೀರ್ಣ ಮನಸ್ಥಿತಿಯ ವಿರುದ್ಧ ಚಲನಶೀಲ ಸಂಸ್ಕೃತಿಯವಾದ ಹೇಗೆ ತನ್ನ ನೆಲೆ ಕಂಡುಕೊಳ್ಳುತ್ತಾ ಬಂದಿದ್ದೆ, ಈ ಎರಡು ವಾದಗಳ ಪರ ವಿರೋಧದ ಹಲವು ಚಿಂತನೆಗಳು ಈ ಲೇಖನದಲ್ಲಿ ಅಡಕವಾಗಿವೆ. ಬುದ್ಧನ ನೆಲದಲ್ಲಿ ಪ್ರಜ್ಞಾ–ಶೀಲ ಕರಣೆಯ ಮೂಲಕ ಜಾತಿ ವ್ಯವಸ್ಥೆಗೆ ಬುದ್ಧ ವಿರೋಧಿಸಿದ ಹಾಗೇ ಪಂಪ ಮಾನವಕುಲ ತಾನೊಂದೇ ವಲಂ ಎಂದು ಹೇಳಿದ, ಶರಣರು ಸಕಲಜೀವಾತ್ಮರಿಗೆ ಲೇಸಬಯಸಿದರು. ಸ್ವಾತಂತ್ರ್ಯಪೂರ್ವ ಹಾಗೂ ನಂತರದಲ್ಲಿ ಆದ ಪಲ್ಲಟಗಳನ್ನು ಪ್ರಖರವಾಗಿ ಲೇಖಕರು ಮಿಮರ್ಶೆಗೆ ಒಳಪಡಿಸಿದ್ದಾರೆ. ಧರ್ಮ, ಜಾತಿ, ಮತ, ಪಂಥ ಹೇಳುತ್ತಲೇ ತನ್ನ ಜೀವನದ ನೈಜ ಬರಗಾಲದ ಸ್ಥಿತಿಯೂ ಹೇಳುತ್ತಾರೆ. ಆರ್ಥಿಕ, ಸಾಮಾಜಿಕ, ಕಲೆ, ಸಾಹಿತ್ಯ, ಸಾಂಸ್ಕೃತಿಕವಾಗಿ ಹೇಗೆ ನಾವು ಕಾಣಬೇಕು ಹಾಗೂ ಧರ್ಮದ ನೆಲೆಯಲ್ಲಿ ಶ್ರೀಕೃಷ್ಣ ದೇವಾಲಯ, ಮಂತ್ರಾಲಯದಲ್ಲಿ ಇವು ನಮ್ಮವ ಅಥವಾ ಬೇರೆ ಎಂಬ ಕಾರಣಕ್ಕೆ ಬಟ್ಟೆ ಬಿಚ್ಚಿ ಒಳಬರಲು ಸೂಚಿಸುತ್ತಾರೆ. ಹೀಗಾದಾಗ ಗೃಹ ಸಚಿವರು ವಿ.ಎಸ್. ಆಚಾರ್ಯ ಅವರಿಗೆ ಲೇಖಕರು ಪ್ರಶ್ನಿಸಿದ್ದಾರೆ. ಹೀಗಾದರೆ ಸಾಂಸ್ಕೃತಿಕ ಲೋಕ ಅಧಃಪತನಕ್ಕೆ ಹೋಗಿದೆ ಎಂದು ವಿವೇಚಿಸಿದ್ದಾರೆ.

\ಗಂಡಾಳಿಕೆಯಲ್ಲಿನ ಮಹಿಳಾ ಅಸ್ಮಿತೆಯ ಚಹರೆಗಳು ಎಂಬ ಲೇಖನ ವೇದಪೂರ್ವಕಾಲದಿಂದ ಭಾರತೀಯ ಸಂಸ್ಕೃತಿಯಲ್ಲಿ ಮಹಿಳೆಯನ್ನು ಆರ್ಯರು ಬಂದ ನಂತರ ನೋಡಿಕೊಂಡ ಬಗೆ, ಅದನ್ನು ಹೀಗೆ ಮುಂದುವರೆಸಿಕೊಂಡು ಬಂದ ಅಸ್ಮಿತೆಯನ್ನು ಗುರುತಿಸಿದ್ದಾರೆ. ಆಧುನಿಕ ಸಾಹಿತ್ಯದ ದಲಿತ ಸಾಹಿತ್ಯದ ಮುಖ್ಯ ಕಥೆ–ಕಾದಂಬರಿಯ ಚಿಂತಕ ದೇವನೂರು ಮಹಾದೇವರ ಕುರಿತು ಅವರ ಕಥೆಗಳಲ್ಲಿ ದಲಿತತ್ವದ ಬಗೆ ಹೇಗೆ ಅನಾವರಣಗೊಂಡಿದೆ ಎಂಬುದನ್ನು ತಲಸ್ಪರ್ಶಿಯಾಗಿ ನೀಡಿದ್ದಾರೆ. ಮಾನವೀಯ ಅಂತಃಕರಣದ ಮೂಲಕ ಅನಾವರಣಗೊಂಡ ದೇವನೂರರ ಕಥೆಗಳು. ಅವು ಸಹಜ ಮತ್ತೆ ತನ್ನೊಡಲ ಕರುಳ ಬಳ್ಳಿಯಿಂದ ಅರಳಿದವುಗಳಾಗಿವೆ ಎಂಬ ಸತ್ಯತೆ ಹೇಳಿದ್ದಾರೆ. ದ್ಯಾವನೂರು ಕಥಾ ಸಂಕುಲನದ ಒಳಗಡೆ ಶೋಷಿತ, ದಮನಿತ ಅನ್ನುವರ ಜಗತ್ತನ್ನು ಅನಾವರಣಗೊಳಿಸಲಾಗಿದೆ. ಮಾರಿಕೊಂಡವರು ಕಥೆ ಜಾತಿ ವ್ಯವಸ್ಥೆಯ ಕ್ರೌರ್ಯವನ್ನು ಪ್ರತಿಬಿಂಬಿಸುದರಿಂದಲೇ ಅಮಾಸ, ಗೃಹಸ್ಥರು, ಡಾಂಬರು ಬಂದದು ಎಂಬ ಕಥೆಗಳು ದಲಿತ ಜೀವನದ ಚಿಂತನೆಯ ಧಾರೆಗಳಾಗಿವೆ.

ಅಂತರ್ಜಾತಿ ವಿವಾಹ ಹೇಗೆ ಬದುಕಿನಲ್ಲಿ ತಲ್ಲಣಗಳನ್ನು ಸೃಷ್ಟಿ ಮಾಡುತ್ತದೆ ನಾಗರಿಕತೆಯಿರುವ ಹಳ್ಳಿಯ ಜನಜೀವನ ಪ್ರಭಾವ, ಜಾತಿ, ಧಾರ್ಮಿಕ ವ್ಯವಸ್ಥೆಯ ಚಿತ್ರಣಗಳನ್ನು ವಿಶ್ಲೇಷಿಸುತ್ತಲೇ, ದಲಿತ ಜಗತ್ತನ್ನು ಸಂವೇದನಾಶೀಲ ಜನ ಕೇರಿಯ ಭಾಷೆಯಲ್ಲಿ ಪ್ರಭಾವಶಾಲಿಯಾಗಿ ಚಿತ್ರಿಸುವ ಕಥೆಗಳನ್ನು ಪ್ರೊ. ಪೋತೆ ಅವರು ಗುರುತಿಸಿದ್ದಾರೆ.

ದೇವರು–ಧರ್ಮದ ಬಗೆಗೆ ನಂಬುಗೆಗಳು ಹೇಗೆ ನಿರ್ವಚಿಸುವ ಬಗೆಯನ್ನು ಕುತೂಹಲಪೂರ್ಣವಾಗಿ ನೋಡಬೇಕಾಗಿದೆ. ಜನಪದರ ಕುಟುಂಬ ಜೀವನದಿಯ ಶರಣರು, ದಾಸರು, ತತ್ವಪದಕಾರರು ಹಾಗೂ ಇವತ್ತಿನ ಸಾಹಿತ್ಯ ಸಮಾಜದ ಮೂಲಕ ಅಭಿವ್ಯಕ್ತಿಸುವ ಕಲೆ ಇಲ್ಲಿ ದಾಖಲಾಗಿವೆ. ಕನ್ನಡನಾಡಿನ ಚಳವಳಿಗಳು ಮತ್ತು ಮಹಿಳಾ ತಾತ್ವಿಕತೆ ಎಂಬ ಲೇಖನದಲ್ಲಿ ಚರ್ಚೆಗೊಂಡಿವೆ. ಮಹಿಳಾ ಅಸ್ಮಿತೆ ಚಹರೆಗಳು ಎಂಬ ಲೇಖನದ ಮುಂದುವರಿಕೆಯಂತೆ ಕಂಡುಬರುತ್ತದೆ. ಬಹುಭಾಷೆ, ಬಹು ಸಂಸ್ಕೃತಿಗಳ ನಡುವೆ ಮಹಿಳೆಯನ್ನು ಒಬ್ಬಂಟಿಗರನ್ನಾಗಿ ಮಾಡಿದ್ದಾರೆ. ಬುದ್ಧ–ಬಸವ–ಅಂಬೇಡ್ಕರ್ ಹಾಗೂ ಅನೇಕ ಚಿಂತಕರ ಆಶಯಗಳು ದಾಖಲುಗೊಂಡಿವೆ. ಅನೇಕ ಚಳವಳಿ ಮಧ್ಯ ರೈತ, ಕಾರ್ಮಿಕರಲ್ಲಿ ಮಹಿಳಾ ಚಳವಳಿಯ ಬಗೆಗೆ ಅನೇಕ ಮಹಿಳೆಯರು ಪಾಲ್ಗೊಂಡಿಲ್ಲ. ಕಾರಣ, ರೈತರು ಸಹ ಮಹಿಳೆರನ್ನು ಮುಕ್ತನಾಗಿ ಬಿಟ್ಟಿಲ್ಲ. ಆಧುನಿಕ ಸಾಹಿತ್ಯದಲ್ಲಿ ಎ.ಜಿ. ರತ್ನ ಕಾಳೆ, ಅನಸೂಯ, ಜಯದೇವಿ, ಬಾಳಿ, ಹಾಗೂ ಕೆ. ನೀಲಾರಂತ ಹೆಸರು ಹೇಳುವ ಮೂಲಕ ವರ್ತಮಾನದ ಮಹಿಳಾ ಚಳವಳಿಗೆ ಇಂಬು ನೀಡಿದ್ದಾರೆ.

ತುಳಿಯದಿರಿ ಮತ್ತೆ ಮತ್ತೆ ಎಂಬ ಲೇಖನ ರಾಜಕೀಯ ವಲಯದಲ್ಲಿ ತಲ್ಲಣಗೊಳಿಸುವುದಾಗಿದೆ. ಸಿದ್ಧರಾಮಯ್ಯನವರು ಮುಖ್ಯಮಂತ್ರಿಯಾದ ಬಗೆಗೆ ಲೇಖಕರಿಗೆ ಸಂತಸವಿದೆ. ಆದರೆ ದಲಿತೇತರ ವಿಷಯ ಬಂದಾಗ ಅಲ್ಲಿ ವಿರೋಧಿಸುವ ನೆಲೆಯು ಕಾಣುತ್ತೇವೆ. ಹೀಗೆ ನಮ್ಮನ್ನು ತುಳಿಯದಿರಿ ಎಂಬ ನಿಲುವು ಪ್ರತಿಪಾದಿಸಿದ್ದಾರೆ. ರಾಮ–ಹನುಮರ ಕೂಡಿದ ಪೌರಾಣಿಕ ವ್ಯಕ್ತಿಗಳ ಅನೇಕ ವಿಚಾರಗಳು ಇಲ್ಲಿ ದಾಖಲಾಗಿವೆ. ಭಾರತದ ಮೂಲದಿಂದ ಹುಟ್ಟಿದ ಇನ್ತಿಜಾರ್ ಹುಸೇನ್ ಎಂಬ ಲೇಖಕ ಪಾಕ್ ನೆಲಕ್ಕೆ ಹೋಗಿ ಬರೆದ ಕಥೆಗಳು ಅವರ ೦ ಟಿuಡಿಟಿಚಿಥಿ ಣo ಣhe ಟಿeಚಿಡಿeಥಿ ಎಂಬ ಕಥೆಗಳು ನವಿಲು ಪುರಾಣ ಎಂದು ಕನ್ನಡಕ್ಕೆ ಪ್ರೊ. ಕೆ.ಈ. ರಾಧಾಕೃಷ್ಣರು ಅನುವಾದಿಸಿದ್ದಾರೆ. ಅವರು ಒಟ್ಟು ಕಥೆಗಳು ನಮ್ಮ ಜೀವನ ಸಮಾಜಕ್ಕೂ ಪ್ರಸ್ತುತ ಅನೇಕ ಕನ್ನಡದ ಕಥೆಗಾರರ ಸಾಲಿನಲ್ಲಿ ನಿಲ್ಲುವ ಕಥೆಗಳಾಗಿವೆ

ಪ್ರಸ್ತುತ ಸಮಾಜ ಭಾರತಕ್ಕೆ ಹಿಡಿದ ಎರಡು ಕನ್ನಡಿಗಳು ಎಂದರೆ ಹೊಸ ಶಿಕ್ಷಣ ನೀತಿ ಹಾಗೂ ಮನ್‌ಕೀ ಬಾತ್ ಚರ್ಚಿಸಲೇ ಬೇಕಾದ ಸಂಗತಿ. ಪ್ರಗತಿಪರರೂ ಬಂಡಾಯ–ದಲಿತಕಾರರ ಮೌನಕ್ಕೆ ಶರಣಾಗುವ ಹೊತ್ತಿನಲ್ಲಿ ಪ್ರೊ. ಪೋತೆ ಅವರು ಈ ಎರಡು ವಿಷಯಗಳ ಕುರಿತು ಗಮನ ಸೆಳೆದವರು ಓಇಕ ರಾಷ್ಟ್ರೀಯ ಶಿಕ್ಷಣ ನೀತಿ ಇಂದು ಹೇಗೆ ಅನುಸರಿಸಬೇಕು, ಅದರ ಪೂರ್ವ ತಯಾರಿ ಇಲ್ಲದೇ ಹೇಗೆ ಅವನ್ನು ಜಾರಿಗೆ ತಂದರು. ಈ ಶಿಕ್ಷಣ ಪದ್ಧತಿಯ ಸಾಧಕ–ಬಾಧಕಗಳನ್ನು ವಸ್ತುನಿಷ್ಠವಾಗಿ ವಿವರಿಸಿದ್ದಾರೆ. ಇದಕ್ಕೆಲ್ಲ ರೂಪಿಸುವವರು ಸಂವಿಧಾನದ ಮೂಲಕ ರೂಪಿಸಬೇಕು. ಇರದಿದ್ದರೆ ಸಮತೋಲನ ಕಾಣಸಿಗದು ಎಂದು ತಮ್ಮ ಹರಿತ ಬರಹದಲ್ಲಿ ಉಲ್ಲೇಖಿಸಿದ್ದಾರೆ. ಒಂದು ದೇಶ ಒಂದೇ ನೀತಿ! ಒಂದು ದೇಶ ಒಂದೇ ತೆರಿಗೆ! ಒಂದು ದೇಶ ಒಂದೇ ಚುನಾವಣೆ! ಒಂದು ದೇಶ ಒಂದೇ ಕಾರ್ಡು! ಇವೆಲ್ಲಾ ಓಕೆ..! ಆದರೆ....! ಒಂದು ದೇಶ ಸಾವಿರಾರು ಜಾತಿ ಯಾಕೆ? ಇಡೀ ದೇಶವನ್ನೆಲ್ಲಾ ಒಂದೇ ಎನ್ನುವ ಪ್ರಭಾವಿ ಸಮಾಜದ ಚಿಂತನೆಯ ನರೇಂದ್ರ ಮೋದಿ ಅವರ ವಿಚಾರಗಳಿಗೆ ಪ್ರಶ್ನೆ ಕೇಳುತ್ತಾರೆ. ಇದೊಂದು ಅಪೂರ್ವ ಇದುವರೆಗೂ ಯಾರೂ ಮಾತನಾಡದ ಸ್ಥಿತಿಯಲ್ಲಿರುವಾಗ ಪ್ರಬುದ್ಧ ಲೇಖಕರಾಗಿ ಈ ದೇಶದ ವ್ಯವಸ್ಥೆಯಲ್ಲಿ ಪ್ರಧಾನಮಂತ್ರಿ ನೀತಿಯನ್ನು ಪ್ರಶ್ನಿಸುತ್ತಾರೆ.

ದಲಿತ ಅಸ್ಮಿತೆ ಎಂಬ ಪ್ರೊ. ಪೋತೆ ಅವರ ಲೇಖನಗಳು ವೈವಿಧ್ಯತೆ, ವೈಚಾರಿಕತೆ, ವಿಚಾರ ಪ್ರಫುಲತೆಯಿಂದ ಗಟ್ಟಿಯಾದ ನಿಲವು ಹೊಂದಿದ್ದಾರೆ. ರಾಜೀಯಾಗಲಿ ಅಥವಾ ಯಾವುದೇ ಕಾರಣಕ್ಕೂ ಒಂದು ಕಡೆ ವಾಲುವುದಾಗಲಿ ಲೇಖಕರು ಮಾಡದೇ ತಮ್ಮ ಪ್ರಖರ ನಿಖರ ಹಾಗೂ ಸ್ಪಷ್ಟವಾದ ವಿಚಾರಗಳಿಂದ ಗೊಂದಲ ಸೃಷ್ಟಿಸದೇ ಗಟ್ಟಿ ನಿರ್ಧಾರದಿಂದ ಅಧ್ಯಯನಪೂರ್ಣ ಶೀಲತೆಯಿಂದ ಕೂಡಿವೆ. ಇವು ವಿದ್ವಾಂಸರು, ಚಿಂತಕರ ಅಧ್ಯಯನಗಳಿಗೆ–ವಿಚಾರವಂತಿಕೆಗೆ ಯುವ ಲೇಖಕರಿಗೆ, ಯುವಕರಿಗೆ, ಸಮುದಾಯಗಳಿಗೆ ಸ್ಫೂರ್ತಿದಾಯಕ ಪ್ರೇರಣದಾಯಕವಾದ ದಲಿತ ಅಸ್ಮಿತೆ ಕೃತಿಯಾಗಿದೆ. ಇಂತಹ ಮೌಲಿಕ ಕೃತಿಯನ್ನು ಕನ್ನಡ ಸಾರಸ್ವತ ಲೋಕಕ್ಕೆ ನೀಡಿದ ಪ್ರೊ. ಪೋತೆ ಅವರಿಗೆ ಅಭಿನಂದನೆಗಳು ಸಲ್ಲಬೇಕಾಗಿದೆ.

# ಮಹಾಬಿಂದು: ದಲಿತ ಸಂಕಟಗಳಿಂದ ಬಿಡುಗಡೆಯ ಹಂಬಲ

ಹಿಂದೂ ಧರ್ಮದ ದ್ವಂದ್ವಗಳನ್ನು ಸರಿಪಡಿಸುವುದಕ್ಕಾಗಿ, ಮನುಷ್ಯ ಸಂಬಂಧಗಳ ಗಾಢತೆಗಾಗಿ, ಹೊಸ ದಾರಿಯೊಂದರ ಹರಿಕಾರರಾಗಿ ಶ್ರಮಿಸಿದ್ದಾರೆ. ದುರಂತದ ಸಂಗತಿಯೆಂದರೆ ಇಲ್ಲಿ ಪ್ರತಿನಿಧಿಸುವ ಈ ದೇಶದ ದಲಿತ ಸಮುದಾಯದ ಸಂರಚನೆಗಳು ಇಂದಿಗೂ ಬದಲಾಗಿಲ್ಲ.

'ಮಹಾಬಿಂದು' ಎಚ್.ಟಿ. ಪೋತೆಯವರ ಕಾದಂಬರಿ. ಈ ಲೇಖಕರು ತಾವು ಅನುಭವಿಸಿದ ಮತ್ತು ದಲಿತ ಸಮುದಾಯ ಶತ ಶತಮಾನಗಳಿಂದ ಶೋಷಣೆಗೆ ಒಳಗಾಗಿ ಪಡುತ್ತಿರುವ ಪಾಡು, ಕಷ್ಟ, ಕಾರ್ಪಣ್ಯ, ಅವಮಾನ, ಸಾಮಾಜಿಕ ಬಿಕ್ಕಟ್ಟುಗಳನ್ನೇ ಕಾದಂಬರಿಯ ಭಿತ್ತಿಯಾಗಿಸಿಕೊಂಡಿದ್ದಾರೆ. ಕೊರೊನಾ ಮಹಾರೋಗ ಜಗತ್ತಿನಲ್ಲಿ ಉಂಟುಮಾಡಿದ ಅಲ್ಲೋಲ ಕಲ್ಲೋಲ, ತಲ್ಲಣ, ಆತಂಕ, ಮನುಷ್ಯ ಸಂಬಂಧಗಳ ನಾಟಕೀಯತೆ, ಸ್ವಾರ್ಥ ಮನೋಭಾವಗಳನ್ನು ನಿಚ್ಚಳವಾಗಿ ತೆರೆದು ತೋರಿಸಿತು. ಇದೇ ವಿಷಯವನ್ನು ಒಂದು ನೆಪವಾಗಿಟ್ಟುಕೊಂಡು ಆರಂಭವಾಗುವ ಈ ಕಾದಂಬರಿಯ ಕಥನ ನಿಧಾನವಾಗಿ ಶಿಥಿಲತೆಗೊಂಡ ಮನುಷ್ಯ ಸಂಬಂಧಗಳ ಬಗೆಗೆ, ಅಸಮಾನತೆಯ ಸಮಾಜದ ಕಟು ವಾಸ್ತವದ ಬಗೆಗೆ ಶೋಧನೆಗಿಳಿಯುತ್ತದೆ. ಕಥೆಯ ನಿರೂಪಕರಾದ ಪ್ರೊ. ರಾವ್' ಬುದ್ಧ ಮತ್ತು ಆತನ ಧಮ್ಮ' ಕೃತಿಯನ್ನು ಓದಿಗಾಗಿ ಎತ್ತಿಕೊಂಡಾಗ ಮನದಲ್ಲಿ ಏನೆಲ್ಲ ಆಲೋಚನೆಗಳು ಸುಳಿದು ಹೋಗುತ್ತವೆ.



ಡಾ. ದಸ್ತಗೀರಸಾಬ್ ದಿನ್ನಿ
ಎಂ.ಎ. ನಭೀ, 1ನೇ ಕ್ರಾಸ್, ಶಾಸ್ತ್ರಿ ನಗರ, ಟಿ.ಜಿ.ಬಿ. ಕಾಲೋನಿ, ಬಳ್ಳಾರಿ.

ನಿರೂಪಕ ಬುದ್ಧನ ಬದುಕು ಮತ್ತು ವಿಚಾರ ಧಾರೆಗಳ ಕನಸು ಕಾಣುತ್ತಾನೆ. ಬುದ್ಧವಿಹಾರದ ಕಡೆ ಕಾರಿನಲ್ಲಿ ಹೋಗುವಾಗ ಕೊರೊನಾ ಸೃಷ್ಟಿಸಿದ ಭೀತಿಯೊಂದಿಗೆ ಬಹಳ ಮುಖ್ಯವಾಗಿ, ದಲಿತ ಸಮುದಾಯದ ಹಸಿವು, ಬಡತನ, ಅಸಹಾಯಕತೆ, ಉಕ್ಕುವ ವಿಷಾದ, ಸ್ಥಿತಿಗತಿ, ಸವಾಲುಗಳು ಇನ್ನಿಲ್ಲದಂತೆ ಕಾಡುತ್ತವೆ. ಇಲ್ಲಿ ತಥಾಗತರು ಮತ್ತು ನಿರೂಪಕ ರಾವ್ ಅವರೊಂದಿಗೆ ಸುದೀರ್ಘವಾದ ಮಾತುಕತೆ ನಡೆಯುತ್ತದೆ. ಬುದ್ಧ, ಬಸವ, ಕನಕ, ಗಾಂಧಿ, ಅಂಬೇಡ್ಕರ್ ಮುಂತಾದವರು ಸಮಾನತೆ, ಜಾತ್ಯತೀತ ಪರಿಕಲ್ಪನೆ, ಹೊಸ ಸಮಾಜದ ನಿರ್ಮಾಣಕ್ಕಾಗಿ ಅವಿರತವಾಗಿ ಶ್ರಮಿಸಿದ ಬಗೆಗೆ, ಆಳವಾದ ಅವರ ಜೀವಪರ ಚಿಂತನೆಗಳ ಬಗೆಗೆ ನೆನಪಿನ ಸುರುಳಿ ಬಿಚ್ಚಿಕೊಳ್ಳುತ್ತ ಹೋಗುತ್ತದೆ. ಸಮಾಜ ಸುಧಾರಕರು ಏನೆಲ್ಲ ಬದಲಾವಣೆಯ ಕನಸು ಕಂಡಿದ್ದರೂ ಸಮಾಜದಲ್ಲಿ ಯಾವುದೇ ಪಲ್ಲಟಗಳಾಗಿಲ್ಲ ಎನ್ನುವ ದಟ್ಟವಾದ ವಿಷಾದ ಈ ಕಾದಂಬರಿಯ ಉದ್ದಕ್ಕೂ ಹರಿದಿದೆ. ಇಲ್ಲಿನ ಇಡೀ ವಸ್ತು ಕನಸಿನಲ್ಲಿಯೇ ನಡೆಯುತ್ತದೆ ಎನ್ನುವುದು ಗಮನಾರ್ಹ. ಇದು 'ಮಹಾಬಿಂದು' ಕಾದಂಬರಿ ಒಂದು ಸೃಜನಶೀಲ ಕೃತಿಯಾಗಿ ಅನನ್ಯವಾಗಿ ಅರಳಿಕೊಂಡ ಪರಿ.

ಕಾದಂಬರಿಯಲ್ಲಿ ಹನ್ನೆರಡು ಅಧ್ಯಾಯಗಳಿವೆ. ದಲಿತ ಸಮುದಾಯದ ವಿಭಿನ್ನ




ಚಹರೆಗಳೊಂದಿಗೆ ಇದರ ಹರವು ಚಾಚಿಕೊಂಡಿದೆ. ಇಲ್ಲಿ ಚರಿತ್ರೆಯ ಅಂತಃಸತ್ವವನ್ನು ಪ್ರಶ್ನಿಸುವ, ಹೊಸ ನೆಲೆಯಲ್ಲಿ ಶೋಧಿಸುವ ಕೆಲಸವನ್ನು ಪೋತೆಯವರು ಮಾಡಿದ್ದಾರೆ. ಆಧುನಿಕ ಭಾರತವನ್ನು ಜಾತಿ, ಅಸ್ಪೃಶ್ಯತೆ, ಅವಮಾನ, ದೈಹಿಕ ಹಲ್ಲೆ, ಧಾರ್ಮಿಕ ಶೋಷಣೆ, ಮಹಿಳಾ ಅತ್ಯಾಚಾರ ಇವೆಲ್ಲವೂ ಕಬಂಧ ಬಾಹುಗಳಾಗಿ ದಟ್ಟವಾಗಿ ಆವರಿಸಿವೆ. ಬುದ್ಧ, ಬಸವಣ್ಣ, ಕನಕದಾಸ, ಅಂಬೇಡ್ಕರ್. ಮಹಾತ್ಮ ಗಾಂಧಿ, ರಾಮಸ್ವಾಮಿ ಪೆರಿಯಾರ್ ಮುಂತಾದ ಸಾಮಾಜಿಕ ನೇತಾರರು ಸ್ವಾತಂತ್ರ್ಯ, ಸಮಾನತೆಯ ಸಮಾಜಕ್ಕಾಗಿ, ಜಾತ್ಯತೀತ ಮನೋಭಾವಕ್ಕಾಗಿ, ಹಿಂದೂ ಧರ್ಮದ ದ್ವಂದ್ವಗಳನ್ನು ಸರಿಪಡಿಸುವುದಕ್ಕಾಗಿ, ಮನುಷ್ಯ ಸಂಬಂಧಗಳ ಗಾಢತೆಗಾಗಿ, ಹೊಸ ದಾರಿಯೊಂದರ ಹರಿಕಾರರಾಗಿ ಶ್ರಮಿಸಿದ್ದಾರೆ. ದುರಂತದ ಸಂಗತಿಯೆಂದರೆ ಇಲ್ಲಿ ಪ್ರತಿನಿಧಿಸುವ ಈ ದೇಶದ ದಲಿತ ಸಮುದಾಯದ ಸಂರಚನೆಗಳು ಇಂದಿಗೂ ಬದಲಾಗಿಲ್ಲ. ಮೇಲ್ವರ್ಗ ಅದರಲ್ಲೂ ಸನಾತನ ವ್ಯವಸ್ಥೆಯ ಅಸಹಿಷ್ಣುತೆ ದಲಿತರನ್ನು ಶೋಷಣೆಯ ಕೂಪಕ್ಕೆ ತಳ್ಳುತ್ತಲೇ ಇವೆ ಎನ್ನುವ ನಿಲುವನ್ನು ಲೇಖಕರು ಪ್ರಜ್ಞಾ ಪೂರ್ವಕವಾಗಿ ತಾಳಿದ್ದಾರೆ. ಇಲ್ಲಿ ಗತವನ್ನು, ವರ್ತಮಾನದ ವೈರುಧ್ಯಗಳನ್ನು ಲೇಖಕರು ಒರೆಗೆ ಹಚ್ಚಿ ನೋಡಿದ್ದಾರೆ. ಅವರ ಪ್ರಧಾನ ಕಾಳಜಿ ಇರುವುದು ನಿರ್ಲಕ್ಷಿತ ದಲಿತ ಸಮುದಾಯ ತಲ್ಲಣಗಳಿಂದ ಬಿಡುಗಡೆಯಾಗುವ ಬಗೆಗೆ. ಬುದ್ಧನ ಕರುಣೆ, ಬಸವನ ವೈಚಾರಿಕ ಪ್ರಜ್ಞೆ, ಗಾಂಧಿಯ ಸ್ವಾತಂತ್ರ್ಯ. ಅಂಬೇಡ್ಕರರ ಸಮಾನತೆಯ ಸಿದ್ಧಾಂತಗಳನ್ನು ಮರು ರೂಪಿಸುವ ಬಗೆಗೆ. ಸೌಹಾರ್ದತೆ, ಸಹಬಾಳ್ವೆಯನ್ನು ಈ ನೆಲದಲ್ಲಿ ಸಾಂದ್ರವಾಗಿ ಕಟ್ಟುವ ಬಗೆಗೆ. ಎದೆ ಎದೆಗಳಲ್ಲಿ ಎಂದೂ ಆರದ ಪ್ರೀತಿಯ ಹಣತೆಗಳನ್ನು ಹಚ್ಚುವ ಬಗೆಗೆ. ಈ ತೆರನಾದ ಆಶಯಗಳು ಭಾರತದ ನೆಲದಲ್ಲಿ ಬೇಗ ಈಡೇರಿ, ಹಣ್ಣಾಗಲು ಕಾದಂಬರಿ ಒತ್ತಾಸೆಯಾಗಿ ನಿಲ್ಲುತ್ತದೆ. ಈ ಕಾದಂಬರಿಯಲ್ಲಿ ಅಧೋ ಲೋಕದ ತಳಮಳ, ಚಡಪಡಿಕೆಗಳಿವೆ. ಮಾನವೀಯ ಹುಡುಕಾಟ, ಮನುಷ್ಯನ ಘನತೆಯನ್ನು ಎತ್ತಿ ಹಿಡಿಯುವ ಹಂಬಲಗಳಿವೆ. ಬಹುತ್ವದ ಅಸ್ತಿತ್ವವನ್ನು ಕಾಪಿಡುವ, ಜೀವಪರ ಸಂವೇದನೆಗಳಿವೆ.

ಹಾಗೆಯೇ ಪ್ರತಿರೋಧದ ಉರಿ, ವೈಚಾರಿಕತೆಯ ಬೆಳಕಿದೆ. ಇಲ್ಲಿ ನಾಟಕೀಯತೆ ಇಲ್ಲ. ದಲಿತರ ಸತ್ಯದ ಸಂಕಥನವಿದೆ.

ಕಾದಂಬರಿಯು ಪ್ರಗತಿಪರ ಆಶಯ, ಅಭಿವ್ಯಕ್ತಿಯ ವಿಧಾನ, ಕಥನ ಕಲೆಯ ಕಲೆಗಾರಿಕೆ, ವಿಭಿನ್ನವಾದ ನೇಯ್ಗೆ, ಸಹಜವಾದ ಭಾಷೆಯ ಬಳಕೆಯಿಂದಾಗಿ ತೀವ್ರವಾಗಿ ಗಮನ ಸೆಳೆಯುತ್ತದೆ. ಇಲ್ಲಿ ಬರುವ ಕೆಲ ಪ್ರಸಂಗಗಳು ಮೆಲ್ಲನೆ ತಾಕುವಂತಿವೆ. ನಿಕಷಕ್ಕೆ ಈಡು ಮಾಡುವಂತಿವೆ. ಮಿಥ್‌ಗಳನ್ನು ಬಳಸಿಕೊಂಡು ಸಮಕಾಲೀನವಾಗಿ ನೋಡಿದ್ದರಿಂದಾಗಿ ಕಾದಂಬರಿಗೆ ಒಂದು ಅಧಿಕೃತತೆ ಪ್ರಾಪ್ತವಾಗಿದೆ. ಇದು ಕೃತಿಯ ಸಾರ್ಥಕತೆ. ಎರಡು ದಶಕಗಳ ನಂತರ ದಲಿತ ಸಾಹಿತ್ಯ ಲೋಕಕ್ಕೆ ಹೊಸ ಸಾಧ್ಯತೆಯಾಗಿ ಈ ಕೃತಿ ಸೇರ್ಪಡೆಯಾಗುತ್ತಿದೆ. ಇದು ಆಶಾದಾಯಕವಾದ ಬೆಳವಣಿಗೆ ಎಂದು ನಂಬಿರುವೆ. ಮೊದಲ ತಲೆಮಾರಿನ ದಲಿತ ಲೇಖಕರಾದ ದೇವನೂರು ಮಹಾದೇವ, ಅರವಿಂದ ಮಾಲಗತ್ತಿಯವರ ನಂತರ ಎರಡನೆಯ ತಲೆಮಾರಿನ ಪೋತೆಯವರು ದಲಿತ ಸಂವೇದನೆಗಳನ್ನು ದಿಟ್ಟವಾಗಿ ದಾಟಿಸುತ್ತಿದ್ದಾರೆ. ನೋವುಂಡ ಸಮುದಾಯದ ಬಗೆಗಿನ ಸಾಮಾಜಿಕ ಜವಾಬ್ದಾರಿಯನ್ನು, ನೈತಿಕ ಎಚ್ಚರವನ್ನು ಲೇಖಕರು ಇಲ್ಲಿ ಚೆನ್ನಾಗಿ ನಿಭಾಯಿಸಿದ್ದಾರೆ. ಇಂತಹ ಕೃತಿಗಳ ಬಗೆಗೆ ವಿಮರ್ಶೆ, ಸಾಂಸ್ಕೃತಿಕ ಅನುಸಂಧಾನಗಳು ಹೆಚ್ಚೆಚ್ಚು ನಡೆಯಬೇಕಾದ ಅಗತ್ಯವಿದೆ.

**ಪ್ರಸ್ತುತ ಲೇಖನವು ಪ್ರಜಾವಾಣಿ ಪತ್ರಿಕೆಯ ಭಾನುವಾರ ಪುರವಣಿಯಲ್ಲಿ ಪ್ರಕಟಗೊಂಡಿದೆ.**








# ಪ್ರೊ. ಎಚ್.ಟಿ.ಪೋತೆಯವರ ಬೌದ್ಧಕಥಾ ಸಂಪುಟ





**ಡಾ. ಎಚ್.ಟಿ. ಪೋತೆಯವರ ಬೌದ್ಧಕಥಾ ಸಂಪುಟದ ಕತೆಗಳ ಆಯ್ಕೆಯ ಮಾನದಂಡ ಗಮನಿಸುವಂಥದ್ದಾಗಿದೆ. ಸಾಹಿತ್ಯ ರಸಾನುಭವದ ಸುಂದರ ಅಭಿವ್ಯಕ್ತಿ ಮಾತ್ರವಲ್ಲ ಅದು ಶ್ರೀಮಂತ-ಬಡವ, ಮೇಲ್ವರ್ಗ-ಕೆಳವರ್ಗದವರ ಬಾಳಿನ ಸಂಗತಿಗಳನ್ನು ಬಯಲಿಗೆಳೆದು ಆಸೆ-ಆಮಿಷಗಳ ಒತ್ತಡದಿಂದ ದೂರ ಸರಿದು, ಕ್ರಿಯಾಶೀಲ ದುಡಿಮೆಯಿಂದ ಮುಂದುವರೆದು, ವರ್ಣ-ವರ್ಗ ಪ್ರತಿಷ್ಠೆ ಬದಿಗಿರಿಸಿ ಎಲ್ಲರೂ ಬದುಕು ಕಟ್ಟಿಕೊಳ್ಳುವ ಬಗೆಯನ್ನು ಚಿಂತಿಸುವುದೇ ಆಗಿದೆ.**



**ಡಾ. ಪ್ರಕಾಶ ಎಚ್. ಸಂಗಮ**
ಕನ್ನಡ ಉಪನ್ಯಾಸಕರು
ಗುಲಬರ್ಗಾ ವಿಶ್ವವಿದ್ಯಾಲಯ
ಕಲಬುರಗಿ-595106
ಮೊ:97310 46353

ಬೌದ್ಧಕಥಾ ಸಂಪುಟ ಪ್ರೊ. ಎಚ್.ಟಿ.ಪೋತೆಯವರ ಸಂಪಾದಕತ್ವದಲ್ಲಿ ಹೊರಬಂದ 22 ಕತೆಗಳ ಸಂಕಲನವಾಗಿದೆ. ಇಲ್ಲಿ ಬುದ್ಧ, ಬಸವ, ಅಂಬೇಡ್ಕರರ ಮಾನವಿಯತೆಯ ಕಾಳಜಿ ಹಾಗೂ ತತ್ವ ಸಂದೇಶ ಗಳಿಗೆ ಪೂರಕವಾಗಿ ಬರುವ ಕಥೆಗಳು ಓದುಗರ ಗಮನ ಸೆಳೆಯುತ್ತವೆ. ಮಾಸ್ತಿ ವೆಂಕಟೇಶ ಅಯ್ಯಂಗಾ ರರಿಂದ ಹಿಡಿದು ರಮೇಶ ಅರೋಲಿಯವರ ವರೆಗೆ ವಿವಿಧ ಪ್ರದೇಶ, ಜಿಲ್ಲೆ ಹಾಗೂ ಪರಿಸರದ ಕತೆಗಾರರು ತಮ್ಮ ಅಧ್ಯಯನ ಹಾಗೂ ಜೀವನಾನುಭವದಿಂದ ಕಟ್ಟಿಕೊಟ್ಟ ಕಥಾವಸ್ತು ಹಾಗೂ ಸಂದೇಶಗಳು ವಿಮರ್ಶಕ ಹಾಗೂ ಸಂಶೋಧಕರ ಗಮನ ಸೆಳೆದುಕೊಳ್ಳುತ್ತವೆ. ಕನ್ನಡ ಸಾಹಿತ್ಯ ಚರಿತ್ರೆ ವಿವಿಧ ಪ್ರಕಾರಗಳಿಂದ, ಪ್ರಭೇದಗಳಿಂದ ಹಾಗೂ ಪ್ರೇರಣೆ ಧೋರಣೆಗಳಿಂದ ಶ್ರೀಮಂತವಾಗಿದೆ. 1500 ವರ್ಷಗಳ ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ಹಳಗನ್ನಡ ರಾಜಾಶ್ರಯದಲ್ಲಿ, ನಡುಗನ್ನಡ ಧರ್ಮದ ಬೆಳಕಿನಲ್ಲಿ ಹಾಗೂ ಹೊಸಗನ್ನಡ ಶ್ರೀಸಾಮಾನ್ಯನ ಬದುಕಿನ ವಿಶ್ಲೇಷಣೆಯಲ್ಲಿ ಓದುಗರ ಚಿತ್ತ ಸೆಳೆಯುತ್ತಲಿದೆ. ಪಂಪನ ಕಾಲದ ಮತ-ಧರ್ಮ ತತ್ವ ಚಿಂತನೆ, ಬಸವಣ್ಣನವರ ಕಾಲಘಟ್ಟದ ಧಾರ್ಮಿಕ ಚಿಂತನೆ, ಹರಿದಾಸರ ವೈದಿಕ ತತ್ವ ಚಿಂತನೆ ಸಾಹಿತ್ಯದ ಮೇಲೆ ಪ್ರಭಾವ ಬೀರಿರುವುದು ಒಂದೆಡೆಯಾದರೆ, ಆಧುನಿಕ ಕನ್ನಡಕ್ಕೆ ಶ್ರೀಸಾಮನ್ಯರ ಒಳಿತಿನ ಚಿಂತನೆ ಕಥೆ, ಕಾವ್ಯ, ಕಾದಂಬರಿ, ಪ್ರಬಂಧಸಾಹಿತ್ಯ, ಅಂಕಣ ಬರಹ ಹಾಗೂ ಪ್ರವಾಸಕಥನ ಮೊದಲಾದ ಪ್ರಕಾರಗಳಲ್ಲಿ ಹಬ್ಬಿ ಕೊಂಡಿರುವುದನ್ನು ಗಮನಿಸಬಹುದಾಗಿದೆ.

ಪಾಶ್ಚಾತ್ಯರಿಂದ ಬಳುವಳಿಯಾಗಿ ಬಂದ ಸಣ್ಣಕಥಾ ಪ್ರಕಾರ ಸಮಯ ಉಳಿತಾಯ, ಘಟನಾ ಪ್ರಾಧಾನ್ಯತೆ ಹಾಗೂ ಮೌಲ್ಯಗಳ ಪರಿಣಾಮಕಾರಿ ಪ್ರತಿಪಾದನೆಯಿಂದಾಗಿ ಎಲ್ಲರ ಆಕರ್ಷಣೆಗೆ ಕಾರಣವಾಗಿದೆ. ಡಾ. ಎಲ್.ಎಸ್. ಶೇಷಗಿರಿರಾವ್ ರವರು ಹೇಳುವಂತೆ 'ಕನ್ನಡ ಸಣ್ಣಕತೆಗಳು ಇಂಗ್ಲಿಷ್ ಸಾಹಿತ್ಯದ ಕೇವಲ ಅನುಕರಣವಲ್ಲ, ಆದರೂ ಇಂಗ್ಲಿಷ್ ಸಾಹಿತ್ಯ ಕನ್ನಡ ಸಣ್ಣಕತೆಗಳು ಬೆಳೆಯಲು ಅನುಕೂಲತೆಯನ್ನು ಒದಗಿಸಿದೆ ಎಂಬುದರಲ್ಲಿ ಸಂದೇಹವಿಲ್ಲ' ಎಂಬ ಅಂಶವನ್ನು ಪೋತೆಯವರು ಕೃತಿಯ ಪ್ರಾರಂಭದಲ್ಲಿ ಉಲ್ಲೇಖಿಸಿದ್ದಾರೆ. ಹಳಗನ್ನಡದಲ್ಲಿ ಮಹಾಕಾವ್ಯಗಳ ಹಂದರದಲ್ಲೇ ಕುತೂಹಲ ಕೆರಳಿಸುವ ಕಥಾಸ್ವರೂಪದ ಸಂಗತಿಗಳು ಹೇರಳವಾಗಿದ್ದರೂ ಅವಕ್ಕೆ ದಿವ್ಯತೆ, ಭವ್ಯತೆ ಹಾಗೂ ಬದುಕಿನ ಸೂಕ್ಷ್ಮತೆಗಳನ್ನು ಕಟ್ಟಿಕೊಡುವ ಕುಸುರಿ ಕೆಲಸ ಮಾಸ್ತಿ, ಆನಂದ, ಕುವೆಂಪು, ಶಿವರಾಮ ಕಾರಂತರ ಕಾಲಘಟ್ಟದಲ್ಲಿ ಆಗಿರುವುದನ್ನು ನಾವು ಮರೆಯುವಂತಿಲ್ಲ. ನವೋದಯ, ಪ್ರಗತಿಶೀಲ, ನವ್ಯ ಹಾಗೂ ದಲಿತ-ಬಂಡಾಯ ಚಳುವಳಿಗಳ ಕಾಲಘಟ್ಟ ದಲ್ಲಿ ಧೋರಣೆಗೆ ತಕ್ಕಂತೆ ಕಥೆಗಳು ಕಾಣಿಸಿಕೊಂಡಿವೆ. ಕಥಾಪ್ರಕಾರ









ವಿಶ್ವವ್ಯಾಪಿ ಆಕರ್ಷಣೆ ಪಡೆದು ವಿಸ್ಮಯಕಾರಿ ಘಟನೆಗಳಿಂದ ಹಾಗೂ ಮಾನವೀಯ ಸಂವೇದನೆಗಳಿಂದ ಗಮನ ಸೆಳೆದುಕೊಂಡಿದೆ. ಇದನ್ನು ಮನಗಂಡು ಡಾ. ಎಚ್.ಟಿ. ಪೋತೆಯವರು ಬುದ್ಧನ ತಾತ್ವಿಕತೆ, ಸಂದೇಶಗಳಿಗನುಗುಣವಾಗಿ ಹಾಗೂ ದಲಿತರ ಜೀವನ ದರ್ಶನ, ಪರಿವರ್ತನೆಯ ಘಟನೆಗಳನ್ನು ಪ್ರಧಾನವಾಗಿ ಗಣಿಸಿ ಇಲ್ಲಿಯ ಕತೆಗಳನ್ನು ಕಲೆಹಾಕಿ ಹೃದಯ ಪರಿಶೋಧನೆಗೆ ದಾರಿ ಮಾಡಿಕೊಟ್ಟಿದ್ದಾರೆ.

ಡಾ. ಎಚ್.ಟಿ. ಪೋತೆಯವರ ಬೌದ್ಧಕಥಾ ಸಂಪುಟದ ಕತೆಗಳ ಆಯ್ಕೆಯ ಮಾನದಂಡ ಗಮನಿಸುವಂಥದ್ದಾಗಿದೆ. ಸಾಹಿತ್ಯ ರಸಾನುಭವದ ಸುಂದರ ಅಭಿವ್ಯಕ್ತಿ ಮಾತ್ರವಲ್ಲ ಅದು ಶ್ರೀಮಂತ-ಬಡವ, ಮೇಲ್ವರ್ಗ-ಕೆಳವರ್ಗದವರ ಬಾಳಿನ ಸಂಗತಿಗಳನ್ನು ಬಯಲಿಗೆಳೆದು ಆಸೆ-ಆಮಿಷಗಳ ಒತ್ತಡದಿಂದ ದೂರ ಸರಿದು, ಕ್ರಿಯಾಶೀಲ ದುಡಿಮೆಯಿಂದ ಮುಂದುವರೆದು, ವರ್ಣ-ವರ್ಗ ಪ್ರತಿಷ್ಠೆ ಬದಿಗಿರಿಸಿ ಎಲ್ಲರೂ ಬದುಕು ಕಟ್ಟಿಕೊಳ್ಳುವ ಬಗೆಯನ್ನು ಚಿಂತಿಸುವುದೇ ಆಗಿದೆ. ಗ್ರಾಮೀಣ ಸಂವೇದನೆಗಳುಳ್ಳ , ಅಂಬೇಡ್ಕರರ ಆದರ್ಶ ಹಾಗೂ ದಲಿತ ಚಿಂತನೆಗಳುಳ್ಳ ಕಥೆಗಳನ್ನು ಇಲ್ಲಿ ಕಾಣಬಹುದಾಗಿದೆ. ಜಮೀನ್ದಾರರ ದರ್ಪ, ಗೌಡ-ಕುಲಕರ್ಣಿಯರ ಹುನ್ನಾರಗಳ ಮಧ್ಯ ಜೀತದಾಳುಗಳಾಗಿದ್ದ ದಲಿತರು ಶಿಕ್ಷಣ, ಸಂಘಟನೆ, ಹೋರಾಟಗಳ ಮೂಲಕ ದೌಲತ್ತುಳ್ಳವರನ್ನು, ಜಮೀನ್ದಾರರನ್ನು, ಮೇಲ್ವರ್ಗದವರ ಕುತಂತ್ರಗಳನ್ನು ಕತೆಗಳ ಮೂಲಕ ಬಯಲಿಗೆಳೆದು ಸಮ ಸಮಾಜದ ನಿರ್ಮಾಣ ಮಾಡಲು ಇಲ್ಲಿಯ ಕತೆಗಳು ಪ್ರಚೋದನೆ ನೀಡುತ್ತವೆ. ಹಿರಿಯ ಕತೆಗಾರರಿಂದ ಕಿರಿಯ ಕತೆಗಾರರ ವರೆಗೆ ಇಲ್ಲಿಯ ಕತೆಗಾರರ ಕಥಾವಸ್ತು ಹಲವು ಸಣ್ಣತನಗಳಿಂದ ಬಿಡಿಸಿಕೊಂಡು ಪಂಪ ಮಹಾಕವಿ ಆಶಿಸುವ 'ಮನುಷ್ಯಜಾತಿ ತಾನೊಂದೆವಲಂ' ಎಂಬ ಧೋರಣೆಯತ್ತ ಬಂದುನಿಲ್ಲಲು ಪ್ರಯತ್ನಿಸಿರುವುದನ್ನು ಕಾಣಬಹುದಾಗಿದೆ.

ಬೌದ್ಧ ಕಥಾ ಸಂಪುಟದ ಪ್ರಥಮ ಕತೆ 'ಸಾರಿಪುತ್ರನ ಕಡೆಯ ದಿನಗಳು' ಬುದ್ಧನ ಪ್ರಭಾವದಿಂದ ಸನ್ಯಾಸಿಯಾಗಿ, ಬೌದ್ಧ ತತ್ವ ಸಂದೇಶಗಳನ್ನು ವೈದಿಕಶಾಹಿ ತತ್ವಚಿಂತನೆಗೆ ಸರಿದೊರೆಯಾಗಿ ಉಪದೇಶಿಸಿರುವ ನರಸಿಂಹಶರ್ಮನೆಂಬ ವ್ಯಕ್ತಿಚಿಂತನೆಯ ಕುರಿತಿದೆ. ಇಲ್ಲಿ ವೇದ-ಪುರಾಣ-ಉಪನಿಷತ್ತುಗಳ ಪರಿಸರದಿಂದಲೇ ಮೇಲೆದ್ದುಬಂದ ನರಸಿಂಹಶರ್ಮ ಸಾರಿಪುತ್ರನಾಗಿ, ಬುದ್ಧನನ್ನು ಪ್ರತಿನಿಧಿಸುವ ವ್ಯಕ್ತಿಯಾಗಿ ಗಮನಸೆಳೆದುಕೊಂಡಿದ್ದಾನೆ. ವಿಷ್ಣುವಿನ ದಶಾವತಾರಗಳಲ್ಲಿ ಬುದ್ಧಾವತಾರವೂ ಒಂದಾಗಿದ್ದು ವೈದಿಕ ಜ್ಞಾನಶಾಖೆಯ ಭಾಗ ವಾಗಿ ನರಸಿಂಹಶರ್ಮ ಬುದ್ಧಸಂದೇಶವನ್ನು ಸಾರುತ್ತಿರುವುದು ಮಾಸ್ತಿಯವರ ಸಂಪ್ರದಾಯಿಕ ಧೋರಣೆಯ ಭಾಗವಾಗಿಯೇ ಕಾಣಿಸಿಕೊಂಡಿದೆ. ಸಾರಿಪುತ್ರ ಸಾರಿದ ತತ್ವಸಂದೇಶದಿಂದಾಗಿ ಕತೆಗಾರ 'ಯಾವ ತತ್ವ ಸಂದೇಶದಿಂದ ಶಾಂತಿ ಸುಖ ನೆಮ್ಮದಿ ಲಭಿಸುತ್ತದೆಯೋ, ವ್ಯಕ್ತಿಯ ಆತ್ಮೋನ್ನತಿ ಸಾಧ್ಯವಾಗುತ್ತದೆಯೋ, ಆ ಸಂದೇಶ ಯಾರು ಹೇಳಿದರೇನು? ಎಲ್ಲಿ ಹೇಳಿದರೇನು? ಅದು ಅನುಸರಣೆಗೆ ಯೋಗ್ಯವಾಗುತ್ತದೆ' ಎಂದಿರುವುದು ಒಪ್ಪುವ ಮಾತಾಗಿದೆ. ಮಾಸ್ತಿ ವೆಂಕಟೇಶ ಅಯ್ಯಂಗಾರ ವೈದಿಕ ತತ್ವಚಿಂತನೆಯ ಭಾಗವಾಗಿ ಸಾರಿಪುತ್ರನ ಉಪದೇಶವನ್ನು ಚಿತ್ರಿಸಿದ್ದಲ್ಲದೇ, ಹೆಂಡತಿ-ಮಕ್ಕಳನ್ನೂ ಧರ್ಮ ಪ್ರತಿಪಾದನೆಗೆ ಬಳಸಿಕೊಂಡದ್ದು, ಸಾರಿಪುತ್ರನ ಹೆಂಡತಿ ಬೌದ್ಧಧರ್ಮ ಸ್ವೀಕರಿಸಿದ್ದು ಓದುಗರ ಮೇಲೆ ಪ್ರಭಾವ ಬೀರುತ್ತದೆ.

ಬಾಗಲೋಡಿ ದೇವರಾಯರ 'ಪವಾಡ ಪುರುಷ' ಕತೆಯಲ್ಲಿ ಸರ್ವಾರ್ಥಸಿದ್ಧಿ ಶೋಣಿತಕೇತುವಿನ ನಡುವೆ ನಡೆಯುವ ತಾಕಲಾಟದಲ್ಲಿ ಶಕ್ತಿಗಿಂತ ಯುಕ್ತಿ ಫಲಕಾರಿಯಾಗುವುದನ್ನು ಕಾಣಬಹುದಾಗಿದೆ. ಮರಣಶಯ್ಯೆಯಲ್ಲಿರುವ ಬೌದ್ಧಸನ್ಯಾಸಿ ಸರ್ವಾರ್ಥಸಿದ್ಧಿ ಶೋಣಿತಕೇತುವಿನ ದುರ್ವರ್ತನೆಗೆ ಸಂಯಮದಿಂದ ವರ್ತಿಸಿ ಪಾಠ ಕಲಿಸುತ್ತಾನೆ. ಸರ್ವಾರ್ಥಸಿದ್ಧಿ ತನ್ನ ಶಿಷ್ಯರಿಗೆ ಮರಣಶಯ್ಯೆಯಲ್ಲಿ ಹೇಳುವ ಮಾತುಗಳು ಓದುಗರ ಮೇಲೆ ಗಾಢ ಪರಿಣಾಮವನ್ನುಂಟುಮಾಡುತ್ತವೆ. ಬೌದ್ಧಧರ್ಮ ಕ್ಷೀಣಿಸುತ್ತಿರುವಾಗ, ಧರ್ಮಕ್ಕೆ ಉಳಿಗಾಲವಿಲ್ಲದಾದಾಗ, ಪ್ರಜಾಪೀಡಕ, ಧರ್ಮಲಂಡ ಶೋಣಿತಕೇತು ಸರ್ವಾರ್ಥಸಿದ್ಧಿಗೆ ಹೇಳುವ ವಿಷಯ ಗಳು ತೋರಿಕೆಯದ್ದಾಗಿವೆ.

ಅವನು ಕೌಶಾಂಬಿಯಲ್ಲಿ ನಡೆಸಿದ ಪ್ರಜಾಹಿಂಸೆ ಹಾಗೂ ಸ್ತ್ರೀಲಂಪಟತನದ ವಿಷಯಗಳು ಎಲ್ಲರ ಭಯಭೀತಿಗೆ ಕಾರಣವಾಗಿವೆ. ಬೌದ್ಧಭಿಕ್ಕುಗಳ ಉಪದೇಶವಾಗಲೀ, ಬುದ್ಧನ ಸಂದೇಶ ವಾಗಲಿ ತಲೆಗೆ ಹಚ್ಚಿಕೊಳ್ಳದ ಶೋಣಿತಕೇತು ಕೇವಲ ಬುದ್ಧಸನ್ಯಾಸಿನಿ ಅಪರಾಜಿತೆಯ ರೂಪ ಸೌಂದರ್ಯಕ್ಕೆ ಮರುಳಾಗಿ ಬೌದ್ಧಗುರುವಿನ ಕೊನೆಯ ಕ್ಷಣಗಳಲ್ಲಿ (ಸಾವಿನ ಸಂದರ್ಭದಲ್ಲಿ) ಕೈಮುಗಿದು ಬಂದು ನಿಂತಿ ರುವುದು ವಂಚಿಸುವ ಸಂಗತಿಯಾಗಿದೆ. ಇದನ್ನು ಮನಗಂಡ ಬೌದ್ಧಸನ್ಯಾಸಿ ಸರ್ವಾರ್ಥಸಿದ್ಧಿ ಕುಲಘಾತುಕ ರಾಜನನ್ನು ಕತ್ತುಹಿಸುಕಿ ಕೊಂದು ಪ್ರಾಣಬಿಡುತ್ತಿರುವಾಗ ಬುದ್ಧನ ಉಪದೇಶ ಕೇವಲ ತೋರಿಕೆಯದ್ದಲ್ಲ, ಅದು ಸರಿ ತಪ್ಪುಗಳ ನಿರ್ಣಯದಲ್ಲಿ ಹೇಗೆ ಕಠೋರವಾಗಬಲ್ಲದು ಎಂಬುದು ಗುರುವಿನ ವರ್ತನೆಯಿಂದ ಸಾಬೀತಾಗುತ್ತದೆ. ಸಮಾಜದಲ್ಲಿ ದಯೆ, ಶಾಂತಿ, ಸಹನೆ, ಸೌಹಾರ್ದ ಮನೋಭಾವನೆ ಹಾಗೂ ಸಹಬಾಳ್ವೆ ಯಿಂದ ಜೀವನ ಸಾಗಿಸಲು ಬೌದ್ಧ ಕಥಾ ಸಂಪುಟದ ಕತೆಗಳು ಪ್ರೇರಣೆ ನೀಡುತ್ತವೆ. ಈ ಕಥಾ ಸಂಚಯದ ರಾಜಲಕ್ಷ್ಮೀ ಎನ್. ರಾವ್ ರವರ 'ವೈಶಾಖ ಶುದ್ಧ ಪೂರ್ಣಿಮೆ' ಕತೆ ಪ್ರೀತಿ ಸುವ ಹೃದಯಗಳ ಏರು-ಪೇರಿನ ಸಂಗತಿಗಳತ್ತ ಗಮನ ಹರಿಸುತ್ತದೆ. ಇಲ್ಲಿ ವಿಜಯಾ ತನ್ನ ಅಣ್ಣನ ಸ್ನೇಹಿತ ನನ್ನು ಬಲವಾಗಿ ಪ್ರೀತಿಸಿ, ಆತನ ಅಗಲಿಕೆಯಲ್ಲಿ ನೋವು ಪಡುವ ದೃಶ್ಯ ಮನಮೀಟುತ್ತದೆ. ವಿಜಯಾಳ ಅಣ್ಣನ ಸ್ನೇಹಿತ ಚಂದ್ರಶೇಖರ ತನ್ನ ಗಂಭೀರ ನಡತೆ, ಉತ್ತಮ ಆಲೋಚನೆ ಹಾಗೂ ಎಲ್ಲರಿಗೂ ಒಳಿತು ಮಾಡುವ ಸ್ವಭಾವದಿಂದ ಮನಗೆದ್ದುಕೊಳ್ಳುತ್ತಾನೆ. ಈ ಅತಿಥಿಯ ಪೂರ್ವಾಪರ ವಿಚಾರಿಸಿ ಇವನೇ ವಿಜಯಾಳಿಗೆ ತಕ್ಕ ವರನೆಂದು ಮನೆಯವರೆಲ್ಲಾ ನಿರ್ಣಯಿಸಿಬಿಡುತ್ತಾರೆ. ಆದರೆ, ಅಣ್ಣನ ಜೊತೆ ಚಂದ್ರ ಶೇಖರ ಹೈದರಾಬಾದಿನಲ್ಲಿ ಕೆಲಸಕ್ಕೆ ಪ್ರಾರಂಭಿಸಿ, ತಿಂಗಳ ನಂತರ ಹಿಂದಿರುಗುವಾಗ ರಜಾಕಾರ ರ ಹಾವಳಿಯ ಪರಿಣಾಮವಾಗಿ ಯಾರಿಗೋ ಗುರಿಯಿಟ್ಟ ಗುಂಡೇಟು ಅಕಸ್ಮಾತ ಈತನಿಗೆ ತಾಗಿ ಸಾಯುತ್ತಾನೆ. ಇದರಿಂದ ವಿಜಯಾಳಿಗೆ ಶಾಕ್ ಆಗಿ, ಕಂಡ ಕನಸುಗಳು ನುಚ್ಚುನೂರಾಗುತ್ತವೆ. ಆತನಿಗಾಗಿ ಖರೀದಿಸಿದ್ದ ಬುದ್ಧ ಪ್ರತಿಮೆಗೆ ಅರ್ಥವೇ ಇಲ್ಲದಂತಾಗುತ್ತದೆ. ಇಂತಹ ಡೋಲಾಯಮಾನ ಸ್ಥಿತಿಯಲ್ಲಿ ಚಂದ್ರಶೇಖರನೇ ಕನಸಿನಲ್ಲಿ ಬಂದು ಅವಳ ಮನ ಪರಿವರ್ತನೆಗೆ ಪ್ರೇರಣೆ ನೀಡುವುದು ಮಹತ್ವದ್ದಾಗಿದೆ. ಆತನ ಪ್ರೇರಣೆಯಿಂದ ಮತ್ತೆ ಲವಲವಿಕೆ ಹೊಂದಿದ ವಿಜಯಾ ತಾಯಿ ನಿಶ್ಚಯಿಸಿದ ವರನನ್ನು ಮದುವೆಯಾಗಿ ಜೀವನ ನಡೆಸುವುದು, ಬುದ್ಧನ ಪ್ರತಿಮೆ ಒಡೆದು ಹೋದದಕ್ಕೆ ಶಾಂತಿ ಕದಡಿಹೋಯಿತೆಂಬ ಸಂದೇಶದ ಮಧ್ಯದಲ್ಲೇ ಮತ್ತೆ ಬದುಕು ಬದಲಿಸುವ ಸಂಗತಿಗಳತ್ತ ಗಮನ ಹರಿಸಿ ಮುಂದೆ ಸಾಗುವುದು ಓದುಗರಿಗೆ ಪರಿಣಾಮವನ್ನುಂಟುಮಾಡುತ್ತದೆ.

ಬೌದ್ಧಕಥಾಸಂಪುಟದ ತಾತ್ವಿಕತೆಗನುಗುಣವಾಗಿ ಕುಂ.ವಿ.ಯವರ 'ಹತ್ಯೆ' ಕಥೆ ಕಥಾವಸ್ತು, ಭಾಷಿಕ ಸಂವೇದನೆ ಹಾಗೂ ಸಂಬಂಧಗಳ ಸಾಂದ್ರ ಅಭಿವ್ಯಕ್ತಿಯಿಂದಾಗಿ ಗಮನ ಸೆಳೆದುಕೊಳ್ಳುತ್ತದೆ. ಇಲ್ಲಿ ಕೊಲೆಗಾರ ಬಲರಾಮ ತನ್ನ ಕ್ರೌರ್ಯ ಕಳಚಿಕೊಂಡು ಸಂವೇದನಾಶೀಲ 'ನಾಗಣ್ಣ'ನಾಗುವ ವರೆಗಿನ ಕಥೆಯ ಬೆಳವಣಿ ಗೆಗಳು ಓದುಗರನ್ನು ಪ್ರಭಾವಿಸುತ್ತವೆ. ಕುಂಬಾರ ವೀರಭದ್ರಪ್ಪನವರು ಮನುಷ್ಯನ ರಾಕ್ಷಸೀ ಪ್ರವೃತ್ತಿಯನ್ನು ಅಳಿಸಿಹಾಕಿ, ಕರುಳ ಬಳ್ಳಿಯ ಸಂಬಂಧವನ್ನು ಬೆಸೆಯುವಲ್ಲಿ ಯಶಸ್ವಿಯಾಗಿದ್ದಾರೆ. ಕುಂ.ವಿ. ಯವರ ಕಥಾ ತಂತ್ರಗಾರಿಕೆ ಅತ್ಯಂತ ಪ್ರಭಾವಶಾಲಿಯಾಗಿದೆ. ಬಲರಾಮ ಬಾಲ್ಯದಲ್ಲೇ ಮನೆ ಮಾರು ತೊರೆದು ವೆಂಕಪ್ಪ ನಾಯ್ಡುವಿನ ವಶಕ್ಕೆ ಬಿದ್ದು ಸುಪಾರಿ ಕಿಲ್ಲರ್ ಆಗಿ ಪರಿವರ್ತನೆ ಹೊಂದುತ್ತಾನೆ. ದಿನೇ ದಿನೇ ಆತ ಕೊಲೆ ಮಾಡುವುದರಲ್ಲಿ ನಿಷ್ಣಾತನಾಗಿ 'ಬಂದರೆ ಬರಬೇಕು ಇಂಥವನ ಕೈಯಲ್ಲಿ ಸಾವು' ಎಂದು ಸಾವೀಗೀಡಾಗು ವವರೇ ಅಂದುಕೊಳ್ಳುವಷ್ಟು ಕೊಲೆಮಾಡುವುದರಲ್ಲಿ ನಿಷ್ಣಾತನಾಗುತ್ತಾನೆ. ಬಲರಾಮನಲ್ಲಿ ಕೊಲೆಮಾಡುತ್ತಿರುವ ವ್ಯಕ್ತಿಗಳ ಸಂಬಂಧ ಯಾವ ಭಾವನೆಗಳೂ ಇರುವುದಿಲ್ಲ. ಒಡೆಯ ಹೇಳಿದ ಹಾಗೆ ಹಣ ತೆಗೆದುಕೊಂಡು ಒಡನೆ ಸಾಯಿಸುವುದಷ್ಟೇ ಈತನ ಕೆಲಸ. ಇಂಥ ನಿರ್ದಯಿ ಬಲರಾಮನ ಕೈಯಲ್ಲಿ ವೆಂಕಪ್ಪನಾಯ್ಡು ಕೂಡ ಸಾವು ತಂದುಕೊಳ್ಳಲು ಬಯಸುತ್ತಾನೆ! ಅದೇನು ವೈರವೋ ಒಂದುಬಾರಿ ನಾಯ್ಡು ಕಂದೀಲು ಚಂದ್ರಣ್ಣನನ್ನು ಮುಗಿಸಲು ಬಲರಾಮನಿಗೆ ಸುಪಾರಿ ಕೊಟ್ಟ. ಈತ ಹೇಳಿದ ವಿಳಾಸಕ್ಕೆ ತಕ್ಕಂತೆ ಬಸ್ಸಿನಲ್ಲಿ ಪ್ರಯಾಣಿಸಿ ಗುಣ ಸಾಗರಕ್ಕೆ ಬಂದಿಳಿದ. ಅವನ ಶೈಲಿ, ಬಗಲ ಕೈಚೀಲ ಕಂಡು ಅನೇಕ ಪ್ರಯಾಣಿಕರು ಅನೇಕ ರೀತಿಯಲ್ಲಿ ಅವನ ಸ್ಥಾನ-ಮಾನ ಕಲ್ಪಿಸಿದರು. ಆದರೆ ಅವನೊಬ್ಬ ಕೊಲೆಗಾರನೆಂಬುದು ಅವರಿಗೆ ಹೇಗೆ ತಿಳಿದೀತು!

ಕೊಲೆ ಮಾಡಲು ಹೋದ ಮನೆಯಲ್ಲಿ ಮಕ್ಕಳಿದ್ದರೆ ಕೊಡಲೆಂದು ಒಂದೆರಡು ಬಿಸ್ಕತ್ತು ಪ್ಯಾಕೇಟು, ದಾರಿಯಲ್ಲಿ ದುಂಬಾಲು ಬಿದ್ದ ಹೂ, ಹಣ್ಣು ಮಾರುವವರಿಂದ ಖರೀದಿಸಿದ ಹೂಹಣ್ಣುಗಳು, ಬಗಲಿನ ಬ್ಯಾಗಿಗೆ ಹಾಕಿ ಕಂದೀಲು ಚಂದ್ರಣ್ಣನ ಮನೆಗೆ ಬಂದರೆ, ಆತನ ಸಹೋದರಿ ಗೌರಿ, ತನ್ನ ಅಣ್ಣ ಶಿವಣ್ಣನೇ ಬಂದನೆಂದು ಭ್ರಮಿಸಿ, ಅವನನ್ನು ಅಪಾರ ಸಲುಗೆ ಸೆಳೆತಗಳಿಂದ ಪರಿವರ್ತಿಸಿ ಸಂಬಂಧದ ಮಹತ್ವ ದೃಢ ಪಡಿಸಿದಾಗ ಬಲರಾಮ ಬದಲಾಗುತ್ತ ಹೋಗುವ ಬಗೆ ಬುದ್ಧಸಂದೇಶಕ್ಕೆ ಹತ್ತಿರವಾಗಿದೆ. ಇಲ್ಲಿ ಕೊಲೆ ಮಾಡಲೆಂದು ಬಂದ ಬಲರಾಮ ಗಂಗೆಯ ಪ್ರಸವಕ್ಕೆ ನೆರವಾಗಿ, ನವಜಾತ ಶಿಶುವಿನ ಕರುಳುಬಳ್ಳಿ ಕತ್ತರಿಸಲು ಚಾಕುವನ್ನು ಕೊಟ್ಟು ಸಹಕರಿಸಿ ತನ್ನ ಕ್ರೌರ್ಯದ ನಡತೆಯಿಂದ ಕರಗಿ ಶಿವಣ್ಣಬನಾಗಿ ಕಾಲಿಟ್ಟ ಮನೆಗೆ ಆಸರೆಯಾಗುವ ವರೆಗಿನ ಘಟನೆಗಳು ಮಾನಸಿಕ ವರ್ತನೆಗೆ ಪೂರಕವಾಗಿಯೇ ಬಂದು ಕೊಲೆಗಿಂತ ಕರುಣೆಯ ಜೀವನವೇ ಶ್ರೇಷ್ಠವೆಂಬ ಬುದ್ಧಸಂದೇಶವನ್ನು ಬಲಪಡಿಸುತ್ತವೆ.

ಪ್ರಸ್ತುತ ಕಥಾ ಸಂಕಲನದ ಎಲ್ಲಾ ಕತೆಗಳಲ್ಲಿ ಜೀವನ ಪ್ರೀತಿಯ ನಿಲುವು ಹಾಗೂ ಜನರ ಗುಣ-ಸ್ವಭಾವಗಳಿಗೆ ವಿಡಂಬನಾತ್ಮಕ ಧೋರಣೆಗಳೂ ವ್ಯಕ್ತವಾಗಿವೆ. ಎಸ್.ಆರ್. ಗುರುನಾಥ್ ರವರ 'ಹತಾಶೆ' ಕತೆ ಪಿ.ಪಿ. ಮಾಸ್ತರರ ವೈಚಾರಿಕ ಹಾಗೂ ಸಂಪ್ರದಾಯಿಕ ಚಿಂತನೆಯ ಲಾಭ-ನಷ್ಟಗಳನ್ನು ಕಟ್ಟಿಕೊಡುತ್ತದೆ. ಅವರು ಮೂಢ ನಂಬಿಕೆ ಹಾಗೂ ಸಾಂಪ್ರದಾಯಿಕ ವ್ಯವಸ್ಥೆಗಳ ವಿರುದ್ಧ ಕೈಗೊಳ್ಳುವ ಕಡು ವಿಮರ್ಶೆ ಅವರನ್ನು ಅಪಾಯಕ್ಕೆ ಸಿಲುಕಿಸುತ್ತದೆ. ಗೊಡ್ಡು ಆಚರಣೆ ಕಂದಾಚಾರಗಳ ಬದಲಾಗಿ ವೈಜ್ಞಾನಿಕತೆ ಹಾಗೂ ವೈಚಾರಿಕತೆ ರೂಢಿಸಿಕೊಳ್ಳಲು ಸಭೆ-ಸಮಾರಂಭಗಳಲ್ಲಿ ಅವರು ಕರೆ ನೀಡಿದ್ದರ ಫಲವಾಗಿ ಹೊಡೆತ ತಿನ್ನುತ್ತಾರೆ. ದೇವರೆಲ್ಲಿದ್ದಾನೆ ಎಂಬ ನಾಸ್ತಿಕ ವಾದಕ್ಕೆ ಜನ ಅವರನ್ನು ವೇದಿಕೆಯಿಂದ ಎಳೆದು ಥಳಿಸುತ್ತಾರೆ. ಪೋಲೀಸರು ರಕ್ಷಣೆ ನೀಡಿದರೂ ಮನೆಯಲ್ಲಿ ಲಕ್ಷ್ಮೀದೇವಮ್ಮ ಹಾಗೂ ಮಕ್ಕಳಾದ ಉಮಾ, ಸುಮಾ ವಿಪರೀತ ತರಾಟೆಗೆ ತೆಗೆದುಕೊಳ್ಳತ್ತಾರೆ. ಪಿ.ಪಿ. ಖಾಸಗೀ ಶಾಲೆಯ ನಿಷ್ಠಾವಂತ ಗಣಿತದ ಮೇಷ್ಟ್ರು. ಅಲ್ಪ ಸಂಬಳದಲ್ಲೇ ದೀರ್ಘಕಾಲ ಸೇವೆ ಸಲ್ಲಿಸಿದವರು. ಬಡತನ ಮನೆಯಲ್ಲಿ ಹಾಸಲುಂಟು; ಹೊದೆಯಲುಂಟು. ಇವರ ತರ್ಕ-ವೈಚಾರಿಕತೆಗೆ ಮೆಚ್ಚಿ ಹಾರ ತುರಾಯಿಗಳಿಂದ ಸನ್ಮಾನಿಸಿದವರು ಕೆಲವರಾದರೆ, ಸಮಯ ನೋಡಿ ಸಂಚುಮಾಡಿ ಮೈ ಮೆತ್ತಗಾಗಿಸಿದವರು ಇನ್ನೂ ಕೆಲವರು. ಇದರಿಂದ ಪಾಠ ಕಲಿತು ಪಿ.ಪಿ. ಮಾಸ್ತರರು ಪುರುಷೋತ್ತಮ ಪಂಡಿತರಾಗಿ, ಜೋಷಿಯಾಗಿ, ಸಮಾಜದ ತಾಳಕ್ಕೆ ತಕ್ಕಂತೆ ಕುಣಿದು ಜೋತಿಷ್ಯ ಹೇಳಿ ಹೆಸರುಗಳಿಸಿ ಶ್ರೀಮಂತರಾಗಿ ಮಕ್ಕಳಿಗೆ ಲಕ್ಷಾಂತರ ರೂಪಾಯಿ ಖರ್ಚುಮಾಡಿ ಮದುವೆ ಮಾಡಿಸಿ ವಿದೇಸಿ ಪ್ರವಾಸ ಬೆಳೆಸುವಷ್ಟು ಎತ್ತಕ್ಕೇರಿದರೆಂಬುದಾಗಿ ಚಿತ್ರಿಸಿರುವುದು ಸಾಮಾಜಿಕ ವಿಡಂಬನೆಯ ಭಾಗವಾಗಿಯೇ ಬಂದಿದೆ.

ಇಪ್ಪತೆರಡು ಕಥೆಗಳ ಕಥಾಗುಚ್ಛದಲ್ಲಿ ಗಮನ ಸೆಳೆಯುವ ಕಥೆಗಳಲ್ಲಿ ಅಮರೇಶ ನುಗಡೋಣಿಯವರ 'ಹೀಗೊಂದು ಮಂದಿರ' ಕಥೆಯೂ ಒಂದು. ಇದು ನಾಗಲಿಂಗ ನೆಂಬ ಪ್ರಾಧ್ಯಾಪಕರ ದಿನಚರಿಯನ್ನು ಬಿಚ್ಚಿಡುತ್ತದೆ. ನಾಗಲಿಂಗರು ವಿಶ್ವವಿದ್ಯಾಲಯವೊಂದರ ಪ್ರಾಧ್ಯಾಪಕರು. ಅಪಾರ ಶಿಷ್ಯಬಳಗ ಹೊಂದಿದವರು. ಅವರ ಲೋಕ ಸಂಚಾರ ಗಮನಾರ್ಹವಾದುದು. ವಿದ್ಯಾರ್ಥಿಗಳನ್ನು ಜೊತೆ ಸೇರಿಸಿಕೊಂಡು ಕಾಡು-ಮೇಡು; ವಿವಿಧ ಸ್ಥಳಗಳನ್ನು ಸುತ್ತುವ ಸ್ವಭಾವ ಅವರಲ್ಲಿ ತೀವ್ರವಾದುದು. ಕತೆಗಾರರ ಪ್ರಾದೇಶಿಕ ಪ್ರೀತಿ ನಾಗಲಿಂಗರ ಪ್ರವೃತ್ತಿಯಲ್ಲಿ ವ್ಯಕ್ತವಾಗಿದೆ. ತಾವು ಓದಿದ ಸಾಹಿತ್ಯ, ನೋಡಿದ ಅರಮನೆ ಹಾಗೂ ಮೆಚ್ಚಿನ ಶಿಷ್ಯೆ ಚಾಮ ಲಾಳನ್ನು ಪ್ರೀತಿಸುವ ಅವರ ಸ್ವಭಾವದ ಸುತ್ತಕಥೆ ಹೆಣೆದುಕೊಂಡಿದೆ. ಚಾಮಲಾ ಒಬ್ಬ ಜಮೀನ್ದಾರನ ಮಗಳಾಗಿ, ದೊಡ್ಡ ಮನೆಯ ಕನ್ಯೆಯಾಗಿ, ಕಪ್ಪು ಸುಂದರಿಯಾಗಿ, ನಾಗಲಿಂಗನ ಪ್ರೀತಿಯ ಹುಡುಗಿಯಾಗಿ ಗಮನ ಸೆಳೆದುಕೊಳ್ಳುತ್ತಾಳೆ. ಐನೂರು ಎಕರೆ ಜಮೀನುಳ್ಳ

ಜಮೀನ್ದಾರನ ಮಗಳಾದ ಚಾಮಲಾ ನಾಗಲಿಂಗನ ಜೊತೆ ಬಂದ ಶಿಷ್ಯರಿಗೆ ತನ್ನ ಅರಮನೆ, ಮನೆತನದ ಇತಿಹಾಸ ಹೇಳಿ ದೊಡ್ಡಮನೆಯಲ್ಲಿ ಎಲ್ಲರಿಗೂ ಊಟ-ತಿಂಡಿ ಮಾಡಿಸುವ ವ್ಯವಸ್ಥೆ ಮಾಡಿಸುತ್ತಾಳೆ. ಈ ಕತೆಯ ಮೂಲಕ ಕತೆಗಾರ ನಾಗಲಿಂಗನ ಬಯಲು-ಆಲಯ, ಬುದ್ಧಮಂದಿರದ ಕಲ್ಪನೆಗಳಿಗೆ ಜೀವ ತುಂಬಿ ಇತಿಹಾಸದುದ್ದಕ್ಕೂ ಪ್ರಭುತ್ವಗಳು; ಜನಾಂಗಗಳು ತಮ್ಮ ತಮ್ಮ ಪಂಥಗಳ, ಧರ್ಮಗಳ ಕುರುಹಾಗಿ ದೈವಗಳನ್ನು ರಚಿಸಿಕೊಂಡವರ ಗುಡಿ, ಮಂದಿರ, ಚರ್ಚ್, ನಿರ್ಮಾಣ ವಾಗಿವೆ. ಆಗದ ಜನ ಅವುಗಳ ಧ್ವಂಸದಲ್ಲಿ ತೊಡಗಿದ್ದಾರೆ. ಆದ್ದರಿಂದ ದೈವವನ್ನು ಮನಸ್ಸಿನಲ್ಲಿಟ್ಟು ಕೊಂಡು ನಾವು ಬಾಹ್ಯದಲ್ಲಿ ಬಯಲೇ ಆಲಯವಾಗಿ ಪರಿಭಾವಿಸೋಣ. ಬುದ್ಧನೂ ದೇವಾಲಯ ಬೇಡ ವೆಂದಿರ ಬೇಕು; ಬಸವಣ್ಣನೂ ಶಿವಾಲಯ ಬೇಡ ಎಂದು ಹೇಳಿದ್ದನಲ್ಲ ಎಂದು ಶಿಷ್ಯಬಳಗ ಹಾಗೂ ಚಾಮಲೆಗೆ ಅರಿವಿನ ಬೀಜ ಬಿತ್ತುತ್ತಿರುವುದು ವಿಚಾರಕ್ರಾಂತಿಯೇ ಆಗಿದೆ.

ಡಾ. ಎಚ್.ಟಿ. ಪೋತೆ ಅವರು ನಾಡಿನ ಹೆಸರಾಂತ ಸಾಹಿತಿಗಳಲ್ಲಿ ಒಬ್ಬರಾಗಿದ್ದಾರೆ. ಡಾ. ಬಿ.ಆರ್ ಅಂಬೇಡ್ಕರ್ ಅವರ ಜೀವನ ಹಾಗೂ ಸಂದೇಶವನ್ನು ತಮ್ಮ ಕೃತಿಗಳಲ್ಲಿ ಎತ್ತಿ ತೋರಿದ್ದಾರೆ. ಡಾ. ಎಚ್.ಟಿ. ಪೋತೆಯವರ ಕತೆ, ಕಾದಂಬರಿಗಳು ನಾಡಿನಾದಂತ ಪ್ರಸಿದ್ಧವಾಗಿವೆ. ವೈಚಾರಿಕ ಬರಹಗಳು ತಲ್ಲಣ ವನ್ನುಂಟುಮಾಡಿವೆ. ಬೌದ್ಧ ಕಥಾ ಸಂಪುಟದ ಪೋತೆಯವರ 'ಕಾಗಿ ಶಕುನ' ಮೇಲ್ವರ್ಗ ಹಾಗೂ ಕೆಳವರ್ಗದವರ ನಡುವಿನ ಸೂಕ್ಷ್ಮ ಸಂಘರ್ಷವನ್ನು ಬಿಚ್ಚಿಡುತ್ತದೆ. ಇಲ್ಲಿ ಬರುವ ಕಾಗಿಗಳು ಸಾಂಕೇತಿಕವಾಗಿ ದಮನಿತರ ಪ್ರತಿನಿಧಿಯಾಗಿ ಬರುತ್ತವೆ. ಆಷಾಢಮಾಸದಲ್ಲಿ ಬೀಸಿದ ಜೋರಾದ ಗಾಳಿ 'ಕಾಗಿ' ದಂಪತಿಗಳಲ್ಲಿ ಬದಲಾವಣೆ ತರುತ್ತದೆ. ಕೂತುಂಡರೆ ನಡೆಯುವುದಿಲ್ಲವೆಂದು ಗಂಡು ಕಾಗಿ ಆಹಾರ ಪಡೆಯಲು ಹೊರಟಾಗ ಜೋರಾಗಿ ಗಾಳಿ ಬೀಸಿದ್ದರ ಪರಿಣಾಮವಾಗಿ ಬೇರೊಂದು ಊರು ಸೇರುತ್ತದೆ. ಅಲ್ಲಿಯ ವಿಚಿತ್ರ ಪದ್ಧತಿ ಕಂಡು ಬೆರಗಾಗುತ್ತದೆ. ಅಲ್ಲಿಯ ಬ್ರಾಹ್ಮಣರು ದಲಿತರ ಕೈಕೆಳಗಡೆ ಹೀನಾಯ ಬದುಕು ಸಾಗಿಸುತ್ತಿದ್ದಾರೆ. ಅಲ್ಲಿಯ ಬ್ರಾಮ್ಹಣರನ್ನು ಅಸ್ಪೃಶ್ಯರಂತೆ ನಡೆಸಿಕೊಳ್ಳಲಾಗುತ್ತಿದೆ. ಇದನ್ನು ಕಂಡು ಕಾಗಿ ಸಮಾಧಾನ ಪಡುತ್ತದೆ. ಗಂಡುಕಾಗಿಯನ್ನಗಲಿದ ಹೆಣ್ಣುಕಾಗಿ ಮರಿ ಕಾಗಿಗಳ ಪೋಷಣೆಗಾಗಿ ಹರಸಾಹಸ ಪಡುತ್ತದೆ. ಕೆಲವರ್ಷಗಳ ನಂತರ ಗಂಡುಕಾಗಿ ಹಿಂದಿರುಗಿ ಬಂದಾಗ ಇಲ್ಲಿಯ ಬೆಳವಣಿಗೆಯನ್ನು ಹೆಣ್ಣು ಕಾಗಿಯ ಬಾಯಿಂದ ಕೇಳುತ್ತದೆ. ಈ ಊರ ವಿಠ್ಠಲ ಗೌಡ ಬಸವಣ್ಣ, ಕನಕದಾಸ, ಅಂಬೇಡ್ಕರ್‌ರವರ ಶ್ರೇಷ್ಠ ಚಿಂತನೆಯಿಂದ ಬದಲಾಗುತ್ತಾನೆ. ಊರಲ್ಲಿ ಎಲ್ಲರನ್ನೂ ಸಮಾನವಾಗಿ ಕಾಣುತ್ತಾನೆ. ಆ ಊರ ಬ್ರಾಹ್ಮಣ ಅನಂತಾಚಾರಿ ಕಾರ್ಯಸಾಧನೆಗೆ ಮನೆಯಿಂದ ಹೊರಗೆ ಹೊರಟಾಗ ಕಾಗಿಯನ್ನು ಕಂಡು ಅಪಶಕುನವೆಂದು ಹಿಡಿಶಾಪ ಹಾಕುತ್ತಾನೆ. ಕಾಗೆಯೂ ಈತನ ವರ್ತನೆಗೆ ಕೋಪಿಸಿಕೊಳ್ಳುತ್ತದೆ. ಅನಂತಾಚಾರಿಯ ಅಪ್ಪ ಕಾಶಿಯಾತ್ರೆ ಗೈದು ಮನೆ ಸೇರಿದಾಗ ಜ್ವರಕ್ಕೆ ತುತ್ತಾಗಿ ಪಟ್ಟಣದ ಆಸ್ಪತ್ರೆ ಸೇರಿಸಲೆಂದು ಅನಂತಾಚಾರಿ ಗೌಡರ ಹತ್ತಿರ ಗಾಡಿ ಕೇಳಲು ಬರುವ ಸಮಯದಲ್ಲಿ ಕಾಗಿ ಎದುರಾ ಗುವುದು ಅರಿಷ್ಟ ಎಂದು ಬೈಸಿಕೊಳ್ಳುವುದು ಕಾಗೆಗೆ ಸೇಡಿನ ಭಾವನೆ ಉಂಟುಮಾಡುತ್ತದೆ. ಆತ ವಾಪಾಸು ಬರುವಾಗ ಆತನ ಮೇಲೆ ಪುತು ಪುತನೆ ಹೇತುಹಾರಿ ಹೋಗುತ್ತದೆ. ಆತನ ತಂದೆ ಸತ್ತ ಸಂದರ್ಭದಲ್ಲಿ ಪಿಂಡ ಮುಟ್ಟದೇ ಕಾಗೆಗಳಿಗೂ ಬೆಲೆ ಇದೆ ಎಂದು ತೋರಿಸಿಕೊಡುತ್ತದೆ. ಅನಂತಾಚಾರಿ ಗಾಬರಿಯಿಂದ ಪರಿಪರಿಯಾಗಿ ಬೇಡಿಕೊಂಡಾಗ ಕಾಗೆಗಳೆಲ್ಲಾ ಬಂದು ಪಿಂಡ ಮುಟ್ಟಿ ಮುಂದಿನ ಕಾರ್ಯಕ್ಕೆ ದಾರಿ ಮಾಡಿ ಕೊಡುತ್ತವೆ ಎಂಬಲ್ಲಿ ಕತೆಗಾರರ ಧೋರಣೆ ವ್ಯಕ್ತವಾಗಿದೆ. ಎಲ್ಲ ವರ್ಗಗಳ ಮಧ್ಯೆ ಸಮಾನತೆ ತರಲು ಕತೆಗಾರ ಇಲ್ಲಿ ಬುದ್ಧ, ಕನಕ, ಅಂಬೇಡ್ಕರ್ ಮೊದಲಾದವರ ಸಮಾಜ ಸಮಾನತೆಯ ಅಂಶಗಳನ್ನು ಎತ್ತಿ ಹಿಡಿದು ಸರ್ವರಿಗೆ ಸಮಬಾಳು, ಸರ್ವರಿಗೆ ಸಮಪಾಲು ಎಂಬ ನೀತಿಯನ್ನು ಸಮರ್ಥಿಸಿಕೊಂಡಿದ್ದಾರೆ. ಬೌದ್ಧಕಥಾ ಸಂಪುಟದ ಬಿ.ಎಂ. ಪುಟ್ಟಯ್ಯನವರ 'ಹುಡುಗ ಹೇಳಿದ ವಿಚಾರ' ಕತೆ ಆದರ್ಶ ಶಾಲೆಯ ವಿದ್ಯಮಾನಗಳ ಸುತ್ತ ಹೆಣೆಯಲ್ಪಟ್ಟಿದೆ. ಇಲ್ಲಿ ಶಿಕ್ಷಕವರ್ಗ ಹಾಗೂ ವಿದ್ಯಾರ್ಥಿಗಳು ಸುತ್ತ ಮುತ್ತಲಿನ ಶಾಲೆಗಳಿಗೆ ಮಾದರಿಯಾಗಿದ್ದಾರೆ. ಬೇರೆಯವರು ಅಸೂಯೆ ಪಡುವಷ್ಟು ಶಾಲೆಯ ಬೆಳವಣಿಗೆಯಿದೆ. ಶಾಲೆಯ ಮಾಸ್ತರರು ಜನಪ್ರಿಯತೆಯ ಫೋಬಿಯಾ ದಿಂದ ಕರುಣೆ ಮರೆತು ವಿದ್ಯಾರ್ಥಿಗಳೊಂದಿಗೆ ವರ್ತಿಸಿದ ರೀತಿ ಚರ್ಚೆಗೆ ಒಳಗಾಗುತ್ತದೆ. ಪರೀಕ್ಷಾ ಸಮಯದಲ್ಲಿ ಕೆಲವು ವಿದ್ಯಾರ್ಥಿಗಳು ತಡವಾಗಿ ಬಂದಾಗ ಶಿಕ್ಷಕರು ಅವರಿಂದ ಕ್ಷಮೆಯನ್ನು ನಿರೀಕ್ಷಿಸುತ್ತಾರೆ. ಆದರೆ ಮಕ್ಕಳು ತಡವಾಗಿ ಬಂದದಕ್ಕೆ ಕ್ಷಮೆ ಕೇಳುವುದಿಲ್ಲ. ಇದರಿಂದ ಮಾಸ್ತರ ರಿಗೆ ವಿಪರೀತ ಸಿಟ್ಟುಬಂದು ಅವರ ತಂದೆ-ತಾಯಂದಿರನ್ನು ಕರೆಸಿ ಬುದ್ಧಿಹೇಳಲು ನೋಡುತ್ತಾರೆ. ಪರೀಕ್ಷೆಯಲ್ಲಿ ಫೇಲು ಮಾಡುವ ಬೆದರಿಕೆ ಹಾಕುತ್ತಾರೆ. ಈ ವಿಚಾರ ಊರ ಪಂಚಾಯತಿ ಕಟ್ಟೆಗೂ ವಿಚಾರಣೆಗೆ ಬರುತ್ತದೆ. ಊರವರು, ಶಿಕ್ಷಕರಿಗೆ ಕರೆಸಿ ಬುದ್ಧಿ ಹೇಳಬೇಕು ಇಲ್ಲವೇ ತಾವೇ ಶಿಕ್ಷಕರ ಹತ್ತಿರ ಹೋಗಿ ಕಾರಣ ಕೇಳಿ ತೀರ್ಮಾನ ಕೈಗೊಳ್ಳಬೇಕೆಂದುಕೊಳ್ಳುತ್ತಾರೆ. ಇಂಥ ಗೋಜಲು ವಾತಾವರಣದಲ್ಲಿ ಕತೆಗಾರ ಬುದ್ಧನ ಪ್ರತಿರೂಪದಂತಿರುವ ವ್ಯಕ್ತಿಯನ್ನು ಕರೆಸಿ ಸಂಧಾನ ಉಂಟು ಮಾಡುವುದು ಮಹತ್ವದ್ದಾಗಿದೆ. ರೋಗಿಗಳಿಗೆ, ಕುಡುಕರಿಗೆ, ಕುಂಟರಿಗೆ, ವಯಸ್ಸಾದವರಿಗೆ, ಬೆನ್ನು ಬಾಗಿದವರಿಗೆ ರಸ್ತೆ ದಾಟಿಸಲು ಮಕ್ಕಳು ಯಾವತ್ತೂ ಸಹಾಯಮಾಡಬೇಕೆಂಬ ಬುದ್ಧ ಸಂದೇಶಕ್ಕನುಗುಣ ವಾಗಿ ಪರೀಕ್ಷೆ ಬರೆಲು ಹೊರಟ ವಿದ್ಯಾರ್ಥಿಗಳು ಬೀದಿ ದಾಟುವಾಗ ಅಂಥವರನ್ನು ಕಂಡು ಸಹಾಯ ಸಲ್ಲಿಸಿ ಬರುವಾಗ ತಡವಾಯಿತು ಇದಕ್ಕೆ ಕ್ಷಮೆ ಯಾಕೆ ಎಂದು ತಿಳಿಸಿಹೇಳಿದ್ದಕ್ಕೆ ಶಾಲಾವಾತಾವರಣ ತಿಳಿಯಾಗುವ ಸಾರಾಂಶವುಳ್ಳ 'ಹುಡುಗ ಹೇಳಿದ ಕಥೆ' ಪರಿಣಾಮಕಾರಿಯಾಗಿದೆ. ಹೀಗೆ ಡಾ. ಎಚ್.ಟಿ. ಪೋತೆಯವರ ಸಂಕಲಿತ 22 ಕಥೆಗಳಲ್ಲಿಯೂ ಜೀವನದ ಮಹತ್ವದ ಘಟನೆಗಳನ್ನು ಬಿಂಬಿಸುವ ಕಥಾ ವಸ್ತುಗಳಿವೆ. ಟಿ.ಕೆ. ದಯಾನಂದರ 'ಬೋನಿಗೆ ಬಿದ್ದವರು', ಎಚ್.ಡಿ. ಉಮಾಶಂಕರ್ ಅವರ ಪ್ರತಿಮೆ ಮೊದಲಾದವು ಬುಡಕಟ್ಟು ಜನಾಂಗದ ಕಷ್ಟ-ಸುಖ ಪರಿಚಯಿಸುತ್ತವೆ. ಜಾತಿಜಗಳ ನಡೆಯುತ್ತಿದ್ದ ಸಂದರ್ಭದಲ್ಲಿ ಅಂಬೇಡ್ಕರ್ ಪ್ರತಿಮೆಯೇ ಜೀವ ತಾಳಿ ಮಕ್ಕಳಿಗೆ ತಿಳಿಸಿಹೇಳುವ ಪ್ರಸಂಗ ಪ್ರತಿಮೆ ಕಥೆಯಲ್ಲಿ ಗಮನ ಸೆಳೆಯುತ್ತದೆ. ಹೀಗೆ ಪ್ರಸ್ತುತ ಕಥಾ ಸಂಕಲನದಲ್ಲಿ ಸರ್ವಜಾತಿ-ಧರ್ಮ, ಸಮಾನತೆಗಾಗಿ ಆಶಿಸುವುದು ಎಲ್ಲಾ ಕಥೆಗಳ ಹಿಂದಿನ ಉದ್ದೇಶವಾಗಿದೆ.

**ಸಮಾರೋಪ:** ಡಾ. ಎಚ್.ಟಿ. ಪೋತೆ ಬೆತ್ತಲೆ ಚಂದ್ರ, ಮಾದನ ಕರೆಂಟ್ ಕತಂತ್ರ, ಚಮ್ಮಾವುಗೆ ಮೊದಲಾದ ಕಥಾ ಸಂಕಲನಗಳ ಮೂಲಕ ನಾಡಿನಾದ್ಯಂತ ಹೆಸರು ಮಾಡಿದವರು. ಅವರ ಬಯಲೆಂಬೊ ಬಯಲು (ಬಯೋಪಿಕ್ ಕಾದಂಬರಿ) ಬದುಕಿನ ತಲ್ಲಣಗಳಿಗೆ ಕತೆಗಾರನ ಜೀವನ ವೃತ್ತಾಂತಕ್ಕೆ ಕನ್ನಡಿ ಹಿಡಿದಿದೆ. ಅಂಬೇಡ್ಕರ ವಾಚಿಕೆ, ಬಿ. ಶ್ಯಾಮಸುಂದರರ ಜೀವನ ಸಾಧನೆ, ಮಹಾ ಬಿಂದು ಮೊದಲಾದವು ಪೋತೆ ಯವರ ಸೃಜನಶೀಲತೆ ಹಾಗೂ ವೈಚಾರಕ ಚಿಂತನೆಗೆ ನೆಲೆ-ಬೆಲೆ ಒದಗಿಸುತ್ತವೆ. ಬೌದ್ಧಕಥಾ ಸಂಪುಟ ಪೋತೆಯವರ ಸಂಘಟನಾ ಕೌಶಲ್ಯ ಹಾಗೂ ದೂರದೃಷ್ಟಿಯ ಫಲವಾಗಿ ಸಂಕಲಿತಗೊಂಡಿದೆ. ಸಮಾಜದಲ್ಲಿ ಕಾಲಾನುಕಾಲದಿಂದ ನಡೆಯುತ್ತಿರುವ ಅನಿಷ್ಟ ಪದ್ಧತಿಗಳಾದ ಜಾತೀಯತೆ, ಅಸಮಾನತೆ, ಮತಾಂಧತೆ, ಮೌಢ್ಯತೆ, ಭ್ರಷ್ಟಾಚಾರ, ಹಿಂಸೆ, ಮೋಸ, ವಂಚನೆಗಳನ್ನು ಕರಗಿಸಿ, ಕತ್ತರಿಸಿ, ಚದುರಿಸಿ, ಅರಿವೆಂಬ ಬೆಳಕು ಮೂಡಿಸಿ ಸಮಾಜದಲ್ಲಿ ಎಲ್ಲರೂ ಸಮಾನರು ಎಂಬ ಅಂಶವನ್ನು ಬಲಪಡಿಸಲು ಇಲ್ಲಿಯ ಕಥೆಗಳು ದಾರಿ ತೋರುತ್ತವೆ. ಬುದ್ಧ, ಬಸವ, ಕನಕ ಹಾಗೂ ಅಂಬೇಡ್ಕರ್ ರವರ ಅಹಿಂಸಾ ತತ್ವಕ್ಕೆ ಪೂರಕವಾಗಿ ಪೋತೆ ಯವರು ಇಲ್ಲಿ ಕತೆಗಳನ್ನು ನಾಡಿನ ಖ್ಯಾತ ಕತೆಗಾರರಿಂದ ಸಂಗ್ರಹಿಸಿ ಪ್ರಕಟಿಸಿದ್ದಾರೆ. ನವೋದಯದ ಶ್ರೇಷ್ಠ ಕವಿ, ಭಾರತೀಯ ಸಾಹಿತ್ಯ ನಿರ್ಮಾಪಕರಲ್ಲಿ ಒಬ್ಬರಾದ ಶ್ರೀ ಕುವೆಂಪು ರಾಮಾಯಣ ದರ್ಶನಂ ಕೃತಿಯಲ್ಲಿ ಆಶಿಸುವ 'ಸರ್ವೋದಯ, ಸಮನ್ವಯ ಹಾಗೂ ಪೂರ್ಣದೃಷ್ಟಿಗೆ' ಕಾರಣವಾಗುವ ಕಥೆಗಳನ್ನು ಸಂಗ್ರಹಿಸಿ, ಅದಕ್ಕೆ ಅರ್ಥಪೂರ್ಣ ಚೌಕಟ್ಟು ಹಾಕಿಕೊಟ್ಟು ಸಂಪಾದಕರು ಸಮಾಜವನ್ನು ತಿದ್ದುವ ಕಾರ್ಯ ಮಾಡಿದ್ದಾರೆ. ಇಂಥ ಮಹತ್ವದ ಕಥಾ ಸಂಪುಟವನ್ನು ಪಾಲಿ ಮತ್ತು ಬೌದ್ಧ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿಯಿಂದ 2020 ರಲ್ಲಿ ಪ್ರಕಟಿಸಿರುವುದು ಮಹತ್ವದ್ದಾಗಿದೆ.

# ಬಿ.ಶ್ಯಾಮಸುಂದರ್ ಕುರಿತಾದ ಪ್ರೊ.ಎಚ್.ಟಿ.ಪೋತೆಯವರ ಬರಹಗಳು



ಡಾ.ಸೌಭಾಗ್ಯ ಶಿವಪುತ್ರಪ್ಪ
ಕನ್ನಡ ಅತಿಥಿ ಪ್ರಾಧ್ಯಾಪಕರು
ಶರಣ ಸಾಹಿತ್ಯ ಗ್ರಂಥಾಲಯ
ಮತ್ತು ಸಂಪನ್ಮೂಲ
ಕೇಂದ್ರ, ಬಸವಕಲ್ಯಾಣ
ಜಿ.ಬೀದರ

ಸಮಾಜದಲ್ಲಿನ ಎಲ್ಲ ವರ್ಗ, ಜನಸಮುದಾಯದ ಜನರಿಗೆ ಅನ್ಯಾಯ, ಶೋಷಣೆ, ಅಸಮಾನತೆ, ಅವಮಾನವಾಗದಂತೆ ಹೋರಾಟಗಳು ನಡೆದದ್ದು ಚರಿತ್ರೆ. ಭಾರತ ದೇಶದಲ್ಲಿ ಹನ್ನರಡನೆಯ ಶತಮಾನದ ಸಂದರ್ಭದಲ್ಲಿ ಅಂದಿನ ಸಮಾಜೋ ಧಾರ್ಮಿಕ ಅವ್ಯವಸ್ಥೆಯ ವಿರುದ್ಧವಾಗಿ ಪ್ರತಿಭಟನೆ ಕೈಗೊಳ್ಳುವುದಕ್ಕೆ ಪ್ರೇರಕ ಶಕ್ತಿಯಾಗಿ ಮುಂಚೂಣಿಯಲ್ಲಿದ್ದವರು, ಬಸವಾದಿ ಶರಣರು. ಕಾಯಕ, ದಾಸೋಹ, ಪ್ರಾಮಾಣಿಕತೆ, ನಿಷ್ಠೆ, ನೈತಿಕತೆ, ಸರಳಸಜ್ಜನಿಕೆ ಮೌಲ್ಯಗಳಿಂದ ಸಮಸಮಾಜ ಕಟ್ಟಬಯಸಿದರು. ವರ್ಗ, ವರ್ಣ, ಜಾತಿ, ಲಿಂಗ ಭೇದವಿಲ್ಲದೆ 'ಸಕಲ ಜೀವಗಳ ಲೇಸನ್ನೇ ಬಯಸುವ ಮೌಲ್ಯ ಸಾಮಾಜೀಕರಣಗೊಳಿಸಿದರು. ಪಂಡಿತ ಸಮ್ಮುಖ ಸಾಹಿತ್ಯದ ವಿರುದ್ಧ ಜನಸಾಮಾನ್ಯರಿಗೆ ಅರ್ಥವಾಗುವಂತಹ ಆಡು ಭಾಷೆಯಲ್ಲಿ ವಚನ ಸಾಹಿತ್ಯ ರೂಪಗೊಂಡು ಜನಜಾಗೃತಿ ಮೂಡಿಸಿ, ಸಾಹಿತ್ಯಕ ಚಳವಳಿಯೆಂಬ ಕ್ರಾಂತಿಯನ್ನೇ ಹುಟ್ಟು ಹಾಕಿತು. ಚಳುವಳಿ ಮನುಷ್ಯನ ಮೂಲ ಅಗತ್ಯತೆ, ಸೌಕರ್ಯ, ಸ್ವಾತಂತ್ರ್ಯ, ಹಕ್ಕು ದಮನವಾದಾಗ ಅನಿವಾರ್ಯವಾಗಿ ಸಿಡಿದೇಳಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಹನ್ನೆರಡನೆ ಶತಮಾನದಲ್ಲಿನ ವಚನಕಾರರ ಹೋರಾಟ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ, ಸಾಂಸ್ಕೃತಿಕ ಸಮಾನತೆ, ಸಹೋದರತೆ ಕಲ್ಪಿಸುವಂತಹ ಮಹತ್ವದ ನೆಲೆಯಾಗಿ ನಿಂತಿತು.

ಕನ್ನಡ ಸಾಹಿತ್ಯದಲ್ಲಿ ಯುಗಧರ್ಮಕ್ಕನುಸಾರವಾಗಿ ಸಮಾಜದಲ್ಲಿನ ಜಡ ವ್ಯವಸ್ಥೆಗೆ ಬಿಸಿ ಮುಟ್ಟಿಸಿ ಬದಲಾವಣೆ ತರುವಂತಹ ಕಾರ್ಯ ಚಟುವಟಿಕೆಗಳು ನಿರಂತರವಾಗಿ ನಡೆದುಕೊಂಡು ಬಂದಿವೆ. ಸ್ವಾತಂತ್ರ್ಯ ಪೂರ್ವದಲ್ಲಿ ಸಮಾನತೆಗಾಗಿ, ಶೋಷಿತರ ಹಕ್ಕಿಗಾಗಿ ಮಹಾತ್ಮ ಜ್ಯೋತಿಬಾ ಫುಲೆ, ಶಾಹೂ ಮಹಾರಾಜ, ಸಯ್ಯಾಜಿರಾವ್ ಗಾಯಕವಾಡ, ಪೆರಿಯಾರ್, ನಾರಾಯಣ ಗುರು, ನಾಲ್ವಡಿ ಕೃಷ್ಣರಾಜ ಒಡೆಯರ ಮತ್ತು ಡಾ.ಬಾಬಾಸಾಹೇಬ ಅಂಬೇಡ್ಕರ್ ಮುಂತಾದವರು. ಅಂಬೇಡ್ಕರೋತ್ತರ ದಲಿತರ, ಶೋಷಿತರ ಚಳುವಳಿಯನ್ನು ಮುನ್ನಡೆಸಿಕೊಂಡು ಬಂದವರು ಬಿ.ಶ್ಯಾಮಸುಂದರ್. ಸಮಾಜದಲ್ಲಿ ನಡೆಯುವ ಅನ್ಯಾಯ, ಅಸಮಾನತೆಯನ್ನು ಖಂಡಿಸುತ್ತಾ ಚಲನಶೀಲಗೊಂಡು ಮಾರ್ಗೋಪಾಯಗಳನ್ನು ಕಂಡುಕೊಳ್ಳುವ ಪ್ರಮುಖ ಧ್ಯೇಯ, ಧೈಯೋದ್ದೇಶದೊಂದಿಗೆ ಬಂದ ಪ್ರತಿಭಾವಂತ ಸಂವೇದನಾಶೀಲ ಪ್ರಗತಿಪರ ಬರಹಗಾರರು, ಸಂಶೋಧಕರು, ಹೋರಾಟಗಾರರು. ಮೂಸೆಯಿಂದ ವೈಚಾರಿಕ ಚಿಂತನೆ, ಸಂಘಟನಾತ್ಮಕ ಹೋರಾಟಗಳು, ಸಾಮಾಜಿಕ ಸುಧಾರಣೆ ಆಲೋಚನೆಗಳು, ಸಮಸಮಾಜ ನಿರ್ಮಾಣದ ಕನಸನ್ನು ಜಾರಿಗೊಳಿಸಲು ಅವಿರತ ಸೇವೆಯನ್ನು ಸಲ್ಲಿಸಿದರು.

ಬಿ.ಶ್ಯಾಮಸುಂದರ್ ಅವರು ಮಹಾರಾಷ್ಟ್ರದ ಔರಂಗಾಬಾದ್‌ನಲ್ಲಿ 21.12.1908 ರಲ್ಲಿ ಮಾಲಾ ಸಮುದಾಯದ ಬದುಲಾ ಮಾಣಿಕ್ಯಂ ಮತ್ತು ಸುಧಾಬಾಯಿ ದಂಪತಿಗಳ ಉದರಲ್ಲಿ ಜನಿಸಿದರು. ಬಾಲ್ಯದಿಂದಲೂ ಈ ಸಮಾಜದಲ್ಲಿನ ಅನ್ಯಾಯ, ಅಸಮಾನತೆಯನ್ನು ವಿರೋಧಿಸಿಕೊಂಡು ಬಂದವರು. ಹೀಗಾಗಿಯೇ ದುಡಿಯುವ ಜನಸಮುದಾಯಗಳ ಮೇಲಿನ ಅಂತಃಕರಣದ ಧ್ವನಿಯಾಗಿ ಸಾಮಾಜಿಕನ್ಯಾಯ ಪರವಾಗಿ ಚಿಂತನೆಗೈಯ್ಯುತ್ತಾ ಶೋಷಿತ ಸಮುದಾಯಗಳಿಗೆ ಸ್ವಾತಂತ್ರ್ಯ, ಸಮಾನತೆ, ಶಿಕ್ಷಣದ ಜಾಗೃತಿ ಮೂಡಿಸಿದ ಪ್ರಮುಖ ಹೋರಾಟಗಾರ, ರಾಜಕೀಯ ಮುತ್ಸದ್ದಿ. ದೀನದಲಿತರ ಏಳ್ಗೆಗಾಗಿ ಸ್ಪಂಧಿಸಿದ ನೇತಾರ ಬಿ.ಶ್ಯಾಮಸುಂದರ್. ಡಾ. ಬಾಬಾಸಾಹೇಬ ಅಂಬೇಡ್ಕರ್ ಅವರ ಹೋರಾಟದ ಚಿಂತನೆ, ಸಂಘಟನಾತ್ಮಕ ಕಲ್ಪನೆ, ಶಿಕ್ಷಣದ ಪರಿಕಲ್ಪನೆಯಿಂದ ಪ್ರಭಾವಕ್ಕೊಳಗಾಗಿ ಕಷ್ಟ-ನಷ್ಟ, ಅವಮಾನವನ್ನು ಅನುಭವಿಸಿ,ತಮ್ಮ ಸುತ್ತಮುತ್ತಲಿನ ಶೋಷಿತ ಸಮುದಾಯಗಳಿಗೆ ತಿಳಿಸುತ್ತಾ, ಸಮಾಜದ ಮುಖ್ಯವಾಹಿನಿಗೆ ತರುವಂತಹ ಪ್ರಯತ್ನ ನಿರಂತರವಾಗಿ ಮಾಡಿ ದಲಿತ ಸಮುದಾಯಗಳನ್ನು ಪ್ರಗತಿ ಪಥದತ್ತ ಸಾಗಿಸಿದ, ದೀಮಂತ ನಾಯಕ.




ಡಾ. ಅಂಬೇಡ್ಕರೋತ್ತರ ಕಾಲಘಟ್ಟದಲ್ಲಿ ದಲಿತ ಚಿಂತಕರಾಗಿ, ಕ್ರಾಂತಿಯ ಜ್ಯೋತಿಯನ್ನು ಅಧಿಕೃತವಾಗಿ ಭಾರತ ದೇಶದಾದ್ಯಂತ ಬೆಳಗಿಸಲು ಬಿ. ಶ್ಯಾಮಸುಂದರ್ ಪ್ರಯತ್ನಿಸಿದರು. ಅಸ್ಪೃಶ್ಯತೆ, ಅವಮಾನ, ಅನ್ಯಾಯ, ಅತ್ಯಾಚಾರದಂತಹ ಅನೇಕ ಅವಮಾನಗಳಿಗೆ ತುತ್ತಾಗಿ ಶತಶತಮಾನಗಳಿಂದಲೂ ಮೂಕಪ್ರೇಕ್ಷಕರಂತೆ ಅನುಭವಿಸುತ್ತಾ ಬಂದ ಸಮುದಾಯಗಳಿಗೆ ಅರಿವು ಮೂಡಿಸಿದರು. ಅಸಮಾನತೆಗೆ ಬ್ರಾಹ್ಮಣಶಾಹಿಯ ಜೀವ ವಿರೋಧಿ ನೀತಿ, ಧೋರಣೆ, ಕುತಂತ್ರ ಬುದ್ಧಿಯೇ ಕಾರಣವೆಂಬುದನ್ನು ಮನಗಂಡ ಜ್ಯೋತಿಬಾ ಫುಲೆ, ಶಾಹು ಮಹಾರಾಜ್, ಡಾ.ಬಿ.ಆರ್.ಅಂಬೇಡ್ಕರ್, ಪೆರಿಯಾರ್, ನಾರಾಯಣಗುರು, ರಾಮಮನೋಹರ ಲೋಹಿಯಾ. ಜಯಪ್ರಕಾಶ ನಾರಾಯಣರ ವೈಚಾರಿಕ ಚಿಂತನೆಗಳನ್ನು ಮೈಗೂಡಿಸಿಕೊಂಡು ಸ್ವಾತಂತ್ರ್ಯ ನಂತರ ದಲಿತರ, ಶೋಷಿತರ, ಶ್ರಮಿಕರ, ಕಾರ್ಮಿಕರ, ರೈತರ ಬದುಕಿನಲ್ಲಿ ಸ್ವಾತಂತ್ರ್ಯ

ಸ್ವಾಭಿಮಾನದ ಆಶಾಕಿರಣ ಹುಟ್ಟು ಹಾಕಿದವರು.
ಬಿ.ಶ್ಯಾಮಸುಂದರ್ ಅವರು ಕಲ್ಯಾಣ ಕರ್ನಾಟಕ ಪ್ರದೇಶವನ್ನು ಕರ್ಮ ಭೂಮಿಯಾಗಿಸಿಕೊಂಡು ಸ್ವಾತಂತ್ರ್ಯ ಪೂರ್ವದಲ್ಲಿ ಹೈದ್ರಾಬಾದ್ ಕರ್ನಾಟಕದ ನಿಜಾಮ್ ಸಂಸ್ಥಾನದಲ್ಲಿ ಮಂತ್ರಿಯಾಗಿ, ಸಾಂಸ್ಕೃತಿಕ ಚಿಂತಕರಾಗಿ ದಲಿತ, ಹಿಂದೂಳಿದ ವರ್ಗಗಳ ಏಳ್ಗೆಗಾಗಿ ಅನೇಕ ಯೋಜನೆಗಳನ್ನು ಜಾರಿಗೆ ತಂದು ಜನಸಾಮಾನ್ಯರ ಹಿತರಕ್ಷಣೆ ಮಾಡಿದ ಅಪರೂಪದ ಚಿಂತಕ. ಸಂಘಟನಾತ್ಮಕವಾಗಿ ತೊಡಗಿಸಿಕೊಂಡು 'ಭಾರತೀಯ ಭೀಮಸೇನೆ' ಎಂಬ ಸಂಘಟನೆಯನ್ನು ಕಟ್ಟಿ ವಿನೂತನ ಚಳುವಳಿ, ಹೋರಾಟ ಮಾಡಿದ ಕೀರ್ತಿ ಬಿ.ಶ್ಯಾಮಸುಂದರ್ ಅವರಿಗೆ ಸಲ್ಲುತ್ತದೆ. ಭಾರತೀಯ ಭೀಮಸೇನೆಯಿಂದ ಪ್ರಭಾವಿತರಾಗಿ, ಪ್ರೇರಣೆಗೊಂಡು ಮಹಾರಾಷ್ಟ್ರದಲ್ಲಿ ದಲಿತ ಪ್ಯಾಂಥರ್, ಕರ್ನಾಟಕದಲ್ಲಿ ದಲಿತ ಸಂಘರ್ಷ ಸಮಿತಿಯಂತಹ ಹಲವಾರು ಸಂಘಟನೆಗಳು ರಚನೆಗೊಂಡವು. ಬಿ. ಶ್ಯಾಮಸುಂದರ್ ಅವರು ಅಪ್ರತಿಮ ಪ್ರತಿಭಾವಂತ, ಹೋರಾಟಗಾರ, ಸಾಹಿತಿ, ಸಮಾಜದ ಹಿತಚಿಂತಕ, ದಲಿತರ, ಶೋಷಿತರ, ಹಿಂದೂಳಿದ ವರ್ಗಗಳ ಉನ್ನತಿಗಾಗಿ ಹಗಲಿರುಳು ಶ್ರಮಿಸಿದ ಮಾತೃಹೃದಯಿ.
ಸಾಹಿತ್ಯ ಸಮಾಜದ ಕುರಿತು ಚಿಂತನಾತ್ಮಕ ಅವಲೋಕನ ಮಾಡುವುದು ಲೇಖಕ ಹೋರಾಟಗಾರನ, ಸಮಾಜ ಚಿಂತಕನ ಅಂತರಂಗದ ಭಾವನೆಯಾದರೆ, ಸಮಾಜ ಸುಧಾರಿಸುವುದು, ಪ್ರಗತಿಪರ ವಿಚಾರ ಪ್ರಚೂರ ಪಡಿಸುವುದು ಕಲಾವಿದ ಸಾಹಿತಿಯ ಕೈಚಳಕ. ಅದು ನೋಡುಗನಿಗೆ ಮತ್ತು ಸಾಹಿತ್ಯಕವಾಗಿರುವ ವಿಚಾರಗಳು ಓದುಗನಿಗೆ ಹೊಸ ಚೈತನ್ಯ, ಸಮಾಜಪರ ಮೌಲ್ಯ, ಪ್ರಜ್ಞೆ ಮೂಡಿಸುತ್ತದೆ. ಇದರಿಂದಾಗಿ ಸಮಾಜದ ಅಭಿವೃದ್ಧಿ ಜೊತೆಗೆ ಮಾನವನ ಜ್ಞಾನದ ಅರಿವು ವಿಸ್ತರಿಸುತ್ತದೆ ಎಂಬ ಸದಾಶಯದ ಬಹುಮುಖ ಪ್ರತಿಭೆಯ ಹೋರಾಟಗಾರರಾಗಿ, ಸಮಾಜದ ಹಿತಚಿಂತಕರಾಗಿ ಪ್ರತಿಭಟಿಸಿದ ಚಿಂತನಾಕ್ರಮ, ಅನನ್ಯ. ಪುರೋಹಿತಶಾಹಿ, ಬಂಡವಾಳಶಾಹಿ, ಅಧಿಕಾರಶಾಹಿಗಳ ಕಪಿಮುಷ್ಟಿಯಿಂದ ಜನಸಾಮಾನ್ಯರನ್ನು ಬಿಡುಗಡೆಗೊಳಿಸಿ ಸ್ವಾತಂತ್ರ್ಯ, ಸಮಾನತೆ ಹಕ್ಕು, ಸ್ವಾಭಿಮಾನವನ್ನು ಧಕ್ಕಿಸುವ ದಿಸೆಯಲ್ಲಿ ತೊಡಗಿಸಿಕೊಂಡು, ದೆ ಬರ್ನರ್, ಭಾರತೀಯ ಮೂಲನಿವಾಸಿ ಮತ್ತು ಭೂದೇವತಾಂಕಾ ಮೆನಿಫೆಸ್ಟೋ ಹೀಗೆ ಹದಿನೇಳು ಮೌಲಿಕ ಕೃತಿಗಳನ್ನು ಇಂಗ್ಲಿಷ್, ಉರ್ದು, ಹಿಂದಿ, ಮರಾಠಿ ಸಾಹಿತ್ಯಲೋಕಕ್ಕೆ ನೀಡಿದವರು. ಚಿಕಿತ್ಸಕ ಮನೋಭಾವ, ಎಲ್ಲರನ್ನು ಸಮನಾಗಿ ಕಾಣುವ ಉದಾತ್ತ ಗುಣಗಳು ಬಾಲ್ಯದಿಂದಲೂ ಮೈಗೂಡಿಸಿಕೊಂಡವರು. ಮಾನವೀಯ ಮೌಲ್ಯ, ನೈತಿಕತೆ, ಪ್ರಗತಿಪರ ಗುಣಗಳು ಸರ್ವಕಾಲಿಕ ಸತ್ಯ ಹೇಳುವ ಎದೆಗಾರಿಕೆ ಇರುವಂತಹ ದೀಮಂತ ರಾಜಕೀಯ ನಾಯಕರ ಚಿಂತನೆಗಳು ಮುಂದಿನ ಪೀಳಿಗೆಗೆ ದಾರಿದೀಪ.
ಸಮಾಜದಲ್ಲಿ ಪ್ರತಿಯೊಬ್ಬರು ಸರಿಸಮಾನರು; ಯಾರು ಮೇಲಲ್ಲ, ಯಾರು ಕೀಳಲ್ಲ, ಪ್ರತಿಯೊಬ್ಬ ರಲ್ಲಿಯೂ ತನ್ನದೆಯಾದ ಆತ್ಮಗೌರವ, ಪ್ರಜ್ಞೆ, ಕ್ರಿಯಾಶೀಲ ಮನೋಭಾವ, ಸೂಕ್ಷ್ಮ ಗ್ರಹಿಕೆ, ಸ್ವಾಭಿಮಾನವಿರುತ್ತದೆ ಎಂದು ಸಾರಿದರು. ಉತ್ತಮ ಬರಹಗಾರ, ಸಾಹಿತಿ, ಬಹುಭಾಷಾ ತಜ್ಞ, ಐದಾರು ಭಾಷೆಗಳಲ್ಲಿ ಪ್ರಭುದ್ಧತೆ ನಿರರ್ಗಳವಾಗಿ, ನಿರ್ಭಿಡೆಯಿಂದ ಮಾತಾಡುವ ವಾಕ್‌ಪಟು. ಮೈಸೂರು ಕರ್ನಾಟಕದ ಶಾಸಕರಾಗಿ ವಿಧಾನ ಸಭೆಯಲ್ಲಿ ಅನ್ಯಾಯ ವಿರುದ್ಧ ನೇರಾ ನೇರವಾಗಿ ಖಂಡಿಸುತ್ತಾ, ಸಮಾಜದಲ್ಲಿ ನಡೆಯುವಂತಹ ಅನ್ಯಾಯ, ಅಸಮಾನತೆ, ದೌರ್ಜನ್ಯ, ಜಾತಿಯತೆ, ಮೂಢನಂಬಿಕೆಗಳನ್ನು ಪ್ರಖರವಾಗಿ ವಿರೋಧಿಸಿ ಸಾಮಾಜಿಕ ನ್ಯಾಯವನ್ನು ಒದಗಿಸಿದಂತವರು. ಶ್ರೇಣಿಕೃತ ಭಾರತೀಯ ಸಮಾಜವನ್ನು ವಿಮರ್ಶಿಸಿ ಸಾಹಿತ್ಯಕವಾಗಿ ನಿರೂಪಿಸಿದ ವಿಷಯ ವಸ್ತುಗಳು ಸಾಕ್ಷಿಕರಿಸುತ್ತವೆ. ಒಂದು ದೇಶ, ರಾಜ್ಯ, ಸಮಾಜದ ಅಭಿವೃದ್ಧಿಗೆ ಜನಸಾಮಾನ್ಯರ ಹಕ್ಕು ಭಾದ್ಯತೆಗಳ ಕುರಿತು ಆತ್ಮಾವಲೋಕನ ಮಾಡಿಕೊಂಡು ದುಡಿಯುವ ವರ್ಗದ, ದೀನದಲಿತರ, ಕಾರ್ಮಿಕರ ಹಿತರಕ್ಷಣೆಗಾಗಿ ಹೋರಾಡಿ ಸಾಮಾಜಿಕ ನ್ಯಾಯ ಒದಗಿಸಿಕೊಡಲು ಅವಿರತವಾಗಿ ಶ್ರಮಿಸಿದ



ಶೇರ್-ಎ-ದಖ್ಖನ್ ಬಿರುದಾಂಕಿತ ಬಿ. ಶ್ಯಾಮಸುಂದರ್ ಅವರ ಮೌಲ್ಯಗಳು ಸಮಾಜಕ್ಕೆ ಪ್ರಸ್ತುತವೆನಿಸುತ್ತವೆ.
ಇಂತಹ ದೈತ್ಯ ಶಕ್ತಿಯಾಗಿ ಹೊರಹೊಮ್ಮಿದ ವಿಚಾರವಾದಿಯ ವಿಚಾರ, ಚಿಂತನೆ, ಹೋರಾಟಗಳನ್ನು ಮನುಪ್ರಣಿತ ಮನಸ್ಸುಗಳಿಂದ ವಿಸ್ಮೃತಿ ಹೊಂದಿ ಅವಜ್ಞೆಗೊಳಗಾಗಿ, ಭಾರತ ಜನನಾಯಕರ ಚರಿತ್ರೆಯಲ್ಲಿ ದಾಖಲಾಗಬೇಕಿತ್ತು, ಆದರೆ ಕಾಣದ ಕೈ ಕುತಂತ್ರದಿಂದ ಸಾಧ್ಯವಾಗಿಸಿರಲಿಲ್ಲ. ಬೆಂಕಿಯನ್ನು ಬಚ್ಚಿಡಲು ಸಾಧ್ಯವಿಲ್ಲ ಎಂಬಂತೆ ಬೆಳಕು ಕಾಣದೆ ಹೋದ ದಲಿತನಾಯಕನ ಗುರಿ, ಧ್ಯೇಯೋದ್ದೇಶಗಳನ್ನು ಮುಖ್ಯವಾಹಿನಿಗೆ ತಂದು ಪ್ರಚಾಪಡಿಸಿದವರು ಪ್ರೊ.ಎಚ್.ಟಿ.ಪೋತೆಯವರು. ಸಮಾಜ ಸುಧಾರಕ ವಿಚಾರ, ದೂರದೃಷ್ಟಿಕೋನ, ಬಹುಮುಖ ಪ್ರತಿಭೆ, ಸಾಹಿತ್ಯಕ, ಸಾಮಾಜಿಕ ಕ್ರಾಂತಿಕಾರಕ ಹೋರಾಟ 'ಭಾರತೀಯ ಭೀಮಸೇನೆ'ಎಂಬ ಸಂಘಟನೆ ಹುಟ್ಟು ಹಾಕಿ ಸಂಸ್ಥಾಪಕ ಅಧ್ಯಕ್ಷರಾಗಿ ಅನ್ಯಾಯದ ವಿರುದ್ಧ ಧ್ವನಿಯೆತ್ತಿ ನ್ಯಾಯ ಒದಗಿಸಿದಂತ ನಾಯಕನನ್ನು ಯುವಪೀಳಿಗೆಗೆ ಪರಿಚಯಿಸಿದವರು. ದಕ್ಷಿಣ ಭಾರತದ ಸಂಘಟನಾ ಚತುರ ಪ್ರಖ್ಯಾತಿಯ ಬಿ.ಶ್ಯಾಮಸುಂದರ್ ಅವರ ಭೀಮಸೇನೆ ಸಂಘಟನೆಯ ಅನುಯಾಯಿಗಳಾಗಿ ಇಡೀ ಭಾರತದಾದ್ಯಂತ ಲಕ್ಷಾನುಗಟ್ಟಲೆ ಅನುಯಾಯಿಗಳು, ಸಕ್ರೀಯ ಕಾರ್ಯಕರ್ತರನ್ನು ಪ್ರೇರೆಪಿಸಿದ ಚರಿತ್ರೆಯನ್ನು ಇಂದಿನ ಆಧುನಿಕ ಜಗತ್ತಿನ ಯುವ ಪೀಳಿಗೆಗೆ ಮೌಲಿಕ ವಿಚಾರ, ಸಮಾಜಪರ ಚಿಂತನೆಗಳು ಅರಿತುಕೊಳ್ಳುವುದು ಅವಶ್ಯಕ ಮತ್ತು ಇಂದಿನ ಹೋರಾಟಗಾರರಿಗೆ, ರಾಜಕಾರಣಿಗಳಿಗೆ ಮಾದರಿ. ಹೀಗಾಗಿ ಪ್ರೊ.ಎಚ್.ಟಿ.ಪೋತೆಯವರು ನನಗೆ ಬಿ.ಶ್ಯಾಮಸುಂದರ್ ಅವರ ಜೀವನ ಸಾಧನೆ ಎಂಬ ವಿಷಯ ಕುರಿತು ಸಂಶೋಧನೆ ಮಾಡಲು ಮಾರ್ಗದರ್ಶನ ನೀಡಿದವರು.
ಒಟ್ಟಾರೆಯಾಗಿ ಪ್ರೊ.ಎಚ್.ಟಿ.ಪೋತೆಯವರು ಬಿ.ಶ್ಯಾಮಸುಂದರ್ ಅವರ ದೆ ಬರ್ನರ್ ಕೃತಿಯನ್ನು, ಬೆಂದವರು ಎಂದು, ಭಾರತೀಯ ಮೂಲನಿವಾಸಿ ಕೃತಿಯನ್ನು ಮೂಲಭಾರತೀಯರು:ಒಂದು ಅವಲೋಕನ ಎಂದು, ಭೂದೇವತಾಂಕಾ ಮೆನಿಫೆಸ್ಟೋ ಕೃತಿಯನ್ನು ಭೂದೇವತೆಗಳ ಪ್ರಣಾಳಿಕೆಯೆಂದು ಕನ್ನಡಕ್ಕೆ ಅನುವಾದಿಸಿ ಕೊಟ್ಟಿದ್ದಾರೆ. ಬಿ.ಶ್ಯಾಮಸುಂದರ್ ಅವರ ಸಮಗ್ರ ಸಾಧನೆ, ಸಾಹಿತ್ಯಕ, ಸಾಮಾಜಿಕ, ಸಾಂಸ್ಕೃತಿ ಹೋರಾಟದ ಹೆಜ್ಜೆ, ಜಾಗೃತಿಯ ಜ್ಯೋತಿ ಕುರಿತು ಬಿ.ಶ್ಯಾಮಸುಂದರ್ ಜೀವನ ಕಥನ ಕೃತಿಯನ್ನು ಹೊರತಂದಿದ್ದಾರೆ. ಹೀಗೆ ಸಮಾಜ ಸುಧಾರಕ, ಹುಟ್ಟು ಹೋರಾಟಗಾರರ ಚಿಂತನೆ, ವಿಚಾರ, ನಡೆ-ನುಡಿ ಸಾಮರಸ್ಯದ ಸಮಸಮಾಜ ನಿರ್ಮಾಣಗೊಳ್ಳಲು ಕಾರಣವಾಗುತ್ತವೆ ಎಂದು ಹೇಳಬಹುದು.

# ಬಲಪಂಥೀಯ, ಎಡಪಂಥೀಯ ಎಂಬ ಭೇದ ಹೋಗಿ ಮನುಷ್ಯ ಕೇಂದ್ರಿತ ಸಾಹಿತ್ಯ ರಚನೆಯಾಗಬೇಕು: ಪ್ರೊ.ಎಚ್.ಟಿ.ಪೋತೆ

**ಸಂದರ್ಶನ**

ವಿಜಯಪುರ ಜಿಲ್ಲೆಯ ಇಂಡಿ ತಾಲೂಕಿನ ಹಂಜಗಿ ಗ್ರಾಮದವರಾದ ಪ್ರೊ. ಎಚ್.ಟಿ. ಪೋತೆ ಅವರು ನಾಡಿನ ಸಂವೇದನಾಶೀಲ ಕಥೆಗಾರ, ಕಾದಂಬರಿಕಾರ, ವಿಮರ್ಶಕ, ಸಂಶೋಧಕ, ಅನುವಾದಕ ಹಾಗೂ ಜಾನಪದ ವಿದ್ವಾಂಸರಾಗಿದ್ದಾರೆ. ಇವರು ಗುಲಬರ್ಗಾ ವಿಶ್ವವಿದ್ಯಾಲಯದಿಂದ ಎಂ.ಎ., ಎಂ.ಫಿಲ್., ಪಿಎಚ್.ಡಿ. ಪದವಿ ಮತ್ತು ರಾಣಿಚನ್ನಮ್ಮ ವಿಶ್ವವಿದ್ಯಾಲಯದಿಂದ ಡಿ.ಲಿಟ್. ಪದವಿ ಪಡೆದಿದ್ದಾರೆ. ಪ್ರಸ್ತುತ ಇವರು ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆ, ಪ್ರಸಾರಾಂಗ ಮತ್ತು ಪಾಲಿ ಅಧ್ಯಯನ ಸಂಸ್ಥೆಯ ನಿರ್ದೇಶಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಇವರು 'ಚಮ್ಮಾವುಗೆ', 'ಬೆತ್ತಲಾದ ಚಂದ್ರ', 'ಕರುಳರಿಯದ ಹೊತ್ತು', 'ಮಾದನ ಕರೆಂಟ್ ಕತಂತ್ರ', ಮತ್ತು 'ಅನೇಕಲವ್ಯ' ಹಾಗೂ 'ದೇವರ ಧರ್ಮ' ಎಂಬ ಆರು ಕಥಾ ಸಂಕಲನಗಳನ್ನು ಮತ್ತು 'ರಮಾಬಾಯಿ', 'ಬಯಲೆಂಬೊ ಬಯಲು', 'ಮಹಾಬಿಂದು' ಎಂಬ ಕಾದಂಬರಿಗಳನ್ನು ರಚಿಸಿದ್ದಾರೆ. ಅಲ್ಲದೇ ಜಾನಪದ ಸಿಂಗಾರ, ಜಾನಪದ ಆಯಾಮಗಳು, ಸಮಾಜೋ ಜಾನಪದ, ಜನಪದ ಕಲೆ ಸಂಸ್ಕೃತಿ, ಜನಪದ ಕಲೆ ಸಮಸ್ಯೆ ಸವಾಲುಗಳು, ದಲಿತ ಜಾನಪದ, ಕರ್ನಾಟಕದ ದಲಿತ ಜಾನಪದ ವಿದ್ವಾಂಸರು ಮುಂತಾದ ಜಾನಪದಕ್ಕೆ ಸಂಬಂಧಿಸಿದ ರಚಿಸಿದ್ದಾರೆ. ಕೃತಿಗಳನ್ನು ಅಂಬೇಡ್ಕರ್: ದಲಿತ ಚಳವಳಿ, ಬುದ್ಧನೆಡೆಗೆ, ದಲಿತಾಂತರಂಗ, ಜೀವಪರ ಚಿಂತನೆ, ಶರಣ ಸಂಸ್ಕೃತಿ ಸಂವಾದ, ಅಂಬೇಡ್ಕರ್ ಸಂವೇದನೆ, ಅಂಬೇಡ್ಕರ್ ವಾಚಿಕೆ, ಅಂಬೇಡ್ಕರ್ ಕಥನ, ಅಂಬೇಡ್ಕರ್ ಭಾರತ, ಅಂಬೇಡ್ಕರ್: ಪುಸ್ತಕ ಪ್ರೀತಿ ಅಂಬೇಡ್ಕರ್ ಮತ್ತು..., ಎಲ್ಲರ ಅಂಬೇಡ್ಕರ್ ಮುಂತಾದ ದಲಿತ ಸಾಹಿತ್ಯ ಮತ್ತು ವೈಚಾರಿಕ ಸಾಹಿತ್ಯ ಕೃತಿಗಳನ್ನು ರಚಿಸಿದ್ದಾರೆ. ಇವರಿಗೆ ಕರ್ನಾಟಕ ಜಾನಪದ ಅಕಾಡೆಮಿ ರಾಜ್ಯ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ರಾಜ್ಯ ಪ್ರಶಸ್ತಿ, ಗೊರುಚ ಜಾನಪದ ಪ್ರಶಸ್ತಿ ಮತ್ತು ಜಯತೀರ್ಥ ರಾಜಪುರೋಹಿತ ಪ್ರಶಸ್ತಿಗಳು ಲಭಿಸಿವೆ. ಇವರ ಸಾಹಿತ್ಯ ಸೇವೆಯನ್ನು ಪರಿಗಣಿಸಿ ವಿಜಯಪುರದಲ್ಲಿ 29, 30 ಜುಲೈ 2023 ರಂದು ನಡೆಯುತ್ತಿರುವ 10ನೇ ಅಖಿಲ ಭಾರತ ದಲಿತ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಗಿದೆ. ಇಲ್ಲಿಯವರೆಗಿನ ಅವರ ಸಾಹಿತ್ಯಿಕ ಸೇವೆ ಹಾಗೂ ಬದುಕಿನ ಪಯಣ ಕುರಿತ ಸಂವಾದದ ಮಾತುಕತೆಗಳು ಈ ಕೆಳಗಿನಂತಿವೆ.





ಕಿರಣ ವಲ್ಲೇಪುರೆ
ಸಂಶೋಧಕರು
ಕನ್ನಡ ಅಧ್ಯಯನ ಸಂಸ್ಥೆ
ಗುಲಬರ್ಗಾ ವಿಶ್ವವಿದ್ಯಾಲಯ
ಕಲಬುರಗಿ
ಮೊ: 70224 88018

**▸▸ನೀವು ವಿಜಯಪುರ ಜಿಲ್ಲೆಯ ಇಂಡಿ ತಾಲೂಕಿನ ಹಂಜಗಿ ಗ್ರಾಮದ ಒಂದು ಬಡ ಕುಟುಂಬದಿಂದ ಬಂದು ಇವತ್ತು ಅಖಿಲ ಭಾರತ ಮಟ್ಟದ ಸಮ್ಮೇಳನಕ್ಕೆ ಸರ್ವಾಧ್ಯಕ್ಷರಾಗಿದ್ದಿರಿ ಏನನಿಸುತ್ತದೆ? ಅದರಲ್ಲೂ ನಿಮ್ಮ ತವರು ಜಿಲ್ಲೆಯಲ್ಲಿ ನಡೆಯುತ್ತಿರುವ ಸಮ್ಮೇಳನವಿದು. ಇಲ್ಲಿಯವರೆಗಿನ ನಿಮ್ಮ ಬದುಕಿನ ಪಯಣ ಹೇಗಿತ್ತು?**

ಅಖಿಲ ಭಾರತ ದಲಿತ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷನಾದುದು ಹೆಮ್ಮೆಯ ಸಂಗತಿ. ಬಯಸದೇ ಬಂದ ಗೌರವವೆಂದು ನಾನು ನಂಬಿದ್ದೇನೆ. ಹೌದು ನಮ್ಮದು ಬಡಕುಟುಂಬ. ಆದರೆ ಶಿಕ್ಷಣದ ಹಾದಿಯಲ್ಲಿ ನಮ್ಮದು ಶ್ರೀಮಂತ ಕುಟುಂಬ. ತಂದೆ ಸ್ವಾತಂತ್ರ್ಯ ಪೂರ್ವದಲ್ಲಿ 6ನೇ ತರಗತಿವರೆಗೆ ಓದಿದ್ದರು. ಅಕ್ಷರದ ಹಂಬಲದಿಂದಾಗಿ ನಮಗೆಲ್ಲ ಶಿಕ್ಷಣ ಕೊಡಿಸಿದರು. ಶಿಕ್ಷಣದಿಂದ ಏನೆಲ್ಲ ಸಾಧಿಸಬಹುದು ಎನ್ನುವುದಕ್ಕೆ ನಮ್ಮ ಕುಟುಂಬವೇ ಉದಾಹರಣೆ ಎಂದರೆ ತಪ್ಪಾಗಲಿಕ್ಕಿಲ್ಲ. ನಾನು ಹುಟ್ಟಿ ಬೆಳೆದ ಜಿಲ್ಲೆ ವಿಜಯಪುರದಲ್ಲಿ ನನಗೆ ಗೌರವ ಸಿಗುತ್ತಿರುವುದು ನನ್ನ ಸಮುದಾಯಕ್ಕೆ ಸಿಕ್ಕ ಗೌರವವೆಂದೇ ನಾನು ಅಂದುಕೊಂಡಿದ್ದೆನೆ. ಅಕ್ಷರದೊಂದಿಗಿನ ಒಡನಾಟ ನಮಗಾಗುವ ಅವಮಾನಗಳನ್ನು ತಡೆದಿದೆ. ಆದಾಗ್ಯೂ ಜಾತಿ ಆಧಾರಿತ ಸಾಮಾಜಿಕ ಜೀವನದಲ್ಲಿ ದಲಿತ

ಮಾಡಬೇಕಾಗಿರುವುದು ಸಂಘರ್ಷ. ಸಂಘರ್ಷವೇ ನನ್ನನ್ನು ಇಲ್ಲಿಯವರೆಗೆ ತಂದು ನಿಲ್ಲಿಸಿದೆ.

**▶▶ನೀವು ಸಂಶೋಧನ ಹಂತದ ವರೆಗಿನ ಶಿಕ್ಷಣ ಪಡೆದು ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾಗಿ, ಮೌಲ್ಯಮಾಪನ ಕುಲಸಚಿವರಾಗಿ ಕೆಲಸ ಮಾಡಿದ್ದಿರಿ. ಇಂದು ಕನ್ನಡ ಅಧ್ಯಯನ ಸಂಸ್ಥೆ ಮತ್ತು ಪ್ರಸಾರಾಂಗದ ನಿರ್ದೇಶಕರಾಗಿ ಕಾರ್ಯ ನಿರ್ವಹಿಸುತ್ತಿದ್ದಿರಿ. ಯಾವ ಅರಿವು ನಿಮ್ಮನ್ನು ಇಷ್ಟು ಎತ್ತರಕ್ಕೆ ಕರೆದುಕೊಂಡು ಬಂತು?**

ಶಿಕ್ಷಣದಿಂದಾಗಿ ಇಷ್ಟೆಲ್ಲ ಹುದ್ದೆಗಳು ದೊರಕಿವೆ. ಅಧ್ಯಯನ, ಅಧ್ಯಾಪನ, ಸಂಶೋಧನೆ ಮಾಡುವ ಹಂತ ತಲುಪಿದ್ದು ಮೀಸಲಾತಿ, ಸಂವಿಧಾನದಿಂದ ಎಂಬುದು ಹೆಮ್ಮೆ ಎನಿಸುತ್ತದೆ. ಒಂದು ಮಾತಂತು ನಿಜ ಹುದ್ದೆಗಳು ಸಿಕ್ಕಾಗ ಸುಮ್ಮನೇ ಕೂಡುವುದಲ್ಲ; ಹುದ್ದೆಗಳಿಗೆ ತಕ್ಕ ಕೆಲಸ ಮಾಡಿದಾಗ ಮನುಷ್ಯ ಎತ್ತರಕ್ಕೆ ಬೆಳೆಯಬಲ್ಲ ಎಂದು ನಂಬಿದ್ದೇನೆ.

**▶▶ನಿಮ್ಮ ಆರಂಭಿಕ ಓದಿನ ಸಂದರ್ಭದಲ್ಲಿ ನಿಮಗೆ ಇಷ್ಟವಾದ ಮತ್ತು ನಿಮ್ಮನ್ನು ಪ್ರಭಾವಿಸಿದ ಕನ್ನಡ ಲೇಖಕ, ಕವಿ ಯಾರು? ಮತ್ತು ಯಾವ ಕೃತಿ ನಿಮ್ಮನ್ನು ಹೆಚ್ಚು ಕಾಡಿದೆ? ಏಕೆ?**

ನನ್ನ ಆರಂಭಿಕ ಓದಿನ ಸಂದರ್ಭದಲ್ಲಿ ನನ್ನನ್ನು ಹೆಚ್ಚು ಪ್ರಭಾವಿಸಿದ ಲೇಖಕರಲ್ಲಿ ಕಕ್ಕಯ್ಯ ಪೋಳ. ಚೆನ್ನಣ್ಣ ವಾಲೀಕಾರ ಪ್ರಮುಖರು. 'ಬುದ್ಧ ಮತ್ತು ಆತನ ಧಮ್ಮ' ಕೃತಿ ನನ್ನ ಮೇಲೆ ಹೆಚ್ಚು ಪ್ರಭಾವ ಬೀರಿದೆ. ಇದು ಬಾಬಾಸಾಹೇಬರು ರಚಿಸಿದ ಎರಡನೆಯ ಸಂವಿಧಾನವೆಂದೇ ಹೇಳಬಹುದು.

**▶▶ನೀವು ಪಿಎಚ್.ಡಿ ಅವಧಿಯಲ್ಲಿ 'ಹೈದ್ರಾಬಾದ ಕರ್ನಾಟಕದ್ ಜನಪದ ಪ್ರದರ್ಶನ ಕಲೆಗಳು' ಎಂಬ ವಿಷಯ ಕುರಿತು ಸಂಶೋಧನಾ ಅಧ್ಯಯನ ಮಾಡಿದ್ದಿರಿ. ಈ ಅಧ್ಯಯನದಿಂದ ನಿಮಗೆ ಸಿಕ್ಕ ತಿಳುವಳಿಕೆ ಮುಂದೆ ನಿಮಗೆ ಅಧ್ಯಯನ, ಅಧ್ಯಾಪನ, ಬರವಣಿಗೆಗೆ ಹೇಗೆ ನೆರವಾಯಿತು?**

ಜಾನಪದ ಕ್ಷೇತ್ರ ಅದು ದುಡಿಯುವ ವರ್ಗದ ಜ್ಞಾನ ಕ್ಷಿತಿಜ. ಅದು ಸಮಾಜ ವಿಜ್ಞಾನವೂ ಹೌದು, ದಲಿತ ಸಾಹಿತ್ಯವೂ ಹೌದು. ನನ್ನ ಅಧ್ಯಯನದ ಸಂದರ್ಭದಲ್ಲಿ ಅನಿಸಿದ್ದೇನೆಂದರೆ, ನಮ್ಮ ಪರಂಪರೆಯ ಪ್ರತೀಕವಾಗಿರುವ ಜನಪದ ಕಲೆಗಳಿಗೆ ಅಸ್ಪೃಶ್ಯತೆಯನ್ನು ಅಂಟಿಸಿದವರು ನಮ್ಮವರೆ. ಅದನ್ನೀಗ ಅವರು ಇದು ನಮ್ಮ ಸಂಸ್ಕೃತಿ, ಸಂಸ್ಕಾರವೆಂದೂ ಹೇಳುತ್ತಾರೆ. ಕಲೆ ಪ್ರೀತಿಸುವ ಮಡಿವಂತರು ಕಲಾವಿದನನ್ನು ಗೌರವಿಸುವುದಿಲ್ಲ. ಇಂಥ ಮಡಿ ಮೈಲಿಗೆಯಿಂದಲೇ ಕಲೆಗೆ ಬೆಲೆ ಇಲ್ಲದಂತಾಗಿದೆ. ಇದು ಶ್ರಮಿಕ ವರ್ಗವನ್ನು ವ್ಯವಸ್ಥೆ ಗೌರವಿಸುವ ಪರಿಯಾಗಿದೆ.

**▶▶ನಿಮ್ಮ ಸಾಹಿತ್ಯ ಬರವಣಿಗೆಯ ಹೊತ್ತು ಮತ್ತು ಸ್ಥಳ ಯಾವುದು? ಯಾವ ಸಮಯದಲ್ಲಿ ನಿಮ್ಮ ಬರವಣಿಗೆ ಪರಿಣಾಮಕಾರಿಯಾಗಿ ಮೂಡಿ ಬರುತ್ತದೆ? ಯಾವ ಸ್ಥಳ ನಿಮ್ಮ ಬರವಣಿಗೆಗೆ ಹೆಚ್ಚು ಪೋಷಕವಾಗಿರುತ್ತದೆ?**

ನಾನು ನಿತ್ಯ ಯೋಚಿಸುತ್ತೇನೆ. ಚಿಂತಿಸುತ್ತೇನೆ. ಅದಕ್ಕೆ ಸ್ಥಳ ಸಮಯವೆಂಬುದಿಲ್ಲ. ನನಗೆ ಸಮಾಜದಲ್ಲಾಗುವ ಕೆಟ್ಟ ಘಟನೆಗಳಿಂದ, ವಯಕ್ತಿಕ ಇಲ್ಲಾ ಸಾಮೋಹಿಕವಾಗಿ ದುರ್ಬಲರಿಗಾಗುವ ಅಪಮಾನಗಳಿಂದ ಬೇಸರ ಆದಾಗ ಪರಿಹಾರದ ಮಾತುಗಳು ಆಡುವ ಬದಲು ಬರೆಯಲು ಅಣಿಯಾಗುತ್ತೇನೆ. ಇಂಥ ಸಂದರ್ಭದಲ್ಲಿ ಬರಹ ಹೆಚ್ಚು ಫಲಪ್ರದವಾಗುತ್ತದೆ.

**▶▶ನೀವು ಜನಪದ ಸಾಹಿತ್ಯ, ದಲಿತ ಸಾಹಿತ್ಯ, ವೈಚಾರಿಕ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಮಹತ್ವದ ಕೃತಿಗಳನ್ನು ರಚಿಸಿದ್ದಿರಿ. ಅವುಗಳಲ್ಲಿ ಇನ್ನು ಕೆಲವು ಕೃತಿಗಳಿಗೆ ರಾಜ್ಯ ಮಟ್ಟದ ಪ್ರಶಸ್ತಿಗಳು ಲಭಿಸಿವೆ. ಕೆಲವೊಂದು ಕೃತಿಗಳು ಅನೇಕ ಮುದ್ರಣಗಳು ಕಂಡಿವೆ. ಒಬ್ಬ ಲೇಖಕನಿಗೆ ತನ್ನ ಬರವಣಿಗೆಗಳು ಮರುಮುದ್ರಣಗೊಳ್ಳುವುದು, ತನ್ನ ಬರವಣಿಗೆಗೆ ಗೌರವ ಸಿಗುವುದು ತುಂಬಾ ಸಂತೋಷದಾಯಕವಾಗಿರುತ್ತದೆ. ನಿಮ್ಮ ಬರವಣಿಗೆಗೆ ಆ ರೀತಿಯ ಗೌರವ ಸಿಕ್ಕಾಗ ನಿಮಗೆನನ್ನಿಸುತ್ತದೆ. ಮತ್ತು ನಿಮ್ಮ ಬರವಣಿಗೆಯ ಆಶಯ ಏನು?**

ಹೌದು. ನಾನು ಜಾನಪದ ಸಂಶೋಧನೆ, ವಿಮರ್ಶೆ, ಪ್ರಬಂಧ, ಕಥೆ, ಕಾದಂಬರಿಗಳನ್ನು ಬರೆದಿದ್ದೇನೆ. ನಿಜವಾಗಿ ಹೇಳಬೇಕಾದರೆ ನಾನೊಬ್ಬ ಗಾಂಧಿಕ್ಲಾಸಿನಲ್ಲಿ ಪಾಸಾದವನು. ಬರವಣಿಗೆ ಮಾಡಬೇಕೆಂದು ಓದಿದವನಲ್ಲ. ಉನ್ನತ ಶಿಕ್ಷಣಕ್ಕಾಗಿ ವಿಶ್ವವಿದ್ಯಾಲಯದ ತಟ್ಟಿದಾಗ ಚೆನ್ನಣ್ಣನವರಂತಹವರಿಂದ ಪ್ರಭಾವಿತನಾಗಿ ಬರೆದ. ನಾಲ್ಕು ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳು ದೊರೆತಿವೆ. ಗೊರುಚ ಅವರ ಹೆಸರಿನ ಪ್ರಶಸ್ತಿ ನಾ. ಶ್ರೀ ರಾಜಪುರೋಹಿತ ಪ್ರಶಸ್ತಿಗಳು ಲಭಿಸಿದೆ. ಅವು ಬರೆಯಲು ಉತ್ತೇಜನ ನೀಡಿವೆ ಎನ್ನುವುದು ಸತ್ಯ. ಬರವಣಿಗೆಯಿಂದ ಸಮಾಜ ಬದಲಾಗುತ್ತದೆ ಎಂದು ಅಂದುಕೊಂಡರೂ ಅದುವೇ ಪೂರ್ಣ ಅಲ್ಲ. ಬರವಣಿಗೆಯಿಂದ ಅರಿವು ಬರಲು ಸಾಧ್ಯವಿದೆ.

**▶▶ನೀವು 'ಚಮ್ಮಾವುಗೆ', 'ಬೆತ್ತಲಾದ ಚಂದ್ರ', 'ಕರುಳರಿಯದ ಹೊತ್ತು', 'ಮಾದನ ಕರೆಂಟ್ ಕತಂತ್ರ', ಮತ್ತು 'ಅನೇಕಲವ್ಯ' ಕಥಾ ಸಂಕಲನಗಳನ್ನು ರಚಿಸಿದ್ದಿರಿ. ಕಥೆಗಳೊಂದಿಗೆ ನಿಮ್ಮ ಪಯಣ ಎಲ್ಲಿಂದ ಶುರುವಾಯಿತು? ಅಲ್ಲದೇ ನೀವು 'ರಮಾಬಾಯಿ', 'ಬಯಲೆಂಬೊ ಬಯಲು', 'ಮಹಾಬಿಂದು' ಕಾದಂಬರಿಗಳನ್ನು ರಚಿಸಿದ್ದಿರಿ. ಈ ನಿಮ್ಮ ಕಥೆ ಮತ್ತು ಕಾದಂಬರಿಗಳಿಗೆ ಸ್ಫೂರ್ತಿ ಏನು?**

ಇಲ್ಲಿಯವರೆಗೆ ನನ್ನ ಆರು ಕಥಾ ಸಂಕಲನಗಳು ಪ್ರಕಟಗೊಂಡಿವೆ. ಲೇಖನಗಳನ್ನು ಬರೆಯುತ್ತಿದ್ದ ನನಗೆ ನಿಮ್ಮ ಲೇಖನಗಳಲ್ಲಿ ಕಥಾ ಗುಣವಿದೆ ನೀವೇಕೆ ಕಥೆ ಬರೆಯಬಾರದು ಎಂದು ಗೆಳೆಯರು ಒತ್ತಾಯ ಮಾಡಿದರು. ಆಗ ನಾನು ಕಥೆ ಬರೆಯಲು ತೊಡಗಿದೆ. ಅಲ್ಲಿಂದ ಕಥಾ ಪಯಣ ಆರಂಭವಾಯಿತು. ನನ್ನ ಕಥೆ, ಕಾದಂಬರಿಗಳಿಗೆ ಸ್ಫೂರ್ತಿ ದಲಿತ ಬದುಕು ಮತ್ತು ಸಾಮಾಜಿಕ ಅಸಮಾನತೆಗಳು. ಅವೇ ನನ್ನನ್ನು ಬಡಿದೆಬ್ಬಿಸಿದವು. ಅದಕ್ಕೆ ಶಕ್ತಿಯಾಗಿ ನಿಂತವರು ಅಂಬೇಡ್ಕರ್.

**▶▶ನೀವು ಚಳವಳಿಯ ಹಿನ್ನಲೆಯಿಂದ ಬಂದಂತವರು. ಸಾಹಿತಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ ಚಳುವಳಿಯ ಮಹತ್ವ ಏನು?**

ನಾನು ದಲಿತ ಚಳುವಳಿಯಿಂದ ಬಂದವನು ಎನ್ನುವುದು ಸೂರ್ಯನಷ್ಟೇ ಸತ್ಯವಾದುದು. ದಲಿತರ ಆಶಯಗಳು ಈಗಲೂ ನನ್ನ ಮನದಲ್ಲಿ ತಾಕಲಾಟ ಮಾಡುತ್ತವೆ. ಪ್ರತಿಭಟಿಸಲು ಹಚ್ಚುತ್ತವೆ. ಅಸ್ಪೃಶ್ಯತೆ ನಿರ್ಮೂಲನೆಯಾಗಬೇಕು. ಸಮಾನತೆ ಬಾಯಿ ಮಾತಿನಲ್ಲಿ ಉಳಿದರೆ ಸಾಲದು, ಕೃತಿಯಲ್ಲಿ ಬರಬೇಕು. ದೇವರ ಕಣ್ಣಲ್ಲಿ ಎಲ್ಲರೂ ಸಮಾನರಾಗಿರದೆ, ಮನುಷ್ಯರ ಕಣ್ಣಲ್ಲಿ ಎಲ್ಲರೂ ಸಮಾನರಾಗಿರಬೇಕು ಎಂಬುದು ಅಂಬೇಡ್ಕರ್ ಅವರು ಹೇಳಿದ ಮಾತು, ಅದು ಸಕಾರವಾಗಬೇಕು. ಎಲ್ಲವನ್ನೂ ಹೋರಾಟ ಮಾಡಿ ಪಡೆಯಬೇಕಾದ ಸಾಮಾಜಿಕ ಒತ್ತಡದಲ್ಲಿ ನಾವಿದ್ದೇವೆ. ಚಳವಳಿಯ ಮೂಲಕ ನಾವು ಜಾಗೃತಿ ಮೂಡಿಸಲು ಸಾಧ್ಯ.

**▶▶ಸುಮಾರು ಮೂರು ದಶಕಗಳ ಕಾಲ ನೀವು ವಿಶ್ವವಿದ್ಯಾಲಯದಲ್ಲಿ ಕೆಲಸ ಮಾಡಿದ್ದೀರಿ. ಈ ಹಿನ್ನಲೆಯಲ್ಲಿ ಕೇಳುವುದಾದರೆ, ವಿಶ್ವವಿದ್ಯಾಲಯ ಮಟ್ಟದ ಶೈಕ್ಷಣಿಕ ವಲಯದಲ್ಲಿನ ಇಂದಿನ ಬಿಕ್ಕಟ್ಟುಗಳೇನು? ಶೈಕ್ಷಣಿಕ ಗುಣಮಟ್ಟದ ವೃದ್ಧಿಗೆ ನಿಮ್ಮ ಸಲಹೆಗಳೇನು?**

ವಿಶ್ವವಿದ್ಯಾಲಯಗಳಂತಹ ಸಂಸ್ಥೆಗಳು ಜ್ಞಾನ ಸೃಷ್ಟಿಯ ಕೇಂದ್ರಗಳು. ಮುಖ್ಯವಾಗಿ ಅವು ಜಾತಿ ಮಡಿವಂತಿಕೆಯಿಂದ ಹೊರ ಬರಬೇಕು. ಶಿಕ್ಷಕರು ಸಾಂಪ್ರದಾಯಿಕ ಶಿಕ್ಷಣಕ್ಕಿಂತ ವೈಚಾರಿಕ ಮತ್ತು ವೈಜ್ಞಾನಿಕ ಶಿಕ್ಷಣವನ್ನು ವಿದ್ಯಾರ್ಥಿಗಳಿಗೆ ಬೋಧಿಸಬೇಕು. ಅಲ್ಲದೇ ಸರಕಾರಗಳು ವಿಶ್ವವಿದ್ಯಾಲಯಗಳ ಗುಣಮಟ್ಟದ ವೃದ್ಧಿಗೆ ಬೆನ್ನೆಲುಬಾಗಿ ಪ್ರೋತ್ಸಾಹಿಸಬೇಕು. ಉತ್ತಮ ಕಟ್ಟಡ ನಿರ್ಮಾಣ, ಅಧ್ಯಾಪಕರ ನೇಮಕ ಮಾಡಿ ಉತ್ತಮ ಶೈಕ್ಷಣಿಕ ವಾತಾವರಣ ನಿರ್ಮಿಸಿ ಅವುಗಳನ್ನು ಪೋಷಿಸಬೇಕು. ಅಂದಾಗ ಮಾತ್ರ ಗ್ರಾಮೀಣರಲ್ಲಿ ಬದಲಾವಣೆ ಬರಲು ಸಾಧ್ಯವಾದೀತು.

**▶▶ನಿಮ್ಮ ಗಮನಕ್ಕೆ ಬಂದಂತೆ ಕನ್ನಡ ಸಾಹಿತ್ಯ ವಲಯದಲ್ಲಿನ ಇಂದಿನ ಬಿಕ್ಕಟ್ಟುಗಳೇನು?**

ಅಸ್ಪೃಶ್ಯತೆ ಇನ್ನೂ ಜೀವಂತವಾಗಿದೆ. ಬಲಪಂಥೀಯ/ ಎಡಪಂಥೀಯ ಎಂಬ ಭೇದ ಹೋಗಿ ಮನುಷ್ಯ ಕೇಂದ್ರಿತ ಸಾಹಿತ್ಯ ರಚನೆಯಾಗಬೇಕು. ಜಾತಿಮುಕ್ತ ಸಮಾಜ ನಿರ್ಮಾಣ ಮಾಡುವ ಕಡೆ ಲೇಖಕರು ಆಲೋಚಿಸಬೇಕು.

**(ವಿಜಯಪುರದಲ್ಲಿ 29, 30 ಜುಲೈ 2023 ರಂದು ನಡೆಯುತ್ತಿರುವ 10ನೇ ಅಖಿಲ ಭಾರತ ದಲಿತ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾದ ಪ್ರೊ. ಎಚ್.ಟಿ. ಪೋತೆ ಅವರ ಸಂದರ್ಶನ)**

# ಪ್ರೊ.ಎಚ್.ಟಿ. ಪೋತೆಯವರ ಪ್ರಶಸ್ತಿಗಳು: ಒಂದು ನೋಟ

ಬಯಲು ನಾಡಿನ ವಿಜಯಪುರ ಜಿಲ್ಲೆಯ ಇಂಡಿ ತಾಲೂಕಿನ ಹಂಜಗಿಯಲ್ಲಿ 01.06.1965 ರಂದು ಜನಿಸಿದ ಪ್ರೊ. ಎಚ್.ಟಿ. ಪೋತೆಯವರು, ನಾಡಿನ ಸಂವೇದನಾಶೀಲ ಕಥೆಗಾರ, ಕಾದಂಬರಿಕಾರ, ಕವಿ, ಪ್ರಬಂಧಕಾರ, ವಿಮರ್ಶಕ, ಅನುವಾದಕ, ಚಿಂತಕ, ವಿಚಾರವಾದಿ, ಜಾನಪದ, ವಿದ್ವಾಂಸ ಹಾಗೂ ಸಂಶೋಧಕರಾಗಿ ಕನ್ನಡ ಸಾಹಿತ್ಯ ಲೋಕದಲ್ಲಿ ಗುರುತಿಸಿಕೊಂಡವರು ಅದರಲ್ಲೂ ವರ್ತಮಾನದ ತಲ್ಲಣಗಳಿಗೆ ತಮ್ಮದೇ ಆದ ಶೈಲಿಯಲ್ಲಿ ಪ್ರತಿಕ್ರಿಯಿಸುವ ಮೂಲಕ ತಮ್ಮ ಸಾಮಾಜಿಕ ಜವಾಬ್ದಾರಿಯನ್ನು ಸಮರ್ಥವಾಗಿ ನಿರ್ವಹಿಸುತ್ತಿದ್ದಾರೆ. ಹಿಂದುಳಿದ ಪ್ರದೇಶದಿಂದ ಹಿಂದುಳಿದ ಸಮುದಾಯದಿಂದ ಬಂದ ಇವರು ಯಾವುದೆ ಕೀಳರಿಮೆಯಿಲ್ಲದೆ ಹಿಂದುಳಿದವರ ಏಳಿಗೆಗಾಗಿ ಸದಾ ಚಿಂತಿಸುತ್ತಾರೆ. ತಾವು ನಡೆದು ಬಂದ ಹಾದಿಯನ್ನು ಮರೆಯದೆ ಅದರಲ್ಲಿಯೇ ಅನೇಕ ಹೊಸ ಪಾಠಗಳನ್ನು ಕಲಿತು ಅವುಗಳನ್ನು ಸಮರ್ಥವಾಗಿಯೇ ಎದುರಿಸಿದ್ದಾರೆ. ಎಂತಹ ಸಂದಿಗ್ದತೆಗೂ ಎದೆಗುಂದದೆ ಎಲ್ಲಿ ಅನ್ಯಾಯವಾಗು ತ್ತದೆಯೊ. ಅಲ್ಲಿ ಧ್ವನಿಯತ್ತುತ್ತಾರೆ. ನಿರಾಕರಿಸಲ್ಪಟ್ಟ ಸಂಘಗಳನ್ನು ಸಮುದಾಯಗಳನ್ನು ಹೆಗಲಿಗೆ ಹಾಕಿಕೊಂಡೂ ಮುನ್ನುಗುತ್ತಾರೆ. ಅಷ್ಟೆ ಅಲ್ಲದೆ ಒಳ್ಳೆಯ ಸ್ನೇಹ ಜೀವಿಯಾಗಿದ್ದಾರೆ. ತನ್ನ ಬದುಕಿನಲ್ಲಿ ಸಹಾಯ ಮಾಡಿದ ಸಹಕರಿಸಿದ ಸ್ನೇಹಿತರನ್ನು ಎಂದು ಮರೆತಿಲ್ಲ ಆಗಾಗ ಅವರ ಸಮರಣೆ ಮಾಡುವ ಅವರು ಒಳ್ಳೆಯ ಸ್ನೇಹ ಜೀವಿಯಾಗಿದ್ದಾರೆ.

ಬುದ್ಧ, ಬಸವ, ಅಂಬೇಡ್ಕರ್, ಫುಲೆ, ಪೆರಿಯರ್ ಚಿಂತನೆಗಳನ್ನು ಮೈಗೂಡಿಸಿಕೊಂಡು ಗಂಭೀರ ವಾದ ಅಧ್ಯಯನಕ್ಕೆ ತೊಡಗಿಸಿಕೊಂಡು ಆ ನೆಲೆಯಲ್ಲಿಯೇ ತಮ್ಮ ಆಲೋಚನೆಗಳನ್ನು ರೂಪಿಸಿಕೊಂಡಿ ದ್ದಾರೆ. ಅದನ್ನು ತಮ್ಮ ಬರಹ, ಭಾಷಣಗಳ ಮೂಲಕ ಜನಸಮುಹಕ್ಕೆ ಮುಟ್ಟಿಸಲು ಶ್ರಮಿಸುತ್ತಿದ್ದಾರೆ. ತಾತ್ವಿಕವಾಗಿ ತಮ್ಮದೇ ಆದ ಭಿನ್ನ ಧಾರಿಯನ್ನು ಕಂಡುಕೊಂಡಿರುವ ಅವರು ಆ ನಿಟ್ಟಿನಲ್ಲಿ ಹಗಲಿರುಳು ದುಡಿಯುತ್ತಿದ್ದಾರೆ. ಅಧ್ಯಯನ ಮತ್ತು ಅಧ್ಯಾಪನ ಜೊತೆಗೆ ನಿರಂತರ ಚಿಂತನಶೀಲತೆಯನ್ನು ಅವರ ಆಲೋಚನೆಗಳಿಗೆ ಹೊಸ ಹೊಳಪನ್ನು ತಂದಿದ್ದಾರೆ.

ಪ್ರೊ. ಎಚ್.ಟಿ. ಪೋತೆಯವರು ಗುಲಬರ್ಗಾ ವಿಶ್ವವಿದ್ಯಾಲಯದಿಂದ ಎಂ.ಎ., ಎಂ.ಫಿಲ್., ಪಿಎಚ್.ಡಿ., ನೇಟ್ ಹಾಗೂ ಬೆಳಗಾವಿಯ ರಾಣಿಚನ್ನಮ್ಮ ವಿಶ್ವವಿದ್ಯಾಲಯದಿಂದ ಡಿ.ಲಿಟ್ ಪದವಿ ಪಡೆದಿದ್ದಾರೆ. ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆ, ಪ್ರಸಾರಾಂಗ ಹಾಗೂ ಪಾಲಿ ಮತ್ತು ಬೌದ್ಧ ಅಧ್ಯಯನ ಸಂಸ್ಥೆಯ ನಿರ್ದೇಶಕರಾಗಿದ್ದಾರೆ. ಕಲಾನಿಕಾಯದ ಡೀನರಾಗಿಯು, ಡಾ. ಬಿ.ಆರ್. ಅಂಬೇಡ್ಕರ್ ಅಧ್ಯಯನ ಹಾಗೂ ಸಂಶೋಧನ ಸಂಸ್ಥೆಯ ನಿರ್ದೇಶಕರಾಗಿ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡದ ಕುಲಸಚಿವರಾಗಿ (ಮೌಲ್ಯಮಾಪನ) ಕಾರ್ಯನಿರ್ವಹಿಸಿದ್ದಾರೆ. ಸೃಜನ ಶೀಲ, ವೈಚಾರಿಕ, ಜಾನಪದ, ಸಾಹಿತ್ಯ, ಸಂಶೋಧನೆ, ಸಂಘಟನೆ ಇವರ ಪ್ರವೃತ್ತಿಗಳು ಬುದ್ಧ, ಬಸವ, ಅಂಬೇಡ್ಕರ್, ಫುಲೆ, ಪೆರಿಯಾರ ಚಿಂತನೆಗಳನ್ನು ಮೈಗೂಡಿಸಿಕೊಂಡು ಗಂಭೀರವಾದ ಅಧ್ಯಯನಕ್ಕೆ ತೊಡಗಿದ್ದಾರೆ. ಆ ನೆಲೆಯ ಚಿಂತನೆ ಮತ್ತು ಅಧ್ಯಯನಗಳನ್ನು ತಮ್ಮ ಬರಹ, ಭಾಷಣಗಳ ಮೂಲಕ ಜನಸಮುಹಕ್ಕೆ





ಡಾ. ವಸಂತ ನಾಶಿ
ಕನ್ನಡ ಉಪನ್ಯಾಸಕರು
ಗುಲಬರ್ಗಾ ವಿಶ್ವವಿದ್ಯಾಲಯ
ಕಲಬುರಗಿ-595106
ಮೊ:95917 87064

ಮುಟ್ಟಿಸಲು ಶ್ರಮಿಸುತ್ತಿದ್ದಾರೆ.

ಪ್ರೊ. ಎಚ್.ಟಿ. ಪೋತೆಯವರು ದಲಿತರ, ಬಡವರ ಜೀವನವನ್ನು ಅನುಭವಿಸಿ ಬೇಳೆದವರು ಹಾಗಾಗಿ ಅವರ ಸಾಹಿತ್ಯದ ತೂಂಬೆಲ್ಲ ದಲಿತರು ಅನುಭವಿಸಿದ ಅವಮಾನಗಳೂ, ಅವರ ಹಸಿವು, ಹಿಂಸೆ, ಎಲ್ಲವು ಅಂತರಾಳವಾಗಿ ನೀರುಪಿಸಿದ್ದಾರೆ. ಒಟ್ಟಾರೆ ಅವರ ಸಾಹಿತ್ಯ ಶ್ರೀಮಂತರ, ಬಂಡವಾಳ ಶಾಹಿಗಳ, ವಿರುದ್ಧ ಬಡವರು ಎದ್ದು ನೀಲುವ ಘಳಿಗೆ ತುಂಬ ಬದಲಾವಣೆಯನ್ನು ತರುವಂತ ಸ್ಥಿತಿಗಳನ್ನು ಹೊಸರೂಪಕದ ಏಡಿಗೆ ಹೋಗುವಂತ ಹಾಗೂ ಹೊಸಬದಲಾವಣೆ ತರುವ ಸ್ಥಿತಿಯಲ್ಲಿ ಇವರ ಬರಹಗಳನ್ನು ಕಾಣುತ್ತೇವೆ.

ಇವರ ಕೃತಿಗಳನ್ನು ನಾವು ನೋಡುವದಾದರೆ, ಅವರ ಕೃತಿಗಳ ಪಟ್ಟಿ ಮಾಡಬಹುದಾಗಿದೆ. ಹೈದ್ರಾಬಾದ ಕರ್ನಾಟಕದ ಜನಪದ ಪ್ರದರ್ಶನ ಕಲೆಗಳು, ಜಾನಪದ ಸಿಂಗಾರ, ಜಾನಪದ ಆಯಾಮಗಳು ಸಮಾಜೋ, ಜಾನಪದ, ಜನಪದ ಕಲೆ ಸಂಸ್ಕೃತಿ, ಜನಪದ ಕಲೆ: ಸಮಸ್ಯೆ ಸವಾಲುಗಳು, ಹೈ.ಕ. ಜನಪದ ವಾದ್ಯಗಳು, ದಲಿತ ಜಾನಪದ, ಜಾನಪದ ಜ್ಞಾನ-ವಿಜ್ಞಾನ, ಕಲ್ಯಾಣ ಕರ್ನಾಟಕದ ಜಾನಪದ ವಿದ್ವಾಂಸರು, ಕರ್ನಾಟಕದ ದಲಿತ ಜಾನಪದ ವಿದ್ವಾಂಸರು, ಕನ್ನಡ ಜಾನಪದ ಶಾಸ್ತ್ರ ಇವು ಜಾನಪದ ಕೃತಿಗಳು, ಅಂಬೇಡ್ಕರ್: ದಲಿತ ಚಳುವಳಿ, ಬುದ್ಧನೆಡೆಗೆ, ದಲಿತಾಂತರಂಗ ಅವೈದಿಕ ಚಿಂತನೆ, ಜೀವಪರ ಚಿಂತನೆ, ಸಂಸ್ಕೃತಿ ಸಂಕ್ರಮಣ, ಶರಣ ಸಂಸ್ಕೃತಿ ಸಂವಾದ, ನೀರನೆಳಲು, ದಲಿತಲೋಕ, ಶರಣ ಸಂಸ್ಕೃತಿ ಮತ್ತು ಬಿ. ಶ್ಯಾಮಸುಂದರ, ಅಂಬೇಡ್ಕರ್ ಸಂವೇದನೆ, ರಾಮಸ್ವಾಮಿ ಪೆರಿಯಾರು, ಮಹಾತ್ಮ ಜ್ಯೋತಿಬಾಫುಲೆ, ಕುಮಾರ ಕಕ್ಕಯ್ಯ ಪೋಳ, ಅಂಬೇಡ್ಕರ್ ವಾಚಿಕೆ, ಅಂಬೇಡ್ಕರ್ ಸಂವೇದನೆ, ಅಂಬೇಡ್ಕರ್ ಕಥನ, ಅಂಬೇಡ್ಕರ್ ಭಾರತ, ಅಂಬೇಡ್ಕರ್: ಪುಸ್ತಕಪ್ರೀತಿ, ಭೂದೇವತೆಗಳ ಪ್ರಣಾಳಿಕೆಗಳು ಅಲ್ಲದೆ ಚಮ್ಮಾವುಗೆ, ಬೆತ್ತಲಾದ ಚಂದ್ರ, ಕರುಳರಿಯುವ ಹೊತ್ತು, ಮಾದನ ಕರೆಂಟ್ ಕತಂತ್ರ ಹಾಗೂ ಅನೇಕಲವ್ಯ (ಸಣ್ಣಕಥೆ) ಗಾಂಧಿಪ್ರತಿಮೆ (ಪ್ರಬಂಧ) ಬಯಲೆಂಬೊ ಬಯಲು (ಕಾದಂಬರಿ) ರಮಾಬಾಯಿ (ಅನುಬಾದಿತ ಕಾದಂಬರಿ) ಮೊದಲಾದ ವಿಚಾರ, ವಿಮರ್ಶೆ, ಸೃಜನ, ಅನುವಾದ ಕ್ಷೇತ್ರಕ್ಕೆ ಸಂಬಂಧಿಸಿದ ನೂರಕ್ಕೂ ಹೆಚ್ಚು ಕೃತಿಗಳು ಪ್ರಕಟಗೊಂಡಿವೆ. ಶರಣಸಾಹಿತ್ಯ ವಿಮರ್ಶಾ ಸಂಪುಟಗಳೂ ಕನ್ನಡ ದಲಿತ ಸಾಹಿತ್ಯ ಸಂಪುಟಗಳು, ಹೈದ್ರಾಬಾದ ಕರ್ನಾಟಕ ವಿಮೋಚನೆ ಹೋರಾಟಗಾರರ ಮಾಲೆ, ಕನ್ನಡ ಬೌದ್ಧ ಸಾಹಿತ್ಯ ಸಂಪುಟಗಳ ಪ್ರಧಾನ ಸಂಪಾದಕರಾಗಿ ಒಟ್ಟು 36ಕ್ಕೂ ಹೆಚ್ಚು ಸಂಪುಟಗಳನ್ನು ಪ್ರಕಟಿಸಿದ್ದಾರೆ.

# ಪ್ರಶಸ್ತಿ ಪುರಸ್ಕಾರ

1. ಹೈದ್ರಾಬಾದ್ ಕರ್ನಾಟಕದ ಜನಪದ ಪ್ರದರ್ಶನ ಕಲೆಗಳು ಸಂಶೋಧನಾ ಪ್ರಬಂಧದ ಮುದ್ರಣಕ್ಕೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಸರಕಾರದಿಂದ ರೂ. 25,000/– ಧನಸಹಾಯ (1999).

2.ಸಮಾಜೋ ಜಾನಪದ ಕೃತಿಗೆ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯಿಂದ ಸಂಶೋಧನೆ ವಿಮರ್ಶೆ ಕ್ಷೇತ್ರದಲ್ಲಿ 2006ರ ಸಾಲಿನ ರಾಜ್ಯ ಪ್ರಶಸ್ತಿ (2007)

3.ಸಂಸ್ಕೃತಿ ಸಂಕ್ರಮಣ ಕೃತಿಯ ಮುದ್ರಣಕ್ಕಾಗಿ ಭಾರತೀಯ ಭಾಷಾ ಸಂಸ್ಥಾನ, ಮೈಸೂರು ಸಿಐಐಎಲ್‌ದಿಂದ ರೂ.26,000/– ರೂಪಾಯಿಗಳ ಧನಸಹಾಯ (2008).

4. ಭಂಗ ಕಥೆಗೆ ಸಂಕ್ರಮಣ ಪತ್ರಿಕೆ ಕೊಡಮಾಡುವ 2009ರ ಸಾಲಿನ ಸಂಕ್ರಮಣ ಪ್ರಶಸ್ತಿ (2009).

5. ಭಂಗ ಕಥೆಗೆ ಜಯತೀರ್ಥ ರಾಜಪುರೋಹಿತ ರಾಜ್ಯಮಟ್ಟದ ಕಥಾಸ್ಪರ್ಧೆಯಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದ ಚಿನ್ನದ ಪದಕ (2009).

6.ಚಮ್ಮಾವುಗೆ ಕಥಾಸಂಕಲನಕ್ಕೆ ಕರ್ನಾಟಕ ದಲಿತ ಸಾಹಿತ್ಯ ಪರಿಷತ್ತಿನ ರಾಜ್ಯ ಪುಸ್ತಕ ಬಹುಮಾನ (2012).

7.ಅಂಬೇಡ್ಕರ್ ಭಾರತ ಕೃತಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು ಇವರಿಂದ ಕೊಡ ಮಾಡುವ 2017ರ ಪುಸ್ತಕ ಬಹುಮಾನ ಹಾಗೂ 25,000 ರೂಪಾಯಿ ನಗದು ಪುರಸ್ಕಾರ (2019)

8.]ಬಾಬಾಸಾಹೇಬರೆಡೆಗೆ ಖರ್ಗೆ ಜೀವನಕಥನ ಕೃತಿಗೆ ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು ಇವರಿಂದ ಕೊಡಮಾಡುವ ಪುಸ್ತಕ ಸೊಗಸು ಬಹುಮಾನ (2019).

9.ಜಾನಪದ ಜ್ಞಾನ–ವಿಜ್ಞಾನ ಕೃತಿಗೆ ಕರ್ನಾಟಕ ಜಾನಪದ ಅಕಾಡೆಮಿ, ಬೆಂಗಳೂರು ಇವರಿಂದ 2019ನೇ ಸಾಲಿನ ಪುಸ್ತಕ ಬಹುಮಾನ (2019).

10.ದಲಿತಲೋಕ ಕೃತಿಗೆ ಎಲ್. ಬಸವರಾಜು ಅವರ ಅಮೃತ ಸಮ್ಮೇಳನದ ಸವಿನೆನಪಿನ ದತ್ತಿ ಪ್ರಶಸ್ತಿ ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು (2019).

11.ಜಾನಪದ ಕ್ಷೇತ್ರದ ಸಾಧನೆಗಾಗಿ ಅಖಿಲ ಭಾರತ ಶರಣಸಾಹಿತ್ಯ ಪರಿಷತ್ತಿನ ಗೊರುಚ ಜಾನಪದ ಪ್ರಶಸ್ತಿ. (2020).

12. 'ಡಾ. ಬಿ.ಆರ್. ಅಂಬೇಡ್ಕರ್ ಪುಸ್ತಕಪ್ರೀತಿ' (2019) ಕೃತಿಗೆ ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ಇವರು ಕೊಡಮಾಡುವ ಎಲ್. ಬಸವರಾಜು ಸವಿನೆನಪಿನ "ಅಮೃತ ಮಹೋತ್ಸವ ಸಾಹಿತ್ಯ ಸಮ್ಮೇಳನದ ದತ್ತಿ ಪ್ರಶಸ್ತಿ (2020).

13. 'ಬಯಲೆಂಬೊ ಬಯಲು' ಬಯೋಪಿಕ್ ಕಾದಂಬರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು ಇವರಿಂದ ಕೊಡಮಾಡುವ 2020ರ ಪುಸ್ತಕ ಬಹುಮಾನ ಪುರಸ್ಕಾರ (2020).

14.ಬಯಲೆಂಬೊ ಬಯಲು ಬಯೋಪಿಕ್ ಕಾದಂಬರಿಗೆ, ಕನ್ನಡ ಪುಸ್ತಕ ಪರಿಷತ್ತು ಹಾಗೂ ಡಾ. ಸಿದ್ದಣ್ಣ ಉತ್ನಾಳ ಪ್ರತಿಷ್ಠಾನದ ವತಿಯಿಂದ ಡಾ. ಸಿದ್ದಣ್ಣ ಉತ್ನಾಳ ಪ್ರಶಸ್ತಿ (2020).

15.ದಲಿತ ಅಸ್ಮಿತೆ (ವಿಚಾರ ವಿಮರ್ಶೆ) ಕೃತಿಗೆ ನಾಡೋಜ ಬರಗೂರು ಪ್ರತಿಷ್ಠಾನ, ಬೆಂಗಳೂರು ವತಿಯಿಂದ ರಾಜಲಕ್ಷ್ಮಿ ಬರಗೂರು ಪ್ರಶಸ್ತಿ (2021).

ವಿಶ್ವವಿದ್ಯಾಲಯ, ಸರಕಾರ ಹಾಗೂ ವಿವಿಧ ಸಂಘ–ಸಂಸ್ಥೆ ಪ್ರಶಸ್ತಿಗಳು–30

13.ಎಂ.ಫಿಲ್. ಪದವಿಯನ್ನು ಕನ್ನಡ ಮಾಧ್ಯಮದಲ್ಲಿ ಪ್ರಥಮ ದರ್ಜೆಯಲ್ಲಿ ಪಾಸಾದುದ್ದಕ್ಕೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಸರ್ಕಾರದಿಂದ, ರೂ. 1,500/– ಪ್ರೋತ್ಸಾಹಧನ (1990).

17.ಕೋಮು ಸೌಹಾರ್ದತೆ ಕೃತಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಸರಕಾರದಿಂದ ರೂ. 5,000/– ಪ್ರೋತ್ಸಾಹ ಧನ (2001).

18.ಬುದ್ಧನೆಡೆಗೆ ಕೃತಿಗೆ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕರ್ನಾಟಕ ಸರಕಾರದಿಂದ, ರೂ. 5,000/– ಪ್ರೋತ್ಸಾಹ ಧನ (2002).

19.ಫುಲೆ ಶಾಹೂ ಅಂಬೇಡ್ಕರ್ ಕೃತಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಸರಕಾರದಿಂದ ರೂ. 5,000/– ಪ್ರೋತ್ಸಾಹ ಧನ (2003).

20.ದಲಿತಾಂತರಂಗ ಕೃತಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಸರಕಾರದಿಂದ ರೂ. 5,000/– ಪ್ರೋತ್ಸಾಹ ಧನ (2004).

21.ದಲಿತಾಂತರಂಗ ಕೃತಿಗೆ ಬೆಂಗಳೂರಿನ ಪತ್ರಕರ್ತರ ವೇದಿಕೆ ಹಾಗೂ ರುಕ್ಕಿಣಿಬಾಯಿ ಸ್ಮಾರಕ ಟ್ರಸ್ಟ್ ಜಂಟಿಯಾಗಿ ಕೊಡಮಾಡುವ ರುಕ್ಕಿಣಿಬಾಯಿ ಸ್ಮಾರಕ ದತ್ತಿ ಪ್ರಶಸ್ತಿ (2004),

22.ದಲಿತಾಂತರಂಗ ಕೃತಿಗೆ ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ರಾಜ್ಯೋತ್ಸವ ಪ್ರಶಸ್ತಿ (2005).

23.ಅವೈದಿಕ ಚಿಂತನೆ ಕೃತಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಸರಕಾರದಿಂದ ರೂ. 5,000/– ಪ್ರೋತ್ಸಾಹ ಧನ (2006).

24.ಸಮಾಜೋ ಜಾನಪದ ಕೃತಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಸರಕಾರದಿಂದ ರೂ. 5,000/– ಪ್ರೋತ್ಸಾಹ ಧನ (2008).

25.ಅಂಬೇಡ್ಕರ್ ಸಂವೇದನೆ ಕೃತಿಯನ್ನು 2007ನೇ ಸಾಲಿನ ಅತ್ಯುತ್ತಮ ಕೃತಿಯೆಂದು ಪರಿಗಣಿಸಿ, ಬೆಂಗಳೂರಿನ ಸ್ನೇಹ– ಸೇತು ಸಾಮಾಜಿಕ ಸಾಂಸ್ಕೃತಿಕ ಸಂಸ್ಥೆಯವರು ಸ್ನೇಹ–ಸೇತು ಪ್ರಶಸ್ತಿ ನೀಡಿ ಗೌರವಿಸಿದ್ದಾರೆ (2008).

26. ನೀರನೆಳಲು ಕೃತಿಗೆ ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ರಾಜ್ಯೋತ್ಸವ ಪುಸ್ತಕ ಪ್ರಶಸ್ತಿ (2010).

27.ಸಾಹಿತ್ಯ ಕ್ಷೇತ್ರದಲ್ಲಿ ಮಾಡಿರುವ ಸೇವೆಯನ್ನು ಗಮನಿಸಿ, ಗೋರಖನಾಥ ತಪೋವನ, ಬೆಂಗಳೂರು ಇವರು ಗೋರಖನಾಥ ಪುರಸ್ಕಾರವನ್ನು ನೀಡಿ ಗೌರವಿಸಿದ್ದಾರೆ (2011).

28,ಚಮ್ಮಾವುಗೆ ಕಥಾಸಂಕಲನ ಕೃತಿಗೆ ಪುಟ್ಟರಾಜ ಗವಾಯಿಗಳ ಸ್ಮರಣಾರ್ಥ ಪುಸ್ತಕಬಹುಮಾನ (2012).

29.ಚಮ್ಮಾವುಗೆ ಕಥಾಸಂಕಲನಕ್ಕೆ ಸಿರಿಗನ್ನಡ ಪ್ರತಿಷ್ಠಾನ ಕೇಂದ್ರ ಸಂಘ (ರಿ), ಗುರುಮಠಕಲ್, ತಾ.ಜಿ. ಯಾದಗಿರಿ ಇವರಿಂದ ಅಕ್ಷರ ಲೋಕದ ನಕ್ಷತ್ರ ಪ್ರಶಸ್ತಿ (2014–15).

30.ಅಮ್ಮ–ಗೌರವಪುರಸ್ಕಾರ, ಸೇಡಂ ತಾ. ಮಹಾದೇವಮ್ಮ ನಾಗಪ್ಪ ಮುನ್ನೂರ್ ಪ್ರತಿಷ್ಠಾನದಿಂದ (2016),

31.ಬಸವಶ್ರೀ, ಕನ್ನಡ ಸಾಹಿತ್ಯ ಪರಿಷತ್ತು, ಸಿಂದಗಿ ಇವರು ಪ್ರಶಸ್ತಿ ನೀಡಿ ಗೌರವಿಸಿದ್ದಾರೆ (2017).

32.ಡಾ. ಬಿ.ಆರ್. ಅಂಬೇಡ್ಕರ್ ಪ್ರಶಸ್ತಿ : ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ, ಪ.ಜಾ/ಪ.ಪಂ. ನೌಕರರ ಸಂಘ, ಸಂಸ್ಥೆಗಳು, ಬೆಂ.ಮ.ಸಾ. ಸಂಸ್ಥೆ, ವಾ.ಕ.ರ.ಸಾ.ನಿ ಮತ್ತು ಈ.ಕ.ರ.ಸಾ.ನಿ ಸಹಯೋಗದೊಂದಿಗೆ ಡಾ. ಬಿ.ಆರ್. ಅಂಬೇಡ್ಕರ್ ಅವರ 126ನೇ ಜಯಂತ್ಯುತ್ಸವ ಸಮಿತಿಯವರು ಪ್ರಶಸ್ತಿ ನೀಡಿ ಗೌರವಿಸಿದ್ದಾರೆ (2017).

33.ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ಇವರು ಹಮ್ಮಿಕೊಂಡ ರಾಜ್ಯಮಟ್ಟದ ಪ್ರಥಮ ದಲಿತ ಸಾಹಿತ್ಯ ಸಮ್ಮೇಳನದಲ್ಲಿ ಸಾಹಿತ್ಯ ಸಾಧನೆಗಾಗಿ ಗೌರವಿಸಿ ಸನ್ಮಾಸಿದ್ದಾರೆ (2019).

34. ಸಾಹಿತ್ಯ ಸಾರಥಿ ಪ್ರಶಸ್ತಿ, ಕಲಬುರಗಿ ಸಾಹಿತ್ಯ ಸಾರಥಿ ಪತ್ರಿಕೆಯ ಎರಡನೆಯ ವರ್ಷದ ಸಂಭ್ರಮ ಕಾರ್ಯಕ್ರಮದ ಅಂಗವಾಗಿ ಪ್ರಶಸ್ತಿ ನೀಡಿ ಗೌರವಿಸಿದ್ದಾರೆ (2019).

35.ಶ್ರೀ ಸುಭಾಷ್ಚಂದ್ರ ಪಾಟೀಲ ಸ್ಮಾರಕ ಜನಕಲ್ಯಾಣ ಟ್ರಸ್ಟ್, ಪಾಳಾ, ಜಿಲ್ಲಾ ಕಲಬುರಗಿ ಇವರು ಕೊಡಮಾಡುವ 2020ನೇ ಸಾಲಿನ ರಾಷ್ಟ್ರೀಯ





ಬಸವ ಪುರಸ್ಕಾರ ಪ್ರಶಸ್ತಿ (2020).
36. ಮಾದನ ಕರೆಂಟ್ ಕತಂತ್ರ ಕಥಾ ಸಂಕಲನಕ್ಕೆ ತಾಲ್ಲೂಕಾ ಕನ್ನಡ ಸಾಹಿತ್ಯ ಪರಿಷತ್ತು, ಆಲಮೇಲ, ಜಿಲ್ಲಾ ವಿಜಯಪುರ ಅವರ ಕಡಣಿ ಸಾಹಿತ್ಯ ಸಮ್ಮೇಳನ ದತ್ತಿ ಪ್ರಶಸ್ತಿ (2020).
37.ಬಯಲೆಂಬೊ ಬಯಲು ಬಯೋಪಿಕ್ ಕಾದಂಬರಿಗೆ 2020ರ ಸಾಲಿನ ಲಿ. ಶ್ರೀಶರಣಬಸಪ್ಪ ಹೊನ್ಕಲ್ ಇವರ ಸ್ಮರಣಾರ್ಥ ದತ್ತಿ ಪ್ರಶಸ್ತಿ (2020).
38.ಮಾದನ ಕರೆಂಟ್ ಕತಂತ್ರ ಕಥಾ ಸಂಕಲನಕ್ಕೆ ಕನ್ನಡ ನಾಡು ಲೇಖಕರ ಮತ್ತು ಓದುಗರ ಸಹಕಾರ ಸಂಘದಿಂದ ಶ್ರೀಮತಿ ಶರಣಮ್ಮ ವೀರಭದ್ರಪ್ಪ ಅಕ್ಕೋಣಿ ಸ್ಮಾರಕ ಪ್ರಶಸ್ತಿ (2021)
39.ದೃಶ್ಯಬೆಳಕು ಸಾಂಸ್ಕೃತಿಕ ಸಂಸ್ಥೆ, ಕಲಬುರಗಿ ಹಾಗೂ ಕರ್ನಾಟಕ ಬೀದಿ ನಾಟಕ ಅಕಾಡೆಮಿ, ಬೆಂಗಳೂರು ಇವುಗಳ ಸಹಯೋಗದಲ್ಲಿ ಸಿಜಿಕೆ ರಂಗ ಪುರಸ್ಕಾರ (2021).
40.ಪ್ರಕಾಶನ ಕೇಂದ್ರ, ಕಲಬುರಗಿ ದಲಿತ-ಬಂಡಾಯ ಸಾಹಿತಿ, ಹೋರಾಟಗಾರ, ಸಮಾಜ ಚಿಂತಕ ಡಾ. ಚೆನ್ನಣ್ಣ ವಾಲೀಕಾರ ಜನ್ಮದಿನೋತ್ಸವದ ಅಂಗವಾಗಿ ನೀಡುವ ಮೈಮೊವೋಮ ಪ್ರಶಸ್ತಿ ಸ್ವೀಕರಿಸಿದಾರೆ (2021).
41.ಕನ್ನಡ ಜನಪದ ಶಾಸ್ತ್ರ ಕೃತಿಗೆ, ಜಾನಪದ ವಿದ್ವಾಂಸ ಲಿ, ಪ್ರೊ. ಸೂಗಯ್ಯ ಹಿರೇಮಠ ಸ್ಮರಣಾರ್ಥ ಸಗರನಾಡಿನ ಸೌರಭ ಪ್ರಶಸ್ತಿ, 5,000 ನಗದು ಬಹುಮಾನ (2021).
42.ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಮೈಸೂರು ನೀಡುವ ಗೊರುಚ ದತ್ತಿ ನಿಧಿ 2020ರ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಗೊರುಚ ಜಾನಪದ ಪ್ರಶಸ್ತಿಯನ್ನು ಸ್ವೀಕರಿಸಿದ್ದೇನೆ (2021).
43ಅನೇಕಲವ್ಯ ಕೃತಿಗೆ ಬಳ್ಳಾರಿಯ ಕಾರಂತರ ರಂಗಲೋಕ ಸಂಸ್ಥೆಯ ಸಾಹಿತ್ಯ ರತ್ನ ಪ್ರಶಸ್ತಿ (2022).
44.ಮಹಾಬಿಂದು ಕಾದಂಬರಿಗೆ ಕಲಬುರಗಿಯ ಅವ್ವ ಪ್ರತಿಷ್ಠಾನದಿಂದ ಪುಸ್ತಕ ಬಹುಮಾನ (2022).
45.ಮೇಘಮೈತ್ರಿ ಕನ್ನಡ ಸಾಹಿತ್ಯ ಸಂಘ, ಕಮತಗಿ-ಬಾಗಲಕೋಟೆ ಜಿಲ್ಲೆಯ ಮೇಘಮೈತ್ರಿ 5ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಮೇಘಮೈತ್ರಿ ಪುರಸ್ಕಾರ ನೀಡಿ ಗೌರವಿಸಸಿದೆ (2022).

ಸಮ್ಮೇಳನ ಸರ್ವಾಧ್ಯಕ್ಷ
ಗೌರವ-3

1.ವಿಜಯಪುರ ಜಿಲ್ಲೆಯ ಸಿಂದಗಿಯಲ್ಲಿ ಎರಡು ದಿನಗಳ ಕಾಲ ನಡೆದ ಜಿಲ್ಲಾ ಪ್ರಥಮ ದಲಿತ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷ ಗೌರವ ಪ್ರಾಪ್ತವಾಗಿದೆ (2011).
2.ವಿಜಯಪುರ ಜಿಲ್ಲೆಯ ಇಂಡಿ ತಾಲ್ಲೂಕಿನ ಲಚ್ಯಾಣದಲ್ಲಿ ನಡೆದ ತಾಲೂಕಾ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷ ಗೌರವ ಪ್ರಾಪ್ತವಾಗಿದೆ (2013).
3.ಬೀದರ ಜಿಲ್ಲೆಯ ಬಸವಕಲ್ಯಾಣದ ಉರಿಲಿಂಗಪೆದ್ದಿ ಮಠ, ಬೇಲೂರು ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ಇವುಗಳ ಸಂಯುಕ್ತಾಶ್ರಯದಲ್ಲಿ ಎರಡು ದಿನಗಳ ಕಾಲ ಜರುಗಿದ ಸಂವಿಧಾನ ರಕ್ಷಣಾ ಪ್ರಥಮ ಸಮ್ಮೇಳನದ ಸರ್ವಾಧ್ಯಕ್ಷಸ್ಥಾನ ಪ್ರಾಪ್ತವಾಗಿದೆ (2019).
ಹೀಗೆ ಇನ್ನು ಮುಂತಾದ ಅವರ ಕೃತಿಗಳಿಗೆ ಪ್ರಶಸ್ತಿಯು ಅವರ ಮುಡಿಗೇರಿದೆ, ಇನ್ನು ಉನ್ನತ ಪ್ರಶಸ್ತಿ ಪುರಸ್ಕಾರಗಳು ಅವರಿಗೆ ದೊರೆಯಲ್ಲಿ, ಹಾಗೂ ಅಖಿಲ ಭಾರತದ ದಲಿತ ಸಮ್ಮೇಳನದ ಅಧ್ಯಾಕ್ಷರಾಗಿ ಆಯ್ಕೆ ಆದ ವಿಷಯ ತುಂಬ ಸಂತೋಷದ ವಿಷಯವಾಗಿದ್ದು ನಾಡಿನ ಪ್ರತಿಷ್ಠಿತ ದಲಿತ ಸಾಹಿತಿಗಳಲ್ಲಿ ಪ್ರೊ. ಎಚ್.ಟಿ. ಪೋತೆ ಅವರ ಹೆಸರು ಇಂದು ಮುಂಚುಣಿಯಲ್ಲಿ ಕೇಳಿಬರುತೀರುವ ಹೆಸರಾಗಿದ್ದು. ಇವರು ಇನ್ನು ಕೆಲವು ಸಾಹಿತ್ಯಗಳನ್ನು ಬರೆಯಬೇಕಾಗಿದೆ. ಪ್ರೊ. ಪೋತೆ ಸರ್ ಅವರ ಸಾಹಿಯ ಕೇವಲ ಕೆಲವೆ ಕ್ಷೇತ್ರಕೆ ಮೀಸಲು ಇಡದೆ ಕಾವ್ಯ, ಗಜಲ್, ಆತ್ಮ ಚರಿತ್ರೆ ಹೀಗೆ ಅವರ ಸಾಹಿತ್ಯ ಕ್ಷೇತ್ರ ವಿಸ್ತಾರ ಆದಷ್ಟು ಯುವ ಬರಹಗಾರರೀಗೆ ಒಂದು ಪ್ರೇರಣೆ ಸಿಗುತ್ತದೇ ಕೆವಲ ದಲಿತ ಕ್ಷೇತ್ರವು ಅಲ್ಲದೆ ಸಂಶೋಧನೆ, ಮಕ್ಕಳ ಸಾಹಿತ್ಯ, ಕ್ಷೇತ್ರಗಳಿಗೆ ಅವರ ಸಾಹಿತ್ಯ ಬರಬೇಕು. ಇವರ ಸೇವೆ ಸಾಹಿತ್ಯ ಕ್ಷೇತ್ರಕ್ಕೆ, ಹಾಗೂ ಪ್ರಾಧ್ಯಾಪಕ ಸೇವೆಗೆ ಮಿಸಲು ಇರದೆ ಇವರ ಸೇವೆ ಮುಂದುವರಿಯಲ್ಲಿ ವಿಶ್ವವಿದ್ಯಾಲಯದ ಕುಲಾದಿಪತಿಯಾಗಿ ಸೇವೆ ಸಲ್ಲಿಸಬೇಕು ಎಂದು ಆಶಿಸುತ್ತೇನೆ.



# ಭಾವನಾತ್ಮಕ ಚಿಂತಕ ಪ್ರೊ.ಪೋತೆ



ಪ್ರತಿಯೊಬ್ಬರ ಆನಂದವೂ ಅವರಲ್ಲಿಯೇ ಹುಟ್ಟಬೇಕು. ಅದು ಅವರ ಅನನ್ಯತೆಯನ್ನು ಸಮರ್ಥಿ ಸುತ್ತದೆ. ಹೊರಗಿನಿಂದ ಬಂದು ಸಂತುಷ್ಟರನ್ನಾಗಿಸುವುದು ಯಾವುದೇ ಆದರೂ ಅದು ಬಾನಿಸತ್ವವನ್ನು ಉಂಟುಮಾಡುತ್ತದೆ, ಅಂತಹ ಸಂತುಷ್ಟವು ಸ್ವೇಚ್ಛೆಯನ್ನು ನಾಶಮಾಡುತ್ತದೆ. ಈ ಮಾತನ್ನು ಇಲ್ಲಿ ಹೇಳಲಿಕ್ಕೆ ಕಾರಣವಿಷ್ಟೆ, ಯಾವಾಗ ಮನುಷ್ಯನಿಗೆ ತನ್ನತನವೆನ್ನುವುದು ಇಲ್ಲವಾಗುತ್ತದೆಯೋ ಆಗ ಆತ ತಾನಂದು ಕೊಂಡಂತೆ ಬದುಕುಲು ಸಾಧ್ಯವಾಗುವುದಿಲ್ಲ. ತನ್ನ ಅಸ್ಮಿತೆಯನ್ನು ಕಾಪಾಡಿಕೊಳ್ಳಲೂ ಆಗುವುದಿಲ್ಲ. ಹಾಗಾಗಿ ಪ್ರತಿಯೊಬ್ಬರಿಗೂ ಅವರದೇ ಆದ ಬದುಕಿರುತ್ತದೆ. ಆ ಬದುಕು ತನ್ನದೇ ಆದ ತಾತ್ತ್ವಿಕತೆಯನ್ನು ರೂಪಿಸಿ ಕೊಂಡಿರುತ್ತದೆ. ಅದಕ್ಕನುಗುಣವಾಗಿಯೇ ಅವರು ಬದುಕನ್ನು ಮುಂದು ಸಾಗಿಸಬೇಕು. ಇಂತಹ ತಾತ್ತ್ವಿಕ ಲಕ್ಷಣವುಳ್ಳವರು ಪ್ರೊ.ಎಚ್.ಟಿ. ಪೋತೆಯವರು.

ಇಲ್ಲಿ ಪೋತೆಯವರನ್ನು ಭಾವನಾತ್ಮಕ ಚಿಂತಕ ಎಂದು ಕರೆಯಲಿಕ್ಕೆ ಕಾರಣ ಅವರ ಭಾವುಕ ಮನಸ್ಸು. ಅದಕ್ಕೆ ಪೂರಕವಾಗಿ ಅವರಲ್ಲಿ ಕಾಣಿಸಿಕೊಳ್ಳುವ ಒಲವು. ಒಲವೂ ಸಹ ಮನಸ್ಸಿನ ಪರಿಕರ. ಅವರ ಒಲವು ಒರತೆಯಂತಹದ್ದು. ಯಾರು ಭಾವುಕ ಮನಸ್ಸುಳ್ಳವರಾಗಿತ್ತಾರೋ ಸಹಜವಾಗಿಯೇ ಅವರ ಸಾಮಾಜಿಕ ಸಂಯೋಗವು ಅನ್ಯೋನ್ಯವಾಗಿರುತ್ತದೆ. ಆ ಅನ್ಯೋನ್ಯತೆಯು ಸಮಾಜವನ್ನು, ಸಮಾಜದ ಹಲವು ಬದುಕುಗಳನ್ನು, ಬದುಕಿನ ಹಲವು ಆಯಾಮಗಳನ್ನು ಸೂಕ್ಷ್ಮವಾಗಿ ಗುರುತಿಸಲಿಕ್ಕೆ ಸಹಾಯಕ ವಾಗುತ್ತದೆ.



ಮಲ್ಲೇಶಪ್ಪ ಸಿದ್ರಾಂಪೂರ
ದ್ರಾವಿಡ ವಿಶ್ವವಿದ್ಯಾಲಯ, ಕುಪ್ಪಂ
ಮೊ:9491414813


ಭಾವುಕ ಮನಸ್ಸಿನ ಸಾಮಾಜಿಕ ಸಮ್ಮಿಲನದಲ್ಲಿ ಸಾಮಾನ್ಯ ಮನಸ್ಸಿಗೆ ಗೋಚರಿಸುವ ಸಮಾಜಗಳಿಗಿಂತಲೂ ಹಲವು ಸಮಾಜಗಳ ದರ್ಶನವಾಗುತ್ತದೆ. ಭಾವುಕ ಮನಸ್ಸು ಇರುವಿನ ಸ್ಥಿತಿಯನ್ನು ಸೂಕ್ಷ್ಮವಾಗಿ ಗ್ರಹಿಸುತ್ತದೆ. ಅಂತಹ ಮನಸ್ಸು ಮಾತ್ರ ಯಾವುದರ ಗೊಡವೆಯೂ ಇಲ್ಲದೆ, ಭಯವೂ ಇಲ್ಲದೆ ಎಲ್ಲವನ್ನೂ ಸಮಾನವಾಗಿ ಪ್ರೀತಿಸುತ್ತದೆ. ಅಲ್ಲಿ ಜಾತಿ, ಮತ, ಧರ್ಮ, ಪಂಥ, ಲಿಂಗ, ವರ್ಣ, ವರ್ಗ, ನಮ್ಮವ-ತಮ್ಮವ, ಒಳಗಿನವರು-ಹೊರಗಿನವರು, ಎಡ-ಬಲ.... ಇಂತಹ ಯಾವುದೇ ತರತಮದ ಪರಿವೆಯಿರುವುದಿಲ್ಲ. ಏಕ, ಅನೇಕ, ಪ್ರತ್ಯೇಕ, ವೈಯುಕ್ತಿಕವೆನ್ನದೆ ಸಮಾಜದ ಹಲವುಗಳೊಂದಿಗೆ ವಿಲೀನ ಗೊಳ್ಳುವುದೇ ಅದಕ್ಕೆ ಮುಖ್ಯವೇ ಹೊರತು ವಿಮುಖಗೊಳ್ಳುವುದಲ್ಲ. ಈ ಬಗೆಯ ಗುಣ ಪೋತೆಯವರ ಲ್ಲಿದೆ. ಅದಕ್ಕೆ ಅವರು ಪ್ರೀತಿಸುವ ಬುದ್ಧನ ಕಾರುಣ್ಯ, ಬಸವಣ್ಣನ ಜೀವಪ್ರೇಮ, ಅಂಬೇಡ್ಕರ್ ಅವರ ಸಮಾನ ದೃಷ್ಟಿಕೋನಗಳೇ ಕಾರಣವಾಗಿವೆ. ಇಂತಹ ಭಾವುಕ ಮನಸ್ಥಿತಿಯಿಂದಾಗಿಯೇ ಪೋತೆಯವರು ಸುತ್ತಣದ ಬದುಕಿನೊಂದಿಗೆ ಕ್ರಿಯಾತ್ಮಕವಾದ ಸಂಬಂಧವನ್ನು ಇಟ್ಟುಕೊಳ್ಳುವುದಕ್ಕೆ ಕಾರಣವಾಗಿದೆ. ಆ ಸಂಬಂಧವೇ ಅವರ ತಾತ್ತ್ವಿಕ ಸೂಕ್ಷ್ಮತೆಗೆ ಕಾರಣವೂ ಆಗಿದೆ.

ಪೋತೆಯವರ ಬದುಕು ಬಹುತ್ವದಿಂದ ಕೂಡಿದುದು. ಅಲ್ಲಿ ಆರ್ಥಿಕ ಬಡತನವುಂಟು, ಸಾಮಾಜಿಕ ಅವಮಾನವುಂಟು, ಸಾಂಸ್ಕೃತಿಕ ಸಂಘರ್ಷವುಂಟು, ಭಾವನಾತ್ಮಕ ಯಾತನೆಯುಂಟು. ಇಂತಹ ಬಹುತ್ವದ ಬದುಕೇ ಅವರನ್ನು ಬಹುತ್ವ ನೆಲೆಯ ಬರಹಗಾರರನ್ನಾಗಿಸಿದೆ, ಬಹುತ್ವದ ಚಿಂತಕರ ನ್ನಾಗಿಸಿದೆಯೆನ್ನುವುದು ನನ್ನ ಅಭಿಪ್ರಾಯ. ಹಾಗೆಯೇ ಸುತ್ತಣದ ಬದುಕನ್ನು ಕಂಕುಳಲ್ಲೇ ಇಟ್ಟುಕೊಂಡು ಸಾಗುವ ಅವರ ಸ್ವಭಾವವು ಸಹಜವಾಗಿಯೇ ಭಾವನಾತ್ಮಕತೆಯಿಂದ ಕೂಡಿದೆ. ಈ ಸ್ವಭಾವ ಅವರಲ್ಲಿ ರೂಪುಗೊಳ್ಳಲಿಕ್ಕೆ ಕಾರಣ ಅವರ ಬೆಳೆದು ಬಂದ ಬಾಲ್ಯದ ಪರಿಸರವೂ ಒಂದು. ಮಡಿವಂತ ಗ್ರಾಮೀಣ ಪ್ರದೇಶದಿಂದ ಬಂದ ಅವರಲ್ಲಿ ಭಾವನಾತ್ಮಕ ಸೂಕ್ಷ್ಮತೆ ರೂಪುಗೊಳ್ಳಲು ಕಾರಣರಾದವರು ಅವರ ತಾತ ಮತ್ತು ತಂದೆಯರು. ಅವರು ರೂಪಿಸಿಕೊಂಡಿದ್ದ ಬದುಕಿನ ನೈತಿಕತೆಯು ಇವರ ಮೇಲೆ ಗಾಢವಾದ ಪ್ರಭಾವವನ್ನು ಬೀರಿದೆ. ಇದನ್ನು ಪೋತೆಯವರು ಸ್ವತಃ ಅನೇಕ ಕಡೆ ಹೇಳಿಕೊಂಡಿದ್ದನ್ನು ಕೇಳಿದ್ದೇವೆ. ಊರೊಳಗಿನ ಮಡಿವಂತಿಕೆಗೆ ಬೇಸತ್ತು, ಊರಾಚೆಗೆ ಅಂದರೆ ಹೊಲದಲ್ಲಿ ಬಂದು ತಮ್ಮ ಬದುಕನ್ನು ಕಟ್ಟಿಕೊಂಡ ಅವರ ತಾತ ಮತ್ತು ತಂದೆಯರು ಹೊರಗಿದ್ದರೂ ಊರಿನೊಂದಿಗೆ ಒಂದು ಬಗೆಯ ಭಾವನಾತ್ಮಕ ಸಂಬಂಧ ವನ್ನು ಬೆಸೆದುಕೊಂಡವರು. ಅದು ಜೀವಪರ ನೆಲೆಯ ಭಾವನಾತ್ಮಕ ಸಂಬಂಧ. ಇದು ಸಹಜವಾಗಿಯೇ ಪೋತೆಯವರ ಚಿಂತನೆಗಳು ರೂಪುಗೊಳ್ಳಲು ಕಾರಣವಾಗಿದೆ. ಇದು ಮುಂದೆ ಅವರ ಬರಹಗಳಲ್ಲೂ ಕಾಣಿಸಿಕೊಂಡಿದೆ.

ಪೋತೆಯವರು ಸ್ವಯಂ ತಿಳುವಳಿಕೆಯ ಹಂತವನ್ನು ತಲುಪಿದಾಗ ಇರುವಿಕೆ ಮತ್ತು ಆಗುವಿಕೆಗಳ ಕುರಿತ ಆಲೋಚನೆ ಗಟ್ಟಿಗೊಂಡು ಅಸ್ತಿತ್ವದ ಪ್ರಜ್ಞೆಯನ್ನು ಮೂಡಿಸಿದೆ. ಅಸ್ತಿತ್ವದ ನೆಲೆಗಟ್ಟಿನಲ್ಲಿಯೇ ಅರಳಿರುವ ಅವರ ಆಲೋಚನೆಗಳು ಅಸ್ತಿತ್ವದ ಹಲವು ಆಯಾಮಗಳನ್ನು ಕುರಿತು ಚಿಂತಿಸಿವೆ. ಸುತ್ತಣದ ಸಮಾಜಕ್ಕಾದ

ಗಾಯಗಳನ್ನು ತನ್ನ ಗಾಯಗಳೆಂದೇ ಭಾವಿಸುವಲ್ಲಿಯೇ ಅವರು ಸಾಮಾಜಿಕ ಬದುಕಿ ನೊಂದಿಗೆ ವಿಶಿಷ್ಟ ಬಗೆಯದಾದ ಭಾವನಾತ್ಮಕ ಸಂಬಂಧವನ್ನು ರೂಪಿಸಿಕೊಳ್ಳುತ್ತಾರೆ. ಆ ಭಾವನಾತ್ಮಕ ಬಂಧವೇ ಅವರನ್ನು ಇಷ್ಟು ದೂರ ಕರೆದುಕೊಂಡು ಬಂದಿದೆ, ಮುಂದೆಯೂ ಅದು ಅವರನ್ನು ಮುನ್ನಡೆಸುತ್ತದೆ ಎನ್ನುವುದು ಸ್ಪಷ್ಟ. ಹಾಗೆಯೇ ಅವರು ಸಮಾಜದೊಂದಿಗಿಟ್ಟುಕೊಂಡಿರುವ ಸಂಬಂಧವು ಸಹ ಬಹುವಿಧದಿಂದ ಕೂಡಿರುವಂತಹದ್ದು. ಅದು ಏಕಮುಖದ್ದಲ್ಲ. ಸಾಹಿತ್ಯ ಅಥವಾ ಬರವಣಿಗೆ ಎನ್ನುವುದು ಯಾವಾಗಲೂ ಆಯಾ ಸಾಹಿತಿಗಳ ಅಥವಾ ಬರಹಗಾರರ ಕ್ರಿಯಾಶೀಲತೆಯ ದ್ಯೋತಕವೂ ಆಗಿರುತ್ತದೆ. ಆಯಾ ಬರವಣಿಗೆಗಳಿಗೆ ಪೂರಕವಾದ ಅನುಭವಗಳಾಗಲಿ, ತಾತ್ತ್ವಿಕತೆಯಾಗಲಿ ಕೇವಲ ಕಚ್ಚಾ ಸಾಮಗ್ರಿ ಮಾತ್ರ ಅಗಿರುವುದಿಲ್ಲ. ಒಬ್ಬರ ಬರವಣಿಗೆಯ ಸ್ವರೂಪ-ಸಾಧ್ಯತೆಗಳನ್ನು ನಿರ್ಧರಿಸುವ ಮಾನದಂಡಗಳೂ ಆಗಿರುತ್ತವೆ. ಈ ಹಿನ್ನೆಲೆಯಲ್ಲಿ ಪೋತೆಯವರು ಗತಿಸಿದ್ದು, ಇರುವುದು ಮತ್ತು ಸಂಭವಿಸಬಹುದಾದವುಗಳ ಬಗೆಗಿನ ತಿಳುವಳಿಕೆ ಅವರನ್ನು ಪ್ರತ್ಯೇಕ ಸ್ಥಾನದಲ್ಲಿ ನಿಲ್ಲಿಸಿದೆ. ಒಬ್ಬ ಭಾವುಕ ಜೀವಿ ಮಾತ್ರ ಈ ಪ್ರಕ್ರಿಯೆಲ್ಲಿ ತೊಡಗಿಕೊಳ್ಳಲು ಸಾಧ್ಯ.




ಪೋತೆಯವರ ತಾತ್ತ್ವಿಕತೆ ರೂಪುಗೊಳ್ಳುವಲ್ಲಿನ ಮತ್ತೊಂದು ಅಂಶವೆಂದರೆ ತಿಳುವಳಿಕೆ. ಅದನ್ನು ಹೊರತಿಳುವಳಿಕೆ ಮತ್ತು ಒಳತಿಳುವಳಿಕೆಯೆಂದು ಎರಡು ರೀತಿಯಲ್ಲಿ ವಿಭಾಗಿಸಬಹುದು. ಅವರ ಹೊರತಿಳುವಳಿಕೆಗೆ ಕಾರಣವಾದದ್ದು ಸಾಮಾಜಿಕ ಬದುಕು ಕಲಿಸಿದ್ದಾದರೆ, ಒಳತಿಳುವಳಿಕೆಯು ಸಾಮಾಜಿಕ ಹಾಗೂ ಸಾಂಸ್ಕೃತಿಕ ಚಿಂತಕರ ಚಿಂತನೆಗಳ ಮನನದಿಂದ ರೂಪುಗೊಂಡಿದೆ. ಇದನ್ನು ಉದ್ದಕ್ಕೂ ಅವರ ಬದುಕಿನಲ್ಲಿ ಮತ್ತು ಬರಹದಲ್ಲಿ ಕಾಣಬಹುದಾಗಿದೆ. ದೈನಂದಿನ ಬದುಕಿನ ಘಟನಾವಳಿಗಳನ್ನು ಅತ್ಯಂತ ಸೂಕ್ಷ್ಮವಾಗಿ ಗಮನಿಸುವ ಪೋತೆಯವರು ಕಾಲಕಾಲಕ್ಕೆ ಅವುಗಳಿಗೆ ಪ್ರತಿಕ್ರಿಯಿಸುತ್ತಲೇ ಬಂದಿದ್ದಾರೆ. ಆ ಪ್ರತಿಕ್ರಿಯೆಯು ಘಟನೆಯಿಂದ ಘಟನೆಗೆ, ಸಂದರ್ಭದಿಂದ ಸಂದರ್ಭಕ್ಕೆ, ಪ್ರದೇಶದಿಂದ ಪ್ರದೇಶಕ್ಕೆ, ಕಾಲದಿಂದ ಕಾಲಕ್ಕೆ ಹಲವು ಆಯಾಮಗಳಲ್ಲಿ ಅಭಿವ್ಯಕ್ತಗೊಂಡಿದೆ. ಇದು ಅವರ ತಿಳುವಳಿಕೆಯ ವಿಸ್ತಾರವೇ ಆಗಿದೆ. ಇದು ಬರಹಗಾರನ ಚಲನಶೀಲತೆಗೆ ಸಾಕ್ಷಿ. ಯಾವುದೋ ಕಾಲಘಟ್ಟದ ಒಂದೇ ಬಗೆಯ ಚಿಂತನೆಗೆ ಜೋತುಬೀಳದೆ ಪರಿವರ್ತಿತ ಬದುಕಿನ ಸ್ಥಿತ್ಯಂತರಗಳಿಗನುಗುಣವಾಗಿ ತನ್ನ ತಿಳುವಳಿಕೆ ಯನ್ನು ವಿಸ್ತರಿಸಿಕೊಳ್ಳುವ ಗುಣ ಎಲ್ಲಾ ಕಾಲದ ಆಲೋಚನೆಗಳಿಗೆ, ಬರಹಗಳಿಗೆ ಅಗತ್ಯ. ಅದನ್ನು ಅವರು ಸಾಮಾಜಿಕತೆಯ ಅರಿವಿನ ಮೂಲಕ ಗಳಿಸಿಕೊಂಡಿದ್ದಾರೆ. ಅಂತೆಯೇ ಅವರ ತಾತ್ತ್ವಿಕತೆಯನ್ನು ಗಟ್ಟಿಗೊಳಿಸಿದವುಗಳಲ್ಲಿ ಮುಖ್ಯವಾದವು ಒಳತಿಳುವಳಿಕೆಗಳು. ಬುದ್ಧ, ಬಸವ ಮತ್ತು ಅಂಬೇಡ್ಕರ್ ಈ ಮೂವರ ಚಿಂತನೆಗಳನ್ನು ಮೀರಿ ಅವರೆಂದೂ ನಡೆದುಕೊಂಡಿಲ್ಲ ಮತ್ತು ಬರೆಯುವುದೂ ಇಲ್ಲ. ಇವರನ್ನು ಪೋತೆಯವರು ತಮ್ಮರಿವಿನ ದಾರಿಯ ಬೆಳಕುಗಳನ್ನಾಗಿಸಿಕೊಂಡಿದ್ದಾರೆ. ಸಾತ್ರೆ ಒಂದು ಕಡೆ 'ಬರವಣಿಗೆ ಎಂಬ ಉತ್ಪಾದನೆಯು ಲೇಖಕನ ಮತ್ತು ಬರವಣಿಗೆಯ ಪ್ರಜ್ಞಾ ಪೂರ್ವಕ ಸಂಬಂಧ' ಎನ್ನುತ್ತಾನೆ. ದೇಶಿಯ ಪರಿಭಾಷೆಯಲ್ಲಿ ಹೇಳುವುದಾದರೆ ಇದು ನಡೆ-ನುಡಿಯ ನಡುವಣ ಸಂಬಂಧ. ಇದನ್ನು ಪೋತೆಯವರ ಬದುಕು-ಬರಹಗಳ ಸಂಬಂಧದಲ್ಲಿ ಕಾಣಬಹುದಾಗಿದೆ. ಅವರು ಬರಹವನ್ನು ಎಂದೂ ಬದುಕಿನ ಆಚೆಗಿಟ್ಟು ನೋಡುವುದಿಲ್ಲ. ತಮ್ಮ ಬದುಕಿನೊಂದಿಗೆ ಇತರರ ಬದುಕನ್ನೂ ತಮ್ಮ ಬರಹದ ವ್ಯಾಪ್ತಿಗೆ ತಂದುಕೊಳ್ಳುತ್ತಾರೆ. ಹಾಗಂತ ಬದುಕನ್ನು ಯಥಾವತ್ತಾಗಿಯೂ, ಒಂದು ಘಟನೆಯ ರೂಪವನ್ನು ಸಂಪೂರ್ಣವಾಗಿಯೂ ಹಿಡಿದಿಡುವುದಿಲ್ಲ. ಬದುಕಿನ, ಘಟನಾವಳಿಗಳ ನೆರಳುಗಳ ಕೆಲ ಪದರುಗಳನ್ನು ತಮ್ಮ ಬರಹಗಳಲ್ಲಿ ಅನಾವರಣಗೊಳಿಸುತ್ತಾರೆ. ಈ ಬಗೆಯ ಶೈಲಿಗೆ ಸಾಹಿತ್ಯದಲ್ಲಿ ವಿಶಿಷ್ಟವಾದ ಸ್ಥಾನವಿದೆ. ಬದುಕಿನ ಬಹುತ್ವವನ್ನು ಕಾಣುವ ಕಣ್ಣಿಗೆ, ಗುರುತಿಸುವ ಮನಸ್ಸಿಗೆ ಒಂದು ಬಗೆಯ ಸಂವೇದನಾಶೀಲತೆಯ ಅಗತ್ಯವಿರುತ್ತದೆ. ಅದು ಬದುಕನ್ನು ಸಮಗ್ರವಾಗಿಯೂ, ಸೂಕ್ಷ್ಮ ವಾಗಿಯೂ ಗ್ರಹಿಸುತ್ತದೆ. ಒಂದು ವೇಳೆ ಯಾವ ಸಂವೇದನಾಶೀಲತೆಗೆ ಬದುಕು ಅಥವಾ ಸಮಾಜ ರಿಕ್ತವೆನಿಸುತ್ತದೆಯೋ ಆಗ ಅದರ ಗ್ರಹಿಕೆಯಲ್ಲಿಯೇ ದೋಷವಿದೆಯೆಂದು ಭಾವಿಸಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ನೋಡಿದಾಗ ಪೋತೆಯವರ ಸಂವೇದನಾಶೀಲತೆಯು ಬದುಕಿನ ಬಹುತ್ವದ ನೆಲೆಗಳನ್ನು ಸಮರ್ಥವಾಗಿ ಹಿಡಿದಿಟ್ಟಿದೆಯೆನಿಸುತ್ತದೆ. ಇತರೆ ಬರಹಗಾರರಂತೆಯೇ ಇವರ ಬರಹಗಳೂ ಸಹ ಸಹಜ ಸಂಪತ್ತನ್ನುಳ್ಳವುಗಳು, ಕೆಲವು ಅವರದೇ ಬದುಕಿನ ತುಣುಕುಗಳು, ಅವರದೇ ಬದುಕಿನ ಧ್ವನಿಗಳು. ಏಕೆಂದರೆ ಬದುಕೆಂಬುದ ಸಾಮಾನ್ಯ ಸಂಗತಿಯಲ್ಲ. ಅದು ಬೆಲೆಕಟ್ಟಲೂ ಆಗದ ಅಮೂಲ್ಯ ರತ್ನ, ಬತ್ತಲಾರದ ಅಸಂಖ್ಯ ಸಂಗತಿಗಳ ಗಣಿ. ಅಲ್ಲಿ ಅಗೆದಷ್ಟು ಅನುಭವಗಳು ಉತ್ಪನ್ನಗೊಳ್ಳುತ್ತಲಿರುತ್ತವೆ. ಈ ಸೂಕ್ಷ್ಮತೆಯನ್ನು ಪೋತೆಯವರ ಲೇಖನಿ ಅರಿತಿದೆ.

ಪೋತೆಯವರ ಬದ್ಧತೆಯನ್ನು ನೋಡಿದಾಗ ಗೋಚರಿಸುವ ಇನ್ನೊಂದು ಅಂಶವೆಂದರೆ, ಕಾಪಾಡಿ ಕೊಂಡು ಬಂದ ನೆನಪುಗಳಿಗೆ ಮರುಹುಟ್ಟನ್ನು ನೀಡುವುದು. ನೆನಪುಗಳೆಂದರೆ ಮನಸ್ಸಿಗೆ ಸಂಬಂಧಿಸಿದ ಸಾಮಾನ್ಯವಾದ ಸಂಗತಿಗಳಲ್ಲ. ಅವು ಒಂದು ಕಾಲದ ಬದುಕನ್ನು, ಬದುಕಿನ ಹಲವು ಬವಣೆಗಳನ್ನು, ಬದುಕಿನ ರೂಪ-ಸ್ವರೂಪಗಳನ್ನು, ಬದುಕು ಸೃಷ್ಟಿಸಿಕೊಂಡಿದ್ದ ಸಾಂಸ್ಕೃತಿಕತೆಯನ್ನು, ಅದು ಅನುಸರಿ ಸುತ್ತಿದ್ದ ಮೌಲ್ಯಗಳನ್ನು, ಆಚರಿಸುತ್ತಿದ್ದ ನಂಬಿಕೆಗಳನ್ನು, ಇಟ್ಟುಕೊಂಡಿದ್ದ ತುಡಿತಗಳನ್ನು... ಹೀಗೆ ಏನೆಲ್ಲಾ ವನ್ನೂ ಅದು ಒಳಗೊಂಡಿರುತ್ತದೆ. ಅದಕ್ಕೆ ಆಗಾಗ ಹೊಸರೂಪವನ್ನು ನೀಡಿ ಹೊರಹಾಕಬೇಕಷ್ಟೆ. ಇದೊಂದು ಬಗೆಯ ಬರಹದ ತಂತ್ರಗಾರಿಕೆಯೂ ಹೌದು. ಈ ಮಾದರಿಯನ್ನು ಪೋತೆಯವರ ಅನೇಕ ಕಥೆಗಳಲ್ಲಿ ಕಾಣಬಹುದಾಗಿದೆ. ಬಹುಕಾಲದಿಂದ ಬಿಟ್ಟೂ ಬಿಡದೆ ಕಾಡುವ ನೆನಪುಗಳನ್ನು ಅಕ್ಷರಕ್ಕಿಳಿಸುವಲ್ಲಿ ಅವರು ಸಿದ್ಧಹಸ್ತರು. ಹಾಗೆ ನೋಡಿದರೆ ಇದೊಂದು ರೀತಿಯ ಜಾಗೃತ ಪ್ರಜ್ಞೆಯೂ ಹೌದು, ಸಾಂಸ್ಕೃತಿಕ ವಿವೇಕವೂ ಹೌದು, ಸಾಮಾಜಿಕ ಬದ್ಧತೆಯೂ ಹೌದು, ತಾಂತ್ರಿಕ ನೈಪುಣ್ಯವೂ ಹೌದು. ಪೋತೆಯವರು ತಮ್ಮ ನೆನಪುಗಳನ್ನು ಬೆನ್ನಿಗೆ ಕಟ್ಟಿಕೊಂಡೇ ಮುನ್ನಡೆಯುವ ಸ್ವಭಾವದವರು. ಅದು ಅಗತ್ಯವೂ ಸಹ. ಏಕೆಂದರೆ ನೆನಪುಗಳೆಂದರೆ ಸ್ಥಿರವಾದ ಚಿತ್ರಗಳಲ್ಲ. ಯಾವುವನ್ನು ಇಂದು ಅವರ ತಾತ್ತ್ವಿಕತೆ ಮತ್ತು ಬದುಕು ಎಂದು ಗುರುತಿಸುತ್ತಿದ್ದೇವೆಯೋ ಅವೂ ಸಹ ಅಂತಹ ನೆನಪುಗಳಿಂದಲೇ ಹೊಸ ರೂಪ ಧರಿಸಿವೆ. ಯಾವಾಗ ಒಬ್ಬರ ತಾತ್ತ್ವಿಕತೆಯನ್ನು ಅವರ ನೆನಪುಗಳಿಂದ ವಿಭಜಿಸಿ ನೋಡುತ್ತೇವೆಯೋ ಆಗ ಅದರ ಅರ್ಥವೂ ಬೇರೆಯಾಗುತ್ತದೆ. ಹಾಗಾಗಿ ನೆನಪುಗಳಾಗಲಿ, ಅನುಭವಗಳಾಗಲಿ ಪ್ರತ್ಯೇಕಿಸಿ ನೋಡಲಾ ರದವುಗಳು. ಅವುಗಳ ಪಯಣ ಒಟ್ಟೊಟ್ಟಿಗೆ ಸಾಗುತ್ತಿರಬೇಕು ಜೋಡಿ ಗಾಲಿಗಳಂತೆ. ಅವುಗಳಿಗೆ ಪ್ರತ್ಯೇಕ ಚೌಕಟ್ಟುಗಳಿದ್ದಾಗಲೂ ಸಂಕೀರ್ಣವಾದ ಸಂಬಂಧವಿರುವುದರಿಂದ ಸರಳರೇಖೆಯ ಮೂಲಕ ಅವುಗಳನ್ನು ವಿಭಜಿಸಲು ಬಾರದು, ವಿಭಜಿಸಬಾರದೂ ಸಹ. ಅವ್ಯಕ್ತ ಅನುಭವಗಳನ್ನು

ಬೆಂಬತ್ತುವುದು ಅವರ ಚಿಂತನೆಗಳ, ಬರಹಗಳ ಮತ್ತೊಂದು ಗುಣ. ಇದನ್ನು ಅವರ 'ಬಯಲೆಂಬೊ ಬಯಲು' ಕಾದಂಬರಿಯಲ್ಲಿ ಕಾಣಬಹುದು. ಅವರೇ ಹೇಳಿಕೊಂಡಿರು ವಂತೆ ಬಯೋಪಿಕ್ ಕಾದಂಬರಿಯಾದ ಈ ಕೃತಿಯು ಹಲವು ಅವ್ಯಕ್ತವಾದ ಅನುಭವಗಳನ್ನು ಹೊತ್ತು ನಿಂತಿದೆ. ಅಲ್ಲಿನ ಅನುಭವಗಳು ಬಹು ಸಂಕೀರ್ಣತೆಯಿಂದ ಕೂಡಿದವುಗಳಾಗಿವೆ. ಅವರು ಬಾಲ್ಯದಿಂದ ಹಿಡಿದು ತಮ್ಮ ಬದುಕನ್ನು ಕಟ್ಟಿಕೊಳ್ಳುವವರಿಗೆ ಅಲ್ಲಲ್ಲಿ ಹೊರಹಾಕಿರುವ ಅನುಭವಗಳು ಎಲ್ಲಿಯೂ ಹೇಳಿ ಕೊಳ್ಳಲಾರದವುಗಳು. ಇಂತಹ ಅನುಭವಗಳೇ ನಿಜವಾದ ಸಾಂಸ್ಕೃತಿಕ ಬದುಕನ್ನು ಪರಿಚಯಿಸಬಲ್ಲವು ಗಳು. ಯಾಕೆಂದರೆ ಅವ್ಯಾವು ಅವರ ನೈಜಾನುಭವದಿಂದ ದೂರವಿರುವವುಗಳಲ್ಲ, ಸಾಕ್ಷಿ ಪುರಾವೆಗಳನ್ನೂ ಬಯಸುವವೂ ಅಲ್ಲ. ಅವುಗಳು ಇವರ ಬದುಕಿನಲ್ಲಿ ಘಟಿಸಿದ್ದರಿಂದಲೇ ಇವರ ಇಂದಿನ ಈ ಬದುಕು ಮತ್ತು ತಾತ್ತ್ವಿಕತೆಗಳು ರೂಪುಗೊಳ್ಳಲು ಕಾರಣವಾಗಿವೆ. ಇದಕ್ಕೆ ಸಂಬಂಧಿಸಿದಂತೆ ಇನ್ನೊಂದು ಮಾತನ್ನು ಹೇಳುವುದಾದರೆ ಯಾವಾಗಲೂ ಬದುಕು ಮತ್ತು ಬರಹದ ಮಧ್ಯೆ ಒಂದು ಸಂವಾದವಿದ್ದು, ಅದು ತುಂಬಾ ಸಂಕೀರ್ಣವಾಗಿರುತ್ತದೆ. ಆ ಸಂಕೀರ್ಣತೆಯನ್ನು ಮೀರಿ ಸರಳೀಕರಣ ತಿಳುವಳಿಕೆಯ ಮೂಲಕ ಬರಹಗಾರ ಅದನ್ನು ತನ್ನ ಬರಹಗಳಲ್ಲಿ ನಿರೂಪಿಸಬೇಕಾಗುತ್ತದೆ. ಅಂತಹ ಸರಳತೆಯನ್ನು ಪೋತೆ ಯವರು ಬದುಕಿನ ಗ್ರಹಿಕೆಯ ಮೂಲಕ ಹಿಡಿದಿಟ್ಟ ಅವ್ಯಕ್ತ ಅನುಭವಗಳಲ್ಲಿ ಗುರುತಿಸಬಹುದಾಗಿದೆ. ಅವರ ಅನುಭವದ ನಿರೂಪಣೆಗಳಲ್ಲಿ ಈ ಸರಳರೇಖಾತ್ಮಕತೆಯೂ ಇದೆ, ತಾರ್ಕಿಕತೆಯೂ ಇದೆ. ಅಷ್ಟೇ ಅಲ್ಲದೆ ಅವರು ಹೇಳದೇ ಬಿಟ್ಟಿರುವ ಅವ್ಯಕ್ತ ಅಂಶಗಳು ಓದುಗರ ವಿಭಿನ್ನ ಗ್ರಹಿಕೆಯನ್ನು ಆಧರಿಸಿವೆ. ಇದು ಅವರ ಬರಹಗಳಲ್ಲಿನ ವಿಶ್ವಾತ್ಮಕ ಪ್ರಜ್ಞೆಯೂ ಆಗಿದೆ. ಏಕೆಂದರೆ ಇಲ್ಲಿನ ಅವರ ಬರಹ ಮಾತ್ರ ಗೋಚರ. ಅದರ ಅರ್ಥಮಾತ್ರ ಅನೇಕ ಸಂದರ್ಭಗಳಲ್ಲಿ ಬದಲಾಗುತ್ತಾ ಸಾಗುತ್ತದೆ. ಅದು ಲೇಖಕನ ಸಾಮಾಜಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆಗಳಿಗೆ ಅನುಗುಣವಾಗಿ ವೈವಿಧ್ಯತೆಯನ್ನು ಪಡೆದುಕೊಳ್ಳುತ್ತದೆ. ಬರಹ ಮತ್ತು ಕಾಲಘಟ್ಟಕ್ಕೂ ಸಹ ಸಂಬಂಧವಿರುತ್ತದೆ. ಒಂದು ಚಾರಿತ್ರಿಕ ಸಂದರ್ಭದ ಬರಹ ಗಾರ ಏನನ್ನು ಬರೆಯುತ್ತಾನೆ? ಏಕೆ ಬರೆಯುತ್ತಾನೆ? ಯಾರಿಗಾಗಿ ಬರೆಯುತ್ತಾನೆ? ಯಾವ ರೂಪದಲ್ಲಿ ಬರೆಯುತ್ತಾನೆ?..... ಇವೆಲ್ಲವೂ ಒಂದು ಕಾಲಘಟ್ಟದಲ್ಲಿ ಮುಖ್ಯವಾಗುತ್ತವೆ. ಪೋತೆಯವರು ಸಮಕಾಲೀನ ಕಾಲಘಟ್ಟದಲ್ಲಿ ಬರೆಯುತ್ತಿರುವವರಾದರೂ ಅವರ ಬರವಣಿಗೆಗಳಿಗೆ ಸರಿಸುಮಾರು ಮೂರು ದಶಕಗಳ ಚರಿತ್ರೆಯುಂಟು. ಈ ಮೂರು ದಶಕಗಳು ಈ ನೆಲದ ಸಾಂಸ್ಕೃತಿಕ ಬದುಕಿನಲ್ಲಿ ಹಲವು ನೆಲೆಗಳಲ್ಲಿ ಮಹತ್ವದವುಗಳಾಗಿವೆ ಮತ್ತು ಒಂದೊಂದು ದಶಕವೂ ತುಂಬಾ ಭಿನ್ನವಾದ ಜಾಡುಗಳನ್ನು ಒಳಗೊಂಡಿವೆ. ಭಾರತವು ಜಾಗತೀಕರಣ ಮತ್ತು ಉದಾರೀಕರಣಕ್ಕೆ ತನ್ನನ್ನು ತೆರೆದುಕೊಂಡ ಸಂದರ್ಭದಿಂದ ಪೋತೆ ಯವರ ಬರವಣಿಗೆ ಆರಂಭಗೊಳ್ಳುತ್ತದೆ. ಆ ಸಂದರ್ಭದ ಅವರ ಬರವಣಿಗೆ ಸಂಶೋಧನಾತ್ಮಕವಾದುದು. ಆದರೆ ಕಂಪ್ಯೂಟರೀಕರಣದಲ್ಲಿ ಅವರು ಸೃಜನ ಬರಹಕ್ಕೆ ತಮ್ಮನ್ನು ತೊಡಗಿಸಿಕೊಂಡರು. ಡಿಜಿಟಲೀ ಕರಣದ ಸಂದರ್ಭದಲ್ಲಿ ಇನ್ನೂ ಹೆಚ್ಚು ಬರಹದ ಬಹು ಆಯಾಮಗಳನ್ನು ಮೈಗೂಡಿಸಿಕೊಂಡರೆನ್ನ ಬಹುದು. ಈ ಮೂರು ಕಾಲಘಟ್ಟದ ಬರವಣಿಗೆಯ ಹಿಂದಿನ ತಾತ್ತ್ವಿಕತೆಯೂ ಸಹ ಭಿನ್ನವಾಗಿರುವುದು ಸ್ಪಷ್ಟವಾಗಿದೆ. ಆರಂಭದ ಬರವಣಿಗೆಗಳಲ್ಲಿ ಕಳೆದ ಶತಮಾನದ ಎಪ್ಪತ್ತರ ದಶಕಗಳಲ್ಲಿ ರೂಪುಗೊಂಡ ಎಡಪಂಥೀಯ ಚಿಂತನಾ ಮಾದರಿಗಳು ಪ್ರೇರಣೆಯನ್ನು ನೀಡಿದವು. ನಂತರದಲ್ಲಿ ಬುದ್ಧ, ಬಸವ ಮತ್ತು ಅಂಬೇಡ್ಕರ್ ಚಿಂತನೆಗಳು ಇವರ ತಾತ್ತ್ವಿಕತೆಯನ್ನು ಬಲಪಡಿಸಿದವು. ವರ್ತಮಾನದಲ್ಲಿ ಇವೆರಡನ್ನೂ ಒಳಗೊಂಡಂತೆ ಸಮಕಾಲೀನ ಸಾಂಸ್ಕೃತಿಕ ತಲ್ಲಣಗಳು ಇವರ ಬರವಣಿಗೆಯ ತಾತ್ತ್ವಿಕತೆಯನ್ನು ಗಟ್ಟಿ ಗೊಳಿಸುತ್ತಿವೆ. ಅವರ ಈ ಮೂರು ದಶಕದ ಅವಧಿಯನ್ನು ಮೂರು ಘಟ್ಟಗಳನ್ನಾಗಿಯೂ ಸಹ ನೋಡಲಿಕ್ಕೆ ಸಾಧ್ಯವಿದೆ. ಈ ಮೂರು ಸಂದರ್ಭಗಳಲ್ಲಿಯೂ ಭಿನ್ನ ಚಹರೆಗಳು ಅವರ ಬದುಕು ಮತ್ತು ಬರಹದಲ್ಲಿ ಕಾಣಿಸಿಕೊಂಡಿವೆ. ಇನ್ನೊಂದು ವಿಶಿಷ್ಟವಾದ ಸಂಗತಿಯೆಂದರೆ ಈ ಮೂರು ಸಂದರ್ಭಗಳಲ್ಲೂ ಅವರಲ್ಲಿ ಭಿನ್ನವಾದ ಭಾಷಿಕ ಪ್ರಯೋಗಗಳಿವೆ. ಕಾಲದ ಒತ್ತಾಸೆಗಳು ಇದಕ್ಕೆ ಕಾರಣವೆನ್ನಬಹುದೆನಿಸುತ್ತದೆ. ಈ ಚರ್ಚೆಯನ್ನು ಇನ್ನೊಂದಿಷ್ಟು ಮುಂದುವರೆಸುವುದಾದರೆ ಅವರ ಈ ಮೂರು ಸಂದರ್ಭದ ಬದುಕು ಮತ್ತು ಬರವಣಿಗೆಗೆ ಸಂಸ್ಕೃತಿಯು ನಿರ್ವಹಿಸಿದ ಪಾತ್ರವೂ ಸಹ ಪ್ರಮುಖವಾದುದು. ಪ್ರತಿಯೊಂದು ಕಾಲಘಟ್ಟದ ಬೌದ್ಧಿಕ ಜಗತ್ತು ತನ್ನ ಕಾಲದ ಸಂಸ್ಕೃತಿಗೆ ಅನುಗುಣವಾಗಿಯೇ ತನ್ನ ತಾತ್ತ್ವಿಕತೆಯನ್ನು ರೂಪಿಸಿಕೊಂಡು ಆ ಮೂಲಕ ತನ್ನ ಚಿಂತನೆಗಳನ್ನು ಹೊರಹಾಕುತ್ತಿರುತ್ತದೆ. ಕಾರಣವಿಷ್ಟೇ ಪ್ರತಿಯೊಂದು ಸಂಸ್ಕೃತಿಗೂ ಅದರದೇ ಆದ ಅಹಂಕಾರವಿರುತ್ತದೆ. ಏಕೆಂದರೆ ಸಂಸ್ಕೃತಿಯೆನ್ನುವುದು ಕೇವಲ ಪರಂಪರಾ ಗತವಾಗಿ ಬಂದುದು ಮಾತ್ರವೇ ಆಗಿರುವುದಿಲ್ಲ. ಸಂಸ್ಕೃತಿಯು ಆಯಾ ಕಾಲಘಟ್ಟದ ಜನರು ಅಭಿವೃದ್ಧಿ ಗೊಳಿಸಿಕೊಂಡ ಒಂದು ನಿರ್ದಿಷ್ಟ ಜೀವನ ವಿಧಾನವಲ್ಲದೆ ಮತ್ತೇನೂ ಆಗಿರುವುದಿಲ್ಲ. ಅಂತೆಯೇ ಪೋತೆಯವರಲ್ಲಿ ಈ ಬದಲಾದ ಜೀವನ ವಿಧಾನವು ಕಾಲಕಾಲಕ್ಕೆ ಅವರಲ್ಲಿ ತಾತ್ತ್ವಿಕ ನಾವಿನ್ಯತೆಯನ್ನು, ಭಾಷಿಕ ನಾವಿನ್ಯತೆಯನ್ನು, ಅಭಿವ್ಯಕ್ತಿಯ ನಾವಿನ್ಯತೆಯನ್ನು ತಂದಿದೆ. ಏಕೆಂದರೆ ಅವರೆಂದೂ ವರ್ತ ಮಾನಕ್ಕೆ ವಿಮುಖರಲ್ಲ. ಅದರ ಸಹಚರರು. ಅವರ ನಡಿಗೆ ಯಾವಾಗಲೂ ವರ್ತಮಾನದೊಂದಿಗೆ ಸಾಗುತ್ತಿರುತ್ತದೆ. ಭೂತದ ಬೆಳಕು ಮಾತ್ರ ಆ ನಡಿಗೆಗೆ ಯಾವಾಗಲೂ ಸಹಕಾರಿಯಾಗಿರುತ್ತದೆ. ಪೋತೆಯವರ ಇಂದಿನ ಸಾಹಿತ್ಯ ಕೃತಿ ಈಗಾಗಲೇ ಹೇಳಿದಂತೆ ಏಕಮಾದರಿಯಲ್ಲಿಲ್ಲ. ಅದು ಬಹು ಮಾದರಿಯದ್ದು. ಸಮಕಾಲೀನ ತಲ್ಲಣಗಳನ್ನು ಹೊಸ ರೀತಿಯಿಂದ ನೋಡುವುದರ ಭಾಗ ವಾಗಿಯೇ ಈ ಮಾದರಿಯನ್ನು ಅವರು ಅನುಸರಿಸಿದಂತಿದೆ. ಈ ಸಂದರ್ಭದಲ್ಲಿ ಅವರಲ್ಲಿ ಹೇಳುವಿಕೆ ಮತ್ತು ಆಲೋಚನೆಗಳು ಮುಖ್ಯವಾಗಿವೆ. ಈ ಮಾದರಿಯನ್ನು ಹೆಚ್ಚಾಗಿ ಅವರ ಕಥೆಗಳಲ್ಲಿ ಕಾಣಬಹು ದಾಗಿದೆ. ತಮ್ಮ ತತ್‌ಕ್ಷಣದ ಆಲೋಚನೆಗಳನ್ನು ಹೇಳುವುದೇ ಅವರಿಗೆ ಅಲ್ಲಿ ಪ್ರಧಾನ ಅಂಶ. ಹಾಗಾಗಿ ಅಲ್ಲಿ ಹೆಚ್ಚಿನ ಪ್ರಮಾಣದ ಕುಸುರಿ ಕೆಲಸವಿಲ್ಲ. ಬಹುಶಃ ಅವರು ಕುಶರಿ ಕೆಲಸವನ್ನು ಕೇವಲ ಅಲಂಕಾರ ವೆನ್ನುವಂತೆ ಭಾವಿಸಿದಂತಿದೆ. ಆ ಕಾರಣಕ್ಕಾಗಿ ಅದಕ್ಕೆ ಅವರು ಕೈಹಾಕಿಲ್ಲ. ಅವರ ದೃಷ್ಟಿಯಲ್ಲಿ ಆಲೋಚನೆ ಗಳೆನ್ನುವವು ಕೇವಲ ಅಕ್ಷರ ರೂಪದಲ್ಲಿ ಖಾಲಿ ಕಾಗದದಲ್ಲಿ ಗೀಚಿದ ಚಿತ್ರಗಳಲ್ಲ. ಅಸಂಖ್ಯಾತ ಅರ್ಥ ಗಳನ್ನು ಒಳಗೊಂಡಿರುವ ವರ್ಣಗಳವು. ಆಲೋಚನೆಗಳು ಹೇಗೆ ಅಮೂರ್ತವೋ ಹಾಗೆಯೇ ಬರವಣಿ ಗೆಯೂ ಸಹ ಅಮೂರ್ತವೆನ್ನುವ ನೆಲೆಯಲ್ಲಿ ಅವರು ತಮ್ಮ ಬರಹಗಳನ್ನು ಕಟ್ಟಿಕೊಟ್ಟಿದ್ದಾರೆ. ಜೊತೆಗೆ ಅವರು ಬಹುಮಾದರಿಯನ್ನು ಅನುಸರಿಸಲಿಕ್ಕೆ ಇರುವ ಇನ್ನೊಂದು ಕಾರಣವೆಂದರೆ ಸಾಹಿತ್ಯವೆನ್ನುವುದು ಕೇವಲ ಪ್ರಮೇಯವಲ್ಲ ಎನ್ನುವುದು. ಪ್ರಮೇಯವು ಕೇವಲ ಹಾಜರಿದ್ದದನ್ನು ಮಾತ್ರ ವಿವರಿಸುತ್ತದೆ. ಅದು ಸಾರರೂಪಿ. ಆದರೆ ಸಾಹಿತ್ಯ ಹಾಗಲ್ಲ. ಸಾಹಿತ್ಯವೆನ್ನುವುದಕ್ಕೆ ಒಂದು ಮೌಲ್ಯವಿದೆ. ಅದರ ತಿಳುವಳಿಕೆ ವಿಶಿಷ್ಟವಾದ ಅರಿವನ್ನುಂಟು ಮಾಡುತ್ತದೆ. ಹಾಗಾಗಿ ಅದರ ಸಾಧ್ಯತೆಗಳು ಹಲವಿರುತ್ತವೆ ಎನ್ನುವ ಭಾವ ಅವರದ್ದು. ಅದಕ್ಕೆ ಪೂರಕವಾಗಿ ಅವರು ಬಳಸಿಕೊಳ್ಳುವುದು ನೈಜ ಘಟನಾವಳಿಗಳನ್ನೇ. ಅದು ಕಥೆಯಾಗಿರಲಿ, ಕಾದಂಬರಿಯಾಗಲಿ, ಪ್ರಬಂಧವಾಗಿರಲಿ. ಯಾವುದರಲ್ಲೂ ಹೆಚ್ಚು ಕಲ್ಪಿತವನ್ನು ಸೇರಿಸಲು ಹೋಗುವುದಿಲ್ಲ. ಹಾಗಾಗಿ ನೈಜತೆ, ಬಹುತ್ವವೇ ಅವರ ಇಂತಹ ಬರಹಗಳ ಮೂಲ ಕಾಳಜಿಯಾಗಿದೆ. ಅವರು ಬರೆದಿರುವ ಜೀವನ ಚರಿತ್ರೆ ಕೃತಿಗಳಿಗೂ ಸಹ ಈ ಮಾತನ್ನು ಅನ್ವಯಿಸಬಹುದಾಗಿದೆ. ತಮ್ಮ ತಾತ್ತ್ವಿಕತೆಗೆ ಪೂರಕವಾದ ತಾತ್ತ್ವಿಕತೆಯನ್ನುಳ್ಳ, ಬದ್ಧತೆಯನ್ನುಳ್ಳವರನ್ನಷ್ಟೇ ಅವರು ಆಯ್ದುಕೊಳ್ಳುತ್ತಾರೆ. ಆ ಮೂಲಕ ಬಹುವಿಧದ ಮಾದರಿಯಲ್ಲಿಯೂ ಏಕವಿಧದ ಬದ್ಧತೆಯನ್ನು ತೋರುತ್ತಾರೆ.

ಒಟ್ಟಿನಲ್ಲಿ ಸಮಕಾಲೀನ ಸಂದರ್ಭದಲ್ಲಿ ಪ್ರಗತಿಪರ ಚಿಂತನೆಗಳನ್ನು ತಮ್ಮ ಬದುಕು ಮತ್ತು ಬರಹದ ಮೂಲಕ ತಮ್ಮದೇ ಶೈಲಿಯಲ್ಲಿ ಕೊಂಡೊಯ್ಯುತ್ತಿರುವ ಕೆಲವೇ ಕೆಲವು ಬರಹಗಾರರಲ್ಲಿ ಪೋತೆ ಯವರೂ ಒಬ್ಬರು. ಭಾವನಿಷ್ಠತೆ ಮತ್ತು ವಸ್ತುನಿಷ್ಠತೆಗಳ ಮೂಲಕ ಸಾಹಿತ್ಯದೊಂದಿಗೆ ಸಂಬಂಧವನ್ನು ಏರ್ಪಡಿಸಿಕೊಂಡಿರುವ ಅವರು ಆ ಮೂಲಕವೇ ಸಾರಸ್ವತ ಲೋಕದಿಂದಿಗೆ ಸಂವಹನವನ್ನು ನಡೆಸುತ್ತಿ ದ್ದಾರೆ. ದೇಶಿನಿಷ್ಠ ಭಾಷಾಶೈಲಿಯ ಮೂಲಕ ವಿಶಿಷ್ಟ ಸಂಕಥನಗಳನ್ನು ರೂಪಿಸುತ್ತಿದ್ದಾರೆ.

# ಹೈಕು ಎಂಬ ಜಪಾನಿ ಕಾವ್ಯದೆಸೆಳೆನೊಂದಿಗೆ..



ಬುದ್ಧ ಹೇಳಿದ
ದುಃಖ ಬಾಳ ಸಂಗಾತಿ
ಸುಖ ಅತಿಥಿ

ಇದು ಲೇಖಕರು, ವಿದ್ವಾಂಸರು, ಸಂಸ್ಕೃತಿ ಚಿಂತಕರು ಮತ್ತು ಹೊಸತನ್ನು ಪ್ರಯೋಗಕ್ಕೆ ಒಳಪಡಿಸಿ, 'ಹೈಕು' ಕಾವ್ಯವನ್ನು ಬರೆದಿರುವ ಪ್ರೊ. ಎಚ್.ಟಿ.ಪೋತೆ ಅವರದು.

ಜಪಾನಿ ಕಾವ್ಯ ಪ್ರಕಾರವನ್ನು ಗಮನಿಸುವುದಾದರೆ, ಪುಟ್ಟ ಪುಟ್ಟ ಸಾಲುಗಳಿಂದ ಇಡೀ ಜಗತ್ತಿನ ಸಾಹಿತ್ಯಾಸಕ್ತರ ಮನಸ್ಸನ್ನು ಸೂರೆಗೊಳ್ಳುತ್ತಿರುವ ಸಾಹಿತ್ಯ ಪ್ರಕಾರವೆಂದರೆ, ಹೈಕು ಮತ್ತು ತಾಂಕಾ. ಇವು ಕೇವಲ ಕವಿತೆಗಳಲ್ಲ. ಧ್ಯಾನದ ಪ್ರತಿಫಲನ. ಅಪೂರ್ವ ಬದುಕಿನ ಜಂಜಾಟಗಳ ನಡುವೆಯೂ ಪ್ರೇಮೋನ್ಮಾದದ ಮೋಡಿ. ಇಂತಹ ವಿಶಿಷ್ಟ ಮತ್ತು ವಿಭಿನ್ನ ಎನಿಸಿರುವ ಜಪಾನಿ ಕಾವ್ಯದ ಪ್ರಕಾರಗಳನ್ನು ಭಾರತೀಯ ನೆಲದಲ್ಲಿ ಅದರಲ್ಲೂ ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ಆಲೋಚಿಸುತ್ತಿರುವುದಕ್ಕೆ ನಾವೆಲ್ಲ ಹೆಮ್ಮೆಪಡಬೇಕಿದೆ.

ಹಾಗೆ ನೋಡಿದರೆ, ಇವು ಜಪಾನಿ ಕಾವ್ಯ. ಇಂಗ್ಲೀಷ, ಉರ್ದು ಸೇರಿದಂತೆ ಅನ್ಯಭಾಷೆಗಳ ಸಾಹಿತ್ಯ ಕನ್ನಡಕ್ಕೆ ಬಂದಂತೆ, ಜಪಾನಿ ಕಾವ್ಯ ಪ್ರಕಾರ ಹೈಕು ಮತ್ತು ತಾಂಕಾ ಕೂಡ ಕನ್ನಡಕ್ಕೆ ಬಂದಿವೆ.

ಪ್ರಕೃತಿ ಕುರಿತು ಹೆಚ್ಚು ಧ್ವನಿಸುವುದೇ ತಾಂಕಾ ಮತ್ತು ಹೈಕು ಪ್ರಕಾರ.

ಗುಂಡಿಗೆ ಬಲಿ
ಅಂದಿನಿಂದ ಚೌಕಲ್ಲಿ
ನಿರ್ಜೀವ ದೇಹ

ಹೀಗೆ, ಹೈಕು ಬರೆದ ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾದ ಪ್ರೊ.ಎಚ್.ಟಿ.ಪೋತೆ ಅವರದು ಅಧ್ಯಯನಯುಕ್ತ ಬರಹ. ಹೈಕು ಮತ್ತು ತಾಂಕಾ ಬರಹಗಳನ್ನು ಅಧ್ಯಯನ ಮಾಡಿ, ಹೊಸ ಸಂಚಲನ ಸೃಷ್ಟಿಸುತ್ತಿರುವುದು ಮಾತ್ರ, ಅಭಿನಂದನೀಯ. ಭಾರತೀಯ ಸಾಹಿತ್ಯ ಪರಂಪರೆಯಲ್ಲಿ ಹೈಕುಗಳು ತುಂಬಾ ಪ್ರಸಿದ್ಧಿಯನ್ನು ಪಡೆದಿವೆ. ಭಾರತೀಯ ಅನೇಕ ಪ್ರಾದೇಶಿಕ ಭಾಷೆಗಳಲ್ಲಿ ಹೈಕುಗಳು ರಚನೆಯಾಗಿವೆ. 1916 ರಲ್ಲಿ ಮೊದಲಿಗೆ ರವೀಂದ್ರನಾಥ ಟ್ಯಾಗೋರ್ ಅವರು ಜಪಾನಿಗೆ ಭೇಟಿಯಿತ್ತಿದ್ದರು. ಅದರ ಫಲವಾಗಿ 'ಜಪಾನಿ ಜಾತ್ರೆ' ಎಂಬ ಪುಸ್ತಕದಲ್ಲಿ 'ಬಾಶೋ'ನ ಹೈಕುಗಳನ್ನು ಬಂಗಾಳಿ ಭಾಷೆಗೆ ಅನುವಾದಿಸಿದ್ದರು. ಆ ಮೂಲಕ ಭಾರತಕ್ಕೆ ಈ ಹೈಕುಗಳನ್ನು ಪರಿಚಯಿಸಿದಂತಾಯಿತು.

ಕನ್ನಡದಲ್ಲಿಯೂ ಅನೇಕರು ಹೈಕು ಬರೆದಿದ್ದಾರೆ. ಫಕ್ರುದ್ದಿನ ಬೆಂಗಳೂರು ಅವರು ಮೊಟ್ಟ ಮೊದಲ ಬಾರಿಗೆ ಹೈಕುವನ್ನು ಕನ್ನಡಕ್ಕೆ ದಕ್ಕುವಂತೆ ಮಾಡಿದವರು. ಜಪಾನಿ ಹೈಕುಗಳನ್ನು ಹಿಂದಿಗೆ, ಇಂಗ್ಲೀಷಗೆ ಮತ್ತು ಕನ್ನಡಕ್ಕೆ ಅನುವಾದ ಮಾಡಿದವರಲ್ಲಿ ಡಾ.ಕೆ.ಬಿ.ಬ್ಯಾಳಿ ಕೊಪ್ಪಳದ ಹಿರಿಯ ಕವಿಗಳು ಎಂಬುದನ್ನು ನೆನಪಿಟ್ಟುಕೊಳ್ಳಬೇಕು.

ಇತ್ತೀಚೆಗೆ ಸಾಮಾಜಿಕ ಜಾಲತಾಣಗಳಾದ ವಾಟ್ಸಪ್ ಮತ್ತು ಫೇಸುಬುಕ್‌ನಲ್ಲಿ ಅನೇಕರು ಹೈಕು ಮತ್ತು ತಾಂಕಾಗಳನ್ನು ಬರೆಯುತ್ತಿದ್ದಾರೆ. ಹೈಕು ಎಂದರೆ, ಕಾವ್ಯದ ಬೋನ್ಸಾಯ್ ಎಂದು ಕರೆಯುತ್ತಾರೆ. 31 ಮಾತ್ರೆಗಳ ಅಂದರೆ ಅಕ್ಷರಗಳ ಜಪಾನಿ ಕಾವ್ಯವೆಂದು ಹೆಸರಾಗಿರುವ ಹೈಕು ನಂತರ 17 ಮಾತ್ರೆಗಳಿಗೆ ಇಳಿಯಿತು. ಇದು ಜಪಾನಿನ ವಾಕಾ ಎಂಬ ಸಂಪ್ರದಾಯದ ರಚನೆ. ಬೌದ್ಧ ಮತ್ತು ಅಲ್ಲಿನ ಸ್ಥಳೀಯ ಶ್ರಮಣಧಾರೆಗಳ ಪ್ರಭಾವದಿಂದ ರೂಪ ಪಡೆದಿದ್ದು, 16ನೇ ಶತಮಾನಕ್ಕಿಂತ ಹಿಂದಿನಿಂದಲೂ ಜಪಾನಿನಲ್ಲಿ ಹೈಕು ಕಾವ್ಯ ಅನೇಕ ಸ್ಥಿತ್ಯಂತರಗಳನ್ನು ಹೊಂದುತ್ತ ಬಂದಿದೆ. ನಿರಂತರವಾಗಿ ನಿಸರ್ಗದ ನಡೆಯ ಜೊತೆಗೆ ತಳುಕು ಹಾಕಿಕೊಂಡು ಬಂದಿರುವ ಹೈಕು 'ಸ್ಮಾಲ್ ಈಜ್ ಬ್ಯೂಟಿಫುಲ್' ಎನ್ನುವ ತತ್ವವನ್ನು ತನ್ನ ಅಂತಃಸತ್ವವಾಗಿಸಿಕೊಂಡಿದೆ. ಇದು ಪಿಸುನುಡಿಯ ಕಾವ್ಯ. ಹೈಕುವಿನ ನಿಯಮ 5-7-5 ಅಕ್ಷರಗಳಲ್ಲಿಯೇ ಬರೆಯಬೇಕು.

ಹೈಕು ಮೇಲುನೋಟಕ್ಕೆ ಸರಳ ಎಂದಂತೆ. ಆದರೆ ಸುಲಭವಲ್ಲ. 17 ಮಾತ್ರೆಗಳ ರೂಪ. ಇದು ಇಬ್ಬನಿಯಲ್ಲಿ ಅಡಗಿದ ಹದಿನಾಕು ಲೋಕ. ಕಪ್ಪೆಯ ಕಣ್ಣಿನ ಆಕಾಶ, ಒಂದು ಕೈಯ ಚಪ್ಪಾಳೆ ಸದ್ದು, ನಾಲಗೆಯಿರದ ಗಂಟೆಯ ಢಣಢಣ. ಜಪಾನಿ ದೇಶದ ಹೈಕು, ಈಗ ಕಾಲ ದೇಶ ಮೀರಿ ಅನ್ಯ ಭಾಷೆಗಳಲ್ಲಿ ಗೂಡು ಕಟ್ಟಿಕೊಂಡಿದೆ. ಧ್ವನಿಸುವ ಅರ್ಥ, ಎಬ್ಬಿಸುವ ತರಂಗದಲೆಗಳು, ಹೊಳಹು, ಅದರ ಅಂತಃಸತ್ವ, ವಿಶಿಷ್ಟ ವಿಭಿನ್ನ. ಹಿರಿದನ್ನು ಕಿರಿದಾಗಿಸಿ ಹೇಳುವ ಪ್ರಕಾರ ನಮ್ಮ ಕನ್ನಡದಲ್ಲೂ ಇವೆ. ವಚನಗಳು, ಚುಟುಕುಗಳು, ಹನಿಗವನಗಳು, ತ್ರಿಪದಿಗಳು, ಹೀಗೆ ಬೇರೆ ಪ್ರಕಾರಗಳನ್ನು ಹೆಸರಿಸಿದರೂ ಹೈಕುಗಳು ಭಿನ್ನವಾಗಿ ನಿಲ್ಲುತ್ತವೆ. ಅನುಭವಗಳನ್ನು ಘನೀಕರಿಸಿ ಅದರ ಮೂಲಕ ಗೂಡಾರ್ಥಗಳನ್ನು ಹೊಳೆಯಿಸುವ ಮಾದರಿ ಅದು. ಮೂರೇ ಸಾಲಿನಲ್ಲಿ ಮಿಂಚಿನಂತೆ ಬೆಳಗುವ ರೀತಿಯೇ ಅದರ ಕಾವ್ಯಶಕ್ತಿ. ಸಿದ್ಧ ಅರ್ಥಗಳನ್ನು ಒಡೆದು ಕಾವ್ಯದ ಹೊಸ ಅರ್ಥದ ದಾರಿಗಳನ್ನು ತೆರೆಯುತ್ತದೆ. ಕೊಳದಲ್ಲಿ ಕಲ್ಲೊಂದು ಎಸೆದಾಗ ಅದು ಎಬ್ಬಿಸುವ ತರಂಗಗಳಂತೆ ಅದು ಓದುಗನ ಅರಿವಿನ ವಿಸ್ತಾರಕ್ಕೆ ತಕ್ಕಂತೆ ಬೇರೆ ಬೇರೆ ರೂಪಗಳನ್ನು ಪಡೆದುಕೊಳ್ಳುತ್ತದೆ. ಮೂರು ಸಾಲಿನ ಹೈಕು ಮನ ಸ್ಪರ್ಶಿಸಿ ಭಾವ ಮೂಡಿ, ತನ್ನ ಅರ್ಥ ಸಾಧ್ಯತೆಯನ್ನು ವಿಸ್ತರಿಸುತ್ತಾ ಹೋಗುತ್ತದೆ ಎಂಬುದು ರವೀಂದ್ರನಾಥ ಅವರ ಅಭಿಪ್ರಾಯ. ಸೋಜಿಗವೆಂದರೆ, ಕಾಲವನ್ನು ಒಳಗೊಂಡರೂ ಕಾಲಾತೀತವಾಗುವ ರೀತಿ ಹೈಕುವನು ಅಪರೂಪದ ಕಾವ್ಯ ಪ್ರಕಾರವಾಗಿಸಿದೆ.


ಮಹಿಪಾಲರೆಡ್ಡಿ ಮುನ್ನೂರ್
ಪತ್ರಕರ್ತ-ಲೇಖಕ
ಕಲಬುರಗಿ
ಮೊ:9131666052

ಇರುವೆಯ ಹೆಜ್ಜೆ ಸಪ್ಪಳವನ್ನೂ ಕೇಳಬಲ್ಲ ಸೂಕ್ಷ್ಮತೆ ಹೈಕುಗಳಲ್ಲಿ ಕಾಣಬಹುದು.

ಝೆನ್ ತತ್ವದ ಅಡಿಪಾಯದ ಮೇಲೆ 15 ನೇ ಶತಮಾನದಿಂದ ಅನೇಕ ಹೈಕು ಕವಿಗಳು ಹೈಕುಗಳನ್ನು ರಚಿಸಿದ್ದಾರೆ. ಹೈಕು ಪ್ರಾಚೀನ ಜಪಾನಿನ ಅಧ್ಯಾತ್ಮಿಕ ಮಟ್ಟದಲ್ಲಿ ಶಿಂಟೋ ಧರ್ಮ, ಬೌದ್ಧ ಧರ್ಮ, ಝೆನ್ ಧರ್ಮಗಳಿಂದ ನೇರವಾಗಿ ಪ್ರಭಾವಿತಗೊಂಡ ಪರಂಪರೆಯಾಗಿದೆ. ಜಪಾನಿಯರು ಹೈಕುಗಳನ್ನು ಶಾಸ್ತ್ರೀಯವಾಗಿ ಮೂರು ಸಾಲುಗಳಲ್ಲಿ 5-7-5 ಉಚ್ಚಾರಾಂಶ (ಸಿಲೆಬಲ್) ಗಳಿರುವಂತೆ ವಿಂಗಡಿಸಿ ಕಟ್ಟುನಿಟ್ಟಾಗಿ ಈ ನಿಯಮ ಪಾಲಿಸುತ್ತಾರೆ. ಮೊದಲ ಸಾಲು 5, ಎರಡನೇ ಸಾಲು 7 ಮತ್ತು ಮೂರನೇ ಸಾಲು 5 ಸಿಲೆಬಲ್‌ಗಳನ್ನು ಹೊಂದಿರುತ್ತವೆ. ಆದರೆ ಕೊನೆಯ ಸಾಲು ಓದುಗನಿಗೆ ಹೊಸ ತರಂಗಗಳನ್ನು ಎಬ್ಬಿಸುತ್ತವೆ. ಜಪಾನಿನ ಕಾವ್ಯ ಮೀಮಾಂಸೆಯಲ್ಲಿ ಇದನ್ನು ಸಂವೇಗ ಎನ್ನುತ್ತಾರೆ. ಜಪಾನ್ ನಲ್ಲಿನ ಬಾಶೊ, ಬುಸಾನ್, ಇಸ್ಸಾ, ಶಿಕಿ ಮೊದಲಾದ ಹೈಕು ಕವಿಗಳು ಪ್ರಸಿದ್ಧರಾದವರು. ಇವರ ಹೈಕುಗಳನ್ನು ಓದಿದಾಗ ಮಾತ್ರ ಹೈಕುವಿನ ಪರಿಚಯವಾಗುವುದು. ಇವರ ಹೈಕುಗಳನ್ನು ಇಂಗ್ಲೀಷ್ ನಲ್ಲಿ ಅನುವಾದಿಸಲಾಗಿದೆ. ಅವುಗಳನ್ನು ಹೈಕು ರಚನೆಕಾರರು

ಮೊದಲು ಓದಿಕೊಳ್ಳಬೇಕು. ಇಲ್ಲದಿದ್ದರೆ ಅದೊಂದು ಅಕ್ಷರ ಪೋಣಿಸುವುದಷ್ಟೇ ಕೆಲಸ ಎಂಬ ಮಟ್ಟಿಗೆ ಬಂದು ನಿಂತುಬಿಡುತ್ತದೆ. ಒಂದನ್ನು ನೆನಪಿಟ್ಟುಕೊಳ್ಳಬೇಕು, ಹೈಕು ಕೇವಲ ಮಾತ್ರಾ ನಿಯಮಗಳನ್ನಷ್ಟೇ ಬಯಸುವುದಿಲ್ಲ ಅದು ಧಾನಸ್ಥ ಸ್ಥಿತಿಯನ್ನು ಬಿಂಬಿಸುವ ಪ್ರಕಾರ. ಕವಿ ತನ್ನದೆಲ್ಲ ಅಹಂ ಕಳಚಿಟ್ಟು ಬಯಲಿನಲ್ಲಿ ಬಯಲಾಗಿ, ಆಧ್ಯಾತ್ಮ ಸ್ಥಿತಿಯನ್ನು ಬಿಂಬಿಸುವ ರೀತಿಯ ತಾದ್ಯಾತ್ಮತೆ ಇಲ್ಲಿ ಬೇಕು. ಮೊದಲ ಸಾಲಿನಲ್ಲಿ ವಿಷಯವನ್ನು ಹೇಳುತ್ತ, ಎರಡನೇ ಸಾಲಿನಲ್ಲಿ ಅದನ್ನು ವಿಸ್ತರಿಸುತ್ತಾ, ಕೊನೆಯ ಸಾಲಿನಲ್ಲಿ ಓದುಗನಿಗೆ ಒಂದು ಅಚ್ಚರಿ ಕಾದಿರಿಸುವುದರ ಜೊತೆಗೇ ಆತನಿಗೆ ಆ ಧ್ಯಾನಸ್ಥ ಸ್ಥಿತಿ ಒದಗುವಂತೆ ಮಾಡುವುದು ಹಾಯ್ಕುವಿನ ಗುಣ ಲಕ್ಷಣ. ಈ ರೀತಿ ದಕ್ಕುವುದು ಅಷ್ಟು ಸುಲಭವಲ್ಲ. ಹೀಗಾಗಿಯೆ ಅಕ್ಷರಗಳನ್ನು ಜೋಡಿಸಿದ ಮಾತ್ರಕ್ಕೆ ಅದು ಹೈಕುವಾಗಲಾರದು. ಪ್ರಕೃತಿಯೊಂದಿಗೆ ಒಂದಾಗುವ ಧ್ಯಾನಸ್ಥ ಸ್ಥಿತಿಯನ್ನು ಹಾಯ್ಕು ಬೇಡುತ್ತದೆ ಎಂಬುದು ಹಿರಿಯ ಲೇಖಕರಾದ ಶ್ರೀ ಸಿದ್ದರಾಮ ಹಿರೇಮಠ ಕೂಡ್ಲಿಗಿಯವರ ಪ್ರತಿಪಾದನೆಯಾಗಿದೆ. ಇಂತಹ ಹೊಸತನವಿರುವ ಕಾವ್ಯಲೋಕ ಎನಿಸಿರುವ ಹೈಕು ಕನ್ನಡವನ್ನು ಇನ್ನಷ್ಟು ಶ್ರೀಮಂತಗೊಳಿಸಬೇಕಿದೆ.

ಕಾದಂಬರಿ, ಕಥೆ, ಜೀವನ ಚರಿತ್ರೆ ಮತ್ತು ವೈಚಾರಿಕ ಬರಹಗಳ ಮೂಲಕ ನಾಡಿನ ಮಹತ್ವದ ಲೇಖಕರೆನಿಸಿಕೊಂಡಿರುವ ಪ್ರೊ.ಪೋತೆಯವರು ಬರೆದ ಅನೇಕ ವಿಷಯ, ವಸ್ತುಗಳ ಹೈಕುಗಳನ್ನು ನಾವಿಲ್ಲಿ ಗಮನಿಸಬಹುದು. ವೈವಿಧ್ಯಮಯ ಸಂಗತಿಗಳ ಕುರಿತು ಅವರು ಬರೆದಿದ್ದಾರೆ.

**ಅಸ್ಪೃಶ್ಯತೆಯೇ...**
**ನನ್ನ ನಿನ್ನ ನಡುವೆ**
**ಬಂಡೆಯಲ್ಲವೆ**

**ಅಪ್ಪ ಆಕಾಶ**
**ಅವ್ವ ಇಳೆ ನಾಟಿಗೆ**
**ಬೇಕಲ್ಲ ಮಳೆ**

**ವ್ಯಕ್ತಿ ವ್ಯಾಮೋಹ**
**ಭಯ-ದುಃಖದ ಮೂಲ**
**ನಿರ್ಮೋಹಿಗಲ್ಲ**

**ಅಕ್ಕರಬಂಧ**
**ನೀ ಬಿಡಿಸಿದ್ದಲ್ಲವೆ**
**ಅಕ್ಷರದವ್ವ**

**ಇವರಲ್ಲೇಕೆ**
**ಅವನು ಇವನು ಭಿನ್ನ**
**ತಾಳದು ಮನ**

ಜಪಾನಿನಲ್ಲಿ ಶಾಸ್ತ್ರೀಯವಾಗಿ ಬೆಳೆದ ಇನ್ನೊಂದು ಕಾವ್ಯ ಎಂದರೆ, ತಾಂಕಾ. ಟಂಕಾ, ಟ್ಯಾಂಕಾ, ತಂಕಾ, ತಾಂಕಾ ಹೀಗೆ ಕರೆಯುವ ತಾಂಕಾ ಆಧುನಿಕ ಜಪಾನೀಸ್ ಕಾವ್ಯ.

ಟ್ಯಾಂಕಾ ಎಂದರೆ, ಸಣ್ಣ ಕವಿತೆ. ಶಾಸ್ತ್ರೀಯ ಜಪಾನೀಸ್ ಕಾವ್ಯದ ಒಂದು ಪ್ರಕಾರವಾಗಿದೆ. ಜಪಾನೀಸ್ ಸಾಹಿತ್ಯದ ಪ್ರಮುಖ ಪ್ರಕಾರಗಳಲ್ಲಿ ಒಂದಾಗಿದೆ. ಪ್ರಾಯಶಃ, ಜಪಾನಿನ ಶಾಸ್ತ್ರೀಯ ಕಾವ್ಯ ಇತಿಹಾಸದಲ್ಲೇ ಪುರಾತನ ಗ್ರಂಥವೆನ್ನಬಹುದಾದ 'ಹ್ಯಾಕು-ನಿನ್-ಇಶ್ಶು' (ನೂರು ಜನರ ನೂರು ಪದ್ಯಗಳು) ಗ್ರಂಥವು ಸುಮಾರು ಕ್ರಿ.ಶ 1235 ರಲ್ಲಿ ಸದ್ಯೈಯ್ಯೇ ಫ್ಯುಜಿವಾರ ಎಂಬ ಮಹಾಕವಿಯಿಂದ ಸಂಪಾದಿಸಲ್ಪಟ್ಟಿತ್ತು. ಇದು ಇಂಗ್ಲಿಷ್ ಭಾಷೆಗೆ ಪ್ರಪ್ರಥಮವಾಗಿ ತರ್ಜುಮೆಗೊಂಡದ್ದು 1909 ರಲ್ಲಿ – ಇಂದಿಗೆ ಸರಿಸುಮಾರು 100 ವರ್ಷಗಳ ಹಿಂದೆ. ವಿಲಿಯಮ್ ಪೋರ್ಟರ್ ಎಂಬ ಮಹಾನುಭಾವನ ಕಠಿಣ ಪರಿಶ್ರಮದ ಫಲವಾಗಿ.

ಈ ಪ್ರಾಚೀನ ಹೊತ್ತಿಗೆಯಲ್ಲಿ ಫ್ಯುಜಿವಾರ ಅವರು ತನ್ನದೂ ಸೇರಿಸಿ ಒಟ್ಟು 100 ಕವಿಗಳ ಒಂದೊಂದು ಪ್ರಾತಿನಿಧಿಕ ಪದ್ಯಗಳನ್ನು ಕ್ರಿ.ಶ 1235 ರಲ್ಲಿ ಈ ಗ್ರಂಥವಾಗಿ ಪ್ರಕಟಿಸಿದ್ದಾನೆ. ಇದೊಂದು ಅತಿ ವಿಶಿಷ್ಟವಾದ ಸಂಪಾದಿತ ಕೃತಿ ಎಂದೇ ಹೇಳಬೇಕು. ಇದರಲ್ಲಿ ಕ್ರಿ.ಶ. 670 ರಲ್ಲಿ ಅಂದರೆ 7ನೇ ಶತಮಾನದಿಂದ ಆರಂಭಗೊಂಡು ಕ್ರಿ.ಶ 1235 ರಲ್ಲಿ ಅಂದರೆ 13 ನೇ ಶತಮಾನದವರೆಗಿನ ಸುಮಾರು 565 ವರ್ಷಗಳ ಕಾಲಘಟ್ಟದ ಕವನಗಳು ಸೇರಿವೆ. ಒಂದೊಂದು ಕವನಕ್ಕೂ ಒಂದೊಂದು ಆಕರ್ಷಕ ರೇಖಾಚಿತ್ರ ಇದೆ. ಅಷ್ಟು ಪುರಾತನವಾದರೂ ಇದು ಇಂದಿಗೂ ಜಪಾನಿನಲ್ಲಿ ಪ್ರಚಲಿತವಾಗಿ ಸಾಮಾನ್ಯರ ಓದಿನ ಒಂದು ಅವಿಭಾಜ್ಯ ಅಂಗವಾಗಿದೆ. ಅಲ್ಲದೆ, ಅವರ ಜೀವನದ ಮಧುರ ಕ್ಷಣಗಳೊಂದಿಗೆ, ಹಬ್ಬ ಹರಿದಿನಗಳೊಂದಿಗೆ, ಆಟ-ಪಾಠಗಳೊಂದಿಗೆ ಹಾಸುಹೊಕ್ಕಾಗಿದೆ. ಇವು ಜಗತ್ತಿನ ಎಲ್ಲೆಡೆ ಭಾಷಾಂತರಗೊಂಡು ಶಾಸ್ತ್ರೀಯ ಜಪಾನೀ ಕಾವ್ಯಕ್ಕೆ ಒಂದು ಪ್ರತೀಕವಾಗಿದೆ.

**ಸಾವಿರ ನದಿ**
**ಹೊಲೆಮಾದಿಗರ್ಥಾಡು**
**ಅನೇಕಲವ್ಯ**
**ಮನುಜರತ್ತ ಹೆಜ್ಜೆ**
**ಅಡಗಿಸಿತು ಕುಲ**

ವಿಶಿಷ್ಟ ತಾಂಕಾ ಬರೆದ ಪ್ರೊ.ಪೋತೆ ಅವರಿಗೆ ಅಭಿನಂದನೆ ಸಲ್ಲಿಸಬೇಕು. ತಂಕಾ ಪದ್ಯಗಳು ಗಾತ್ರದಲ್ಲಿ ಚಿಕ್ಕವು. ಬರೇ 5 ಗೆರೆಗಳ 5-7-5-7-7 ರಂತೆ ಒಟ್ಟು 31 ಮಾತ್ರೆಗಳುಳ್ಳ ಇವು ಹೈಕುಗಳಲ್ಲ. ಹೈಕುವಿನಲ್ಲಿ 5-7-5 ಮಾತ್ರೆಗಳಂತೆ ಒಟ್ಟು 17 ಮಾತ್ರೆಗಳು ಇರುತ್ತವೆ. ತಂಕಾ ಪ್ರಕಾರವು ಹೈಕುಗಳಿಂದಲೂ ಪುರಾತನವಾಗಿದೆ. ತಂಕಾ ಸುಮಾರು 1300 ವರ್ಷಗಳಷ್ಟು ಹಳೇಯದ್ದಾದರೆ, ಹೈಕುಗಳು ಕೇವಲ 300 ವರ್ಷಗಳಷ್ಟೇ ಹಳೇಯದು. ತಂಕಾಗಳು ಭಾವನಾತ್ಮಕವಾಗಿ, ಓದುಗನ ಕಲ್ಪನೆಗೆ ಗರಿಕಟ್ಟುವಂತೆ ಇರುತ್ತವಾದರೆ, ಹೈಕುಗಳು ಅನುಭವಜನ್ಯವಾದ, ಖಚಿತವಾದ ಚಿತ್ರಗಳನ್ನು ನೇರವಾಗಿ ಮನದಲ್ಲಿ ಮೂಡಿಸಿ ಓದುಗನನ್ನು ತಾತ್ವಿಕ ಚಿಂತನೆಗೆ ಹಚ್ಚುವಂತಿರುತ್ತವೆ.

ತಂಕಾ ಕಿಂಚಿತ್ತೂ ಚೀನೀ ಪದಗಳ ಪ್ರಭಾವವಿಲ್ಲದ, ಮೂಲತಃ ಜಪಾನೀಯ ಕಾವ್ಯ ಪ್ರಕಾರ. ಇದರಲ್ಲಿ ಪ್ರಾಸ, ಲಯ ಏನೇನೂ ಇಲ್ಲ. ಪುಟ್ಟ ಪದಗಳು ಹಾಗೂ ಮಾತ್ರೆಗಳ ಲೆಕ್ಕದೊಂದಿದೆ ಛಂದೋಬದ್ಧವಾಗಿವೆ.

ಅಂದಿನದ್ದು ರಾಜರೂ, ಆಸ್ಥಾನ ಪಂಡಿತರೂ ಮಾತ್ರ ಕಾವ್ಯರಚನೆ ಮಾಡುತ್ತಿದ್ದ ಕಾಲ; ಕಾವ್ಯ ಜನ ಸಾಮಾನ್ಯರ ಕಿವಿಗೂ ಬೀಳದಿರುತ್ತಿದ್ದ ಕಾಲ. ಈ ಚುಟುಕುಗಳು ಅಥವಾ ಕವನಗಳು ಜೀವನದ ಸಣ್ಣ ಪುಟ್ಟ ದೃಶ್ಯಗಳ ಚಿತ್ರಣವೇ ಆಗಿದ್ದು ಅವುಗಳ ಕೇಂದ್ರದಲ್ಲಿ ಇರುವುದು ಪ್ರೀತಿ ಅಥವಾ ಪ್ರೇಮ. ಅತ್ಯಂತ ಹೃದಯಂಗಮಯವಾಗಿಯೂ, ಧ್ವನಿಪೂರ್ಣವಾಗಿಯೂ, ಅತಿ ತೀವ್ರವಾಗಿ ತಟ್ಟುವ ಈ 'ತಂಕಾ' ಕವನಗಳು ಇಂದಿಗೂ ಜಪಾನೀಯರ ಮನದಲ್ಲಿ ಮನೆಮಾಡಿವೆ. ಈ ಪದ್ಯಗಳು ಶಬ್ದಗಳ ಮೂಲಕ ಪ್ರಕೃತಿಯ ಸಣ್ಣ ಸಣ್ಣ ಚಿತ್ರಗಳನ್ನು ಕಟ್ಟಿಕೊಡುತ್ತವೆ.

ಕ್ರಿ.ಶ 1155 ಯಲ್ಲಿ ತೀರಿಕೊಂಡ ಅಕಿ-ಸುಕೆ , 12 ನೇ ಶತಮಾನದ ಕೊನೆಯಲ್ಲಿ ಬಾಳಿದ ಜಾರು-ರೆನ್ , ಕ್ರಿ.ಶ 1237 ರಲ್ಲಿ ತೀರಿಕೊಂಡ ಇಯೆ-ತಾಕ , ತೆಂಚಿ (ಕ್ರಿ.ಶ 668-671) , ಮಹಾರಾಣಿ ಜಿತೋ (ಕ್ರಿ.ಶ 690-696), ಸುರ-ಯುಕಿ (ಕ್ರಿ.ಶ 884-946) ತಾಂಕಾ ಬರೆದ ಗಣ್ಯರು. 13 ಶತಮಾನಗಳ ಹಿಂದೆ ಪುಟ್ಟ ಪುಟ್ಟ ಸಾಲಿನಲ್ಲಿ ಕಟ್ಟಿ ಕೊಟ್ಟಿರುವ ಭಾವ ಇಂದಿಗೂ ನಮ್ಮನ್ನು ಬೆರಗುಗೊಳಿಸುತ್ತವೆ, ಮನಗಳನ್ನು ಅರಳಿಸುತ್ತವೆ. ಇದೇ ಈ ತಾಂಕಾ ಕಾವ್ಯದ ಶಕ್ತಿ.

ಮೂಲತಃ ಮನ್ಯಾಶ (ಕ್ರಿ.ಶ. ಎಂಟನೇ ಶತಮಾನದ ಉತ್ತರಾರ್ಧದಲ್ಲಿ), ಟ್ಯಾಂಕಾ ಎಂಬ ಪದವನ್ನು ವಿಸಣ್ಣ ಕವಿತೆಗಳನ್ನುಹಿ ಉದ್ದವಾದ ಚಕಾದಿಂದ (ವಿದೀರ್ಘ ಕವನಗಳುಹಿ) ಪ್ರತ್ಯೇಕಿಸಲು ಬಳಸಲಾಗುತ್ತಿತ್ತು. ಆದಾಗ್ಯೂ, ಒಂಬತ್ತನೇ ಮತ್ತು ಹತ್ತನೇ ಶತಮಾನಗಳಲ್ಲಿ, ಮುಖ್ಯವಾಗಿ ಕೋಕಿನ್‌ಶೂ ಸಂಕಲನದೊಂದಿಗೆ, ಸಣ್ಣ ಕವಿತೆಯು ಜಪಾನ್‌ನಲ್ಲಿ ಕಾವ್ಯದ ಪ್ರಬಲ ರೂಪವಾಯಿತು, ಮತ್ತು ಮೂಲತಃ ಸಾಮಾನ್ಯ ಪದವಾದ ವಾಕಾ ಈ ರೂಪಕ್ಕೆ ಪ್ರಮಾಣಿತ ಹೆಸರಾಯಿತು. ಜಪಾನಿನ ಕವಿ ಮತ್ತು ವಿಮರ್ಶಕ ಮಸೋಕಾ ಶಿಕಿ ಇಪ್ಪತ್ತನೇ ಶತಮಾನದ ಆರಂಭದಲ್ಲಿ ವಕಾವನ್ನು ನವೀಕರಿಸಬೇಕು ಮತ್ತು ಆಧುನೀಕರಿಸಬೇಕು ಎಂಬ ಹೇಳಿಕೆಗಾಗಿ

ಟ್ಯಾಂಕಾ ಎಂಬ ಪದವನ್ನು ಪುನರುಜ್ಜೀವನಗೊಳಿಸಿದರು. ಹೈಕು ಅವರ ಆವಿಷ್ಕಾರದ ಪದವಾಗಿದೆ, ಅದೇ ಆಲೋಚನೆಯೊಂದಿಗೆ ಇದನ್ನು ಸ್ವತಂತ್ರ ಹೊಕ್ಕುವಿನ ಪರಿಷ್ಕರಣೆಗೆ ಬಳಸಲಾಗುತ್ತದೆ.

ವೇಣುಗೋಪಾಲ ಸೊರಬ ಅವರು ತಂಕಾ ಬರೆದಿದ್ದಾರೆ. ಆದರೆ ಅವರ ಪುಸ್ತಕ ದೊರಕಿಲ್ಲ ಎಂಬ ಕೊರಗಿದೆ. ಕೊಪ್ಪಳದ ಹಿರಿಯ ಲೇಖಕರಾಗಿರುವ ಡಾ.ಕೆ.ಬಿ.ಬ್ಯಾಳಿ ಅವರು ತಂಕಾ ಬಗ್ಗೆ ಅಧ್ಯಯನ ಮಾಡಿದ್ದಲ್ಲದೇ, 'ಅರುಹು ಕುರುಹು' ಸಂಕಲನದಲ್ಲಿ ತಂಕಾ ಬಗ್ಗೆ ಲೇಖನವೊಂದು ಬರೆದು, ಪ್ರಯೋಗ ಮಾಡಿರುವುದಾಗಿ ಬರೆದುಕೊಂಡಿದ್ದಾರೆ. ಕನ್ನಡ ಪ್ರಾಧ್ಯಾಪಕರಾದ ಕಲಬುರಗಿಯ ಡಾ.ಮಲ್ಲಿನಾಥ ತಳವಾರ ಅವರು ಕೂಡ ತಂಕಾ ಬಗ್ಗೆ ಲೇಖನ ಬರೆದಿದ್ದಾರೆ. ನನ್ನ 'ಇತಿ ನಿನ್ನ ಮೈನಾ', ಬೀದರಿನ ಪ್ರೇಮಾ ಹೂಗಾರ ಅವರ 'ಹಕ್ಕಿಗೂಡು', ಪ್ರೊ. ವಿಜಯಕುಮಾರ ಪರೂತೆ ಹಾಗೂ ಡಾ.ನಾಗೇಂದ್ರ ಮಸೂತಿ ಅವರ ತಾಂಕಾ ಸಂಕಲನಗಳು ಬಿಡುಗಡೆಯಾಗಿವೆ. ಲೇಖಕಿ ಆರತಿ ಕಡಗಂಚಿ ಅವರ ಹೈಕು ಮತ್ತು ತಾಂಕಾ ಸಂಕಲನ ಸದ್ಯದಲ್ಲಿಯೇ ಪ್ರಕಟವಾಗಲಿವೆ. ಹೊಸತನದ ಬರಹ ತುಡಿತ ಮತ್ತು ಅತ್ಯಾಸಕ್ತಿಯನ್ನು ತೋರಿ, ಹೈಕು ಮತ್ತು ತಾಂಕಾ ಬರಹದ ಹೊಸ ಪ್ರಯೋಗಕ್ಕೆ ಕೈಹಾಕಿದ್ದಾರೆ.

ಭಾಷೆಯಲ್ಲಿ ನವುರು ಮತ್ತು ಸೊಗಸು.. ಅಧ್ಯಯನಯುಕ್ತ ಹಾಗೂ ಕಥನ ರೂಪದ ಹೈಕು ಮತ್ತು ತಾಂಕಾ ಬರೆಯುತ್ತಿರುವ ಪ್ರೊ.ಎಚ್.ಟಿ.ಪೋತೆ ಅವರ ಈ ಜಪಾನಿ ಕಾವ್ಯದ ಬರಹವನ್ನು ಪ್ರೀತಿಯಿಂದ ಆಸ್ವಾದಿಸೋಣ.







# ಬದುಕಿನ ಕೆಂಡಗಳನ್ನು ತಣ್ಣಗೆ ಹಾಯುವ ಕಥನ




ಎಚ್.ಟಿ. ಪೋತೆಯವರು ಜಾನಪದ ಸಾಹಿತ್ಯದಲ್ಲಿ ಕೃಷಿ ಮಾಡುತ್ತಲೇ ಕಥೆ ಮತ್ತು ವೈಚಾರಿಕ ಬರಹಗಳ ಮೂಲಕ ಗುರುತಿಸಿಕೊಂಡಿದ್ದಾರೆ. ವಿಶೇಷವಾಗಿ ಅಂಬೇಡ್ಕರ್‌ರವರ ಚಿಂತನೆಗಳ ಬಗೆಗೆ ತಲಸ್ಪರ್ಶಿಯಾದ ಅಧ್ಯಯನ ಮಾಡಿದ್ದಾರೆ. ಶತಶತಮಾನಗಳಿಂದ ಶೋಷಣೆಗೊಳಗಾಗಿ ನಲುಗಿದ ದಮನಿತ ವರ್ಗದವರಲ್ಲಿ ಸಾಹಿತ್ಯದ ಮೂಲಕ ಆತ್ಮವಿಶ್ವಾಸವನ್ನು ಹೊಸ ಅರಿವನ್ನು ಮೂಡಿಸಲು ಶ್ರಮಿಸುತ್ತಿದ್ದಾರೆ.

ಕನ್ನಡ ಕಾದಂಬರಿ ಲೋಕಕ್ಕೆ ಇತ್ತೀಚೆಗೆ ಸೇರ್ಪಡೆಯಾದ ಅವರ "ಬಯಲೆಂಬೊ ಬಯಲು" ತುಂಬ ವಿಶಿಷ್ಟ ಮತ್ತು ಮಹತ್ವದ ಕೃತಿ. ಇದೊಂದು ಬಯೋಪಿಕ್ ಕಾದಂಬರಿ. ಇಲ್ಲಿನ ಕಥಾನಕ ಅವರ ಕುಟುಂಬದ್ದೇ ಎನಿಸಿದರೂ ಸಾಮುದಾಯಿಕ ಕಥನವಾಗಿ ಗಮನ ಸೆಳೆಯುತ್ತದೆ. ಮೂರು ತಲೆಮಾರುಗಳ ದಲಿತರ ಜೀವನಾನುಭವಗಳ ಒಳತೋಟಿಯನ್ನು ಎಳೆಎಳೆಯಾಗಿ ತೆರೆದಿಡುವ ಈ ಕಾದಂಬರಿಯನ್ನು ಒಂದೇ ಉಸಿರಿಗೆ ಓದಲು ಸಾಧ್ಯವಿಲ್ಲ. ಮೇಲ್ವರ್ಗದವರಿಂದ ಅವಮಾನಕ್ಕೊಳಗಾದ ಇಲ್ಲಿನ ಪಾತ್ರಗಳ ಸಂಕಟಗಳು, ಮೂಕವಾಗಿ ಉಂಡ ಅಮಾನವೀಯ ಸನ್ನಿವೇಶಗಳು, ಮೋಸದ ಪ್ರಸಂಗಗಳು ಓದುಗರನ್ನು ತಲ್ಲಣಕ್ಕೀಡುಮಾಡುತ್ತವೆ. ಆಲೋಚನೆಗೆ ಹಚ್ಚಿ ಕಾಡುತ್ತವೆ.



ಡಾ. ದಸ್ತಗೀರಸಾಬ್ ದಿನ್ನಿ
ಎಂ.ಎ. ನಭೀ, 1ನೇ ಕ್ರಾಸ್, ಶಾಸ್ತ್ರಿ ನಗರ, ಟಿ.ಜಿ.ಬಿ. ಕಾಲೋನಿ, ಬಳ್ಳಾರಿ.

ಕಾದಂಬರಿಯಲ್ಲಿ ಬಡತನದ ಚಿತ್ರಣವಿದೆ. ಅವಮಾನದಿಂದ ಎದ್ದು ನಿಂತ ಬದುಕನ್ನು ಸ್ವಾಭಿಮಾನ ಛಲದಿಂದ ಕಟ್ಟಿಕೊಂಡ ಎದೆಗಾರಿಕೆ ಇದೆ. ಎಂತಹ ಸಂದರ್ಭದಲ್ಲೂ ವಿಘಟನೆಗೆ ಒಳಗಾಗದೆ ಪ್ರೀತಿ ವಿಶ್ವಾಸವನ್ನು ಉಸಿರಾಡುವ ಅವಿಭಕ್ತ ಕುಟುಂಬದ ಆದರ್ಶ ಜಗತ್ತೊಂದು ತೆರೆದುಕೊಂಡಿದೆ. ಕಾದಂಬರಿಯುದ್ದಕ್ಕೂ ತಲೆಮಾರಿನಿಂದ ತಲೆಮಾರಿನಲ್ಲಾದ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸ್ಥಿತಿಗತಿಗಳ ಪಲ್ಲಟಗಳನ್ನು ಮಾನವೀಯ ನೆಲೆಯಲ್ಲಿ ಹಿಡಿದಿಟ್ಟಿದ್ದಾರೆ. ಲೇಖಕರ ಈ ಆಲೋಚನಾ ಕ್ರಮದ ಹಿಂದೆ ಅಂಬೇಡ್ಕರ್‌ರವರ ಚಿಂತನಧಾರೆ, ಹೋರಾಟದ ಬದುಕು, ದಾರಿದೀಪವಾಗಿ ಜೀವಸೆಲೆಯಾಗಿ, ಆದರ್ಶವಾಗಿ ಮುನ್ನಡೆಸಿದೆ. ಲೇಖಕರು ಅನಾವರಣಗೊಳಿಸಿದ ಅಧೋ ಜಗತ್ತಿನ ಲೋಕ ನಮ್ಮ ಸಾಮಾಜಿಕ ವ್ಯವಸ್ಥೆಯ ಹುನ್ನಾರಗಳನ್ನು ಬಹಳ ಸೂಕ್ಷ್ಮವಾಗಿ ಬಯಲು ಮಾಡುವಲ್ಲಿ ಯಶಸ್ವಿಯಾಗಿದೆ.

ಲೇಖಕರಿಗೆ ಅಂಬೇಡ್ಕರ್‌ವಾದದ ತಾತ್ವಿಕತೆ, ಹೋರಾಟದ ಬದುಕಿನ ಪರಿಕಲ್ಪನೆ, ವ್ಯಾಪಕ ಓದಿನ ಅರಿವು, ಬದುಕಿನ ಕೆಂಡಗಳನ್ನು ಹಾಯುತ್ತಲೇ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುವುದನ್ನು ಕಲಿಸಿದೆ. ಪ್ರಧಾನವಾಗಿ ಸಮಾನತೆಗಾಗಿ ಹಂಬಲಿಸುವ, ಸಮಾಜದ ಮುಖ್ಯವಾಹಿನಿಯತ್ತ ಸಾಗುವ, ಗುರಿ ಮುಟ್ಟುವ, ಆತ್ಮ ಬಲವನ್ನು ತುಂಬುವುದು ಕಾಣಸಿಗುತ್ತವೆ. ದಲಿತ ಲೋಕದ ಅವಮಾನದ ಚಹರೆಗಳು, ಹೊಸ ಸಮಾಜದ ಬಗೆಗಿನ ಚಡಪಡಿಕೆಗಳು, ವರ್ತಮಾನದ ಬಿಕ್ಕಟ್ಟುಗಳು, ಮಾನವೀಯ ವಿಸ್ತಾರದ ಮನೋವಿನ್ಯಾಸಗಳು ಈ ಕಾದಂಬರಿಗೆ ಒಂದು ವಿಸ್ತೃತವಾದ ಭಿತ್ತಿಯನ್ನು ಒದಗಿಸಿವೆ.

ಮೊದಲ ತಲೆಮಾರಿನ ರಾಮಪ್ಪನ ಬದುಕಿನ ಕಥೆಯೊಂದಿಗೆ ಇಲ್ಲಿನ ಕಥನ ಬಿಚ್ಚಿಕೊಳ್ಳುತ್ತದೆ. ಸ್ವಾಭಿಮಾನ, ಧೈರ್ಯ, ಕಾಯಕ ಪ್ರಜ್ಞೆ, ಸಮುದಾಯಕ್ಕಾಗಿ ಮಿಡಿವ ಗುಣದಿಂದಾಗಿ ರಾಮಪ್ಪನವರ ವ್ಯಕ್ತಿತ್ವ ಸೂಜಿಗಲ್ಲಿನಂತೆ ಓದುಗರನ್ನು ಸೆಳೆಯುತ್ತದೆ. ಎರಡನೆಯ ತಲೆಮಾರಿನ ತಿಪ್ಪಣ್ಣನವರು ಬದುಕನ್ನು ಭದ್ರಗೊಳಿಸಲು ಹೆಣಗುತ್ತಲೇ ಮಕ್ಕಳನ್ನು ಅಕ್ಷರದ ಅರಿವಿನ ಬೆಳಕಿಗೆ ಕರೆದುಕೊಂಡು ಬರಲು ತೋರಿದ ದಿಟ್ಟತನ, ಎದುರಿಸಿದ ಸಾಮಾಜಿಕ ಸಂಘರ್ಷದಿಂದಾಗಿ ಓದುಗರ ಪ್ರೀತಿಗೆ ಪಾತ್ರರಾಗುತ್ತಾರೆ. ಮೂರನೆಯ ತಲೆಮಾರಿನ ಹನುಮನಲ್ಲಿ ಎರಡೂ ತಲೆಮಾರಿನ ಗುಣಗಳು ಮೇಳೈಸಿವೆ. ಜೊತೆಗೆ ವರ್ತಮಾನದ ದಂದುಗಗಳಿಗೆ ಕಣ್ಣು, ಕಿವಿಯಾಗುತ್ತಲೇ ಸಮುದಾಯಕ್ಕಾಗಿ ಮಿಡಿಯುವುದು, ಅನ್ಯಾಯದ ವಿರುದ್ಧ ತಣ್ಣಗೆ ಪ್ರತಿರೋಧ ಒಡ್ಡುವುದು, ಅಕ್ಷರದ ಬೆಳಕಿನ ಮೂಲಕ ಹಂತ ಹಂತವಾಗಿ ಮೇಲೆ ಬರುವುದು ಕಾದಂಬರಿಗೆ ಒಂದು ಹೊಸ ಆಯಾಮವನ್ನು ಒದಗಿಸಿದಂತಾಗಿದೆ.

ಕಾದಂಬರಿಯಲ್ಲಿ ಬರುವ ಪಾತ್ರಗಳು ಎಂತಹ ಸಂದರ್ಭದಲ್ಲೂ ಬದುಕಿಗೆ ವಿಮುಖರಾಗದೇ ಛಲ ಹೊತ್ತು ಸಾಗುವ, ಎಲ್ಲ ಬಗೆಯ ದಮನಗಳಿಂದ ಮುಕ್ತರಾಗಲು ಹಂಬಲಿಸುವ ಆತ್ಮಸ್ಥೈರ್ಯ ಕುಂದದಂತೆ ಜೀವನೋತ್ಸಾಹವನ್ನು ಪ್ರಕಟಿಸುವ ಬಗೆ ಹೆಮ್ಮೆಯನ್ನು ಮೂಡಿಸುವಂತಿದೆ. ಮಹಿಳಾ ಪಾತ್ರಗಳಾದ ಲಗಸೆವ್ವ ಮತ್ತು ಅಂಬವ್ವರು ತಮ್ಮ ಜವಾಬ್ದಾರಿಗಳನ್ನು ನಿಭಾಯಿಸುತ್ತಲೇ ತಾಯ್ತನ, ಮಾನವೀಯತೆಯ ವ್ಯಕ್ತಿತ್ವದ ಮೂಲಕ ವಿಶೇಷ ಗಮನವನ್ನು ಸೆಳೆಯುತ್ತಾರೆ.

ಎಚ್.ಟಿ.ಪೋತೆಯವರು ತಮ್ಮ ಸಂವೇದನೆಗಳನ್ನು ಅಕ್ಷರ ರೂಪಕ್ಕೆ ಇಳಿಸಿ, ಓದುಗರಿಗೆ ದಾಟಿಸುವ, ಅಭಿವ್ಯಕ್ತಿಯ ರೂಪ ಮತ್ತು ವಿಧಾನದಿಂದಾಗಿ ಯಶಸ್ವಿಯಾಗಿದ್ದಾರೆ. ಎಲ್ಲೂ ಭಾವುಕತೆಯಿಂದ ಭಾರವಾಗದೆ ಸಹಜವಾಗಿ ಕಥನ ಕಲೆಯನ್ನು ನಿರ್ವಹಿಸಿದ ಇಲ್ಲಿನ ಶೈಲಿ, ತಂತ್ರ, ಬಳಸಿದ ವಿಜಯಪುರದ ಜವಾರಿ ಭಾಷೆ ಓದಿಸಿಕೊಂಡು ಹೋಗುವ ಗುಣದಿಂದಾಗಿ ಈ ಕಾದಂಬರಿ ತುಂಬಾ ಆಪ್ತವೆನಿಸುತ್ತದೆ. ಇಂತಹ ಅಪರೂಪದ ತೀವ್ರ ಸಂವೇದನೆಯ ಕಾದಂಬರಿಯನ್ನು ಸಾಹಿತ್ಯ ಲೋಕ ಪ್ರೀತಿಯಿಂದ ಬರಮಾಡಿಕೊಳ್ಳುವ, ಚರ್ಚಿಸುವ ಜರೂರಿದೆ.

**ಪ್ರಸ್ತುತ ಲೇಖನವು ಪ್ರಜಾವಾಣಿ ಪತ್ರಿಕೆಯ ಭಾನುವಾರ ಪುರವಣಿಯಲ್ಲಿ ಪ್ರಕಟಗೊಂಡಿದೆ.**



# ಪ್ರೊ.ಎಚ್.ಟಿ.ಪೋತೆಯವರ ವೈಚಾರಿಕ ನಿಲುವುಗಳು

**ಜಡ ಸಂಸ್ಕೃತಿಯ ತೆಕ್ಕೆಯಲ್ಲಿ ಬೆಂದು ಹೋಗಿದ್ದ ಬಹುಸಂಖ್ಯಾತ ವರ್ಗ ವಸಾಹತು ಕಾಲದಲ್ಲಿ ಅಕ್ಷರ ಸಂಸ್ಕೃತಿಯ ತೆಕ್ಕೆಗೆ ಬಂದ ಮಹಿಳೆಯರು, ದಲಿತರು, ಶೂದ್ರರು ಹೊಸದೊಂದು ಜಗತ್ತಿಗೆ ಪದಾರ್ಪಣೆ ಮಾಡಿದರು. ಈ ರೀತಿಯ ಹಲವು ಕಾರಣಗಳಿಂದಾಗಿ ಗ್ರಾಮಾಂತರ ಜನತೆಯ ಬದುಕಿನಲ್ಲಿ ಒಂದು ರೀತಿಯ ಹೊಸ ಬದಲಾವಣೆ ಆದದ್ದು ಗಮನಾರ್ಹ ಸಂಗತಿ.**

ವೈಚಾರಿಕತೆ ಎಂಬುದು ಒಬ್ಬ ಮನುಷ್ಯನ ಜನ್ಮದೊಂದಿಗೆ ಜನ್ಮತಾಳುತ್ತದೆ. ಎಳೆಯ ಕೂಸು ತೊಟ್ಟಿಲಲ್ಲಿ ಮಲಗಿ ಕುತೂಹಲದಿಂದ ಹೊರಜಗತ್ತನ್ನು ಗಮನಿಸುವುದರೊಂದಿಗೆ ಜ್ಞಾನಕ್ಕೆ ಮತ್ತು ವಿಚಾರ ವಂತಿಕೆಗೆ ನಾಂದಿಯಾಗುತ್ತದೆ ಎನ್ನಬಹುದು. ಕೊನೆಗೆ ಬುದ್ಧಿ ಮತ್ತು ಪಕ್ವತೆಗಳು ಬೆಳೆಯುತ್ತ ಹೋದಂತೆ ಪ್ರಶ್ನಾರ್ಥಕತೆ ಮತ್ತು ವಿಮರ್ಶಾತ್ಮಕತೆಗಳು ಗಟ್ಟಿಗೊಳ್ಳುತ್ತ ಹೋಗುತ್ತವೆ. ಜೊತೆಗೆ ಒಂದಿಷ್ಟು ಒಳ್ಳೆಯ ಸಂಸ್ಕಾರ ಮತ್ತು ಹೆಚ್ಚಿನ ಅರಿವು ಪ್ರಾಪ್ತವಾದರೆ ಅದು ತನ್ನ ವೈಚಾರಿಕತೆಯನ್ನು ಗಟ್ಟಿಗೊಳಿಸಿಕೊಳ್ಳುತ್ತ ಹೋಗುತ್ತದೆ. ಇದನ್ನು ನೋಡಿದಾಗ ವ್ಯಕ್ತಿಯೋರ್ವನ ಮನಸ್ಥಿತಿ ಸಮಕಾಲೀನ ಸಾಮಾಜಿಕ, ಆರ್ಥಿಕ ಪರಿಸ್ಥಿತಿ ಮತ್ತು ಶೈಕ್ಷಣಿಕ ವಾತಾವರಣಗಳು ವೈಚಾರಿಕತೆಯಿಂದ ಕೇಂದ್ರಸ್ಥಾನಗಳೆಂಬುದು ಕಂಡುಬರುತ್ತದೆ. ವೈಚಾರಿಕತೆ ಎಂಬುದು ಒಂದು ಬಗೆಯ ಚಿಂತನಶೀಲತೆ, ಅದು ತನ್ನ ಮತ್ತು ಇತರರ ಒಳಿತಿಗೆ ಪೂರಕವಾಗಬಲ್ಲ ಒಟ್ಟು ಪರಿಸರವನ್ನು ಬಯಸುತ್ತದೆ. ಹೀಗಾಗಿ ವೈಚಾರಿಕತೆಯ ವ್ಯಾಪಕತೆ ಹೆಚ್ಚುತ್ತ ಹೋಗುತ್ತದೆ. ಮನುಷ್ಯ ಬದುಕಿನ ಆರಂಭದಿಂದ ಹಿಡಿದು ಅಂತ್ಯದವರೆಗಿನ ಎಲ್ಲ ವಸ್ತುವಿಷಯ ಮತ್ತು ಸಂದರ್ಭಗಳು ವೈಚಾರಿಕತೆಯ ತೆಕ್ಕೆಯಲ್ಲಿ ಕಂಡುಬರುತ್ತವೆ. ಅದರಲ್ಲಿ ಲಿಂಗ, ಜಾತಿ, ಅಂತಸ್ತು, ವರ್ಗ, ವರ್ಣ, ಶಿಕ್ಷಣ, ಸಾಹಿತ್ಯ, ಸಮಾಜ, ಧರ್ಮ, ವಿಚಾರಧಾರೆಗಳು ಇವೆ ಮುಂತಾದ ಹಲವು ಹತ್ತು ವಿಷಯಗಳು ಎಡೆ ಪಡೆಯುತ್ತವೆ. ಹಾಗೆ ನೋಡಿದರೆ, ವೈಚಾರಿಕತೆಯ ವ್ಯಾಪ್ತಿಯಿಂದ ಹೊರಗುಳಿಯ ಬಹುದಾದ ವಸ್ತುವಾಗಲಿ, ವಿಷಯವಾಗಲಿ ಈ ಪ್ರಪಂಚದಲ್ಲಿ ಇಲ್ಲವೆಂದೇ ಹೇಳಬಹುದು. ಮನುಷ್ಯನ ಬದುಕಿನಲ್ಲಿ



ಡಾ. ಎಂ.ಬಿ. ಕಟ್ಟಿ
ಕನ್ನಡ ಅಧ್ಯಯನ ಸಂಸ್ಥೆ
ಗುಲಬರ್ಗಾ ವಿಶ್ವವಿದ್ಯಾಲಯ,
ಕಲಬುರಗಿ
ಮೊ: 9886 19679

ವಿಚಾರದಿಂದಲೇ ಬದಲಾವಣೆ, ವಿಚಾರದಿಂದಲೇ ಬೆಳಕು, ಬಹುಶಃ ವೈಚಾರಿಕತೆ ಎಂಬುದು ಒಂದು ಬಗೆಯ ಬಂಡಾಯವಿದ್ದಂತೆ. ಜಿಡ್ಡುಗಟ್ಟಿರುವ ಯಾವುದನ್ನೇ ಆದರೂ ಅದು ಪ್ರಶ್ನಿಸಬಲ್ಲದು ಮತ್ತು ಉತ್ತಮಿಕೆಯ ಪರಿಹಾರೋಪಾಯಗಳನ್ನು ಸೂಚಿಸಬಲ್ಲದು. ಒಳಹೊಕ್ಕು ನೋಡಿದಾಗ ವೈಚಾರಿಕತೆಯು ಧರ್ಮ ಮತ್ತು ವಿಜ್ಞಾನಕ್ಕೂ ಅತ್ಯಂತ ಸಮೀಪವಾಗಿರುವುದು ಕಂಡುಬರುತ್ತದೆ. ಆದರೆ ಕೆಲವರು ಈ ಸೂಕ್ಷ್ಮತೆಯನ್ನು ತಿಳಿಯದೆ ಧರ್ಮವನ್ನು ವೈಚಾರಿಕತೆಯಿಂದ ದೂರವಿಟ್ಟು ಪ್ರತಿಪಾದಿಸುತ್ತಾರೆ. ಅದು ಸಮಾಜಕ್ಕೆ ಹಾನಿಕಾರಕ ವಾದುದು. ಒಟ್ಟಾರೆ ಒಂದು ಸಮಾಜದ ಶಿಕ್ಷಣ, ಸಾಹಿತ್ಯ, ನಂಬಿಕೆ ಆಚರಣೆ, ಮೌಲ್ಯ, ಧರ್ಮ, ರಾಜಕೀಯ, ಆರ್ಥಿಕ ಮೊದಲಾದ ವಿಚಾರಗಳು ಸ್ವಸ್ಥವಾಗಿವೆ ಎಂದರೆ ಅಲ್ಲಿ ವೈಚಾರಕತೆಯೇ ಕಾರ್ಯಪ್ರವೃತ್ತವಾಗಿದೆ ಎಂದೇ ಅರ್ಥ.

ಜಡ ಸಂಸ್ಕೃತಿಯ ತೆಕ್ಕೆಯಲ್ಲಿ ಬೆಂದು ಹೋಗಿದ್ದ ಬಹುಸಂಖ್ಯಾತ ವರ್ಗ ವಸಾಹತು ಕಾಲದಲ್ಲಿ ಅಕ್ಷರ ಸಂಸ್ಕೃತಿಯ ತೆಕ್ಕೆಗೆ ಬಂದ ಮಹಿಳೆಯರು, ದಲಿತರು, ಶೂದ್ರರು ಹೊಸದೊಂದು ಜಗತ್ತಿಗೆ ಪದಾರ್ಪಣೆ ಮಾಡಿದರು. ಈ ರೀತಿಯ ಹಲವು ಕಾರಣಗಳಿಂದಾಗಿ ಗ್ರಾಮಾಂತರ ಜನತೆಯ ಬದುಕಿನಲ್ಲಿ ಒಂದು ರೀತಿಯ ಹೊಸ ಬದಲಾವಣೆ ಆದದ್ದು ಗಮನಾರ್ಹ ಸಂಗತಿ. ಭೌತಿಕ ಬದಲಾವಣೆಗೆ ಪೂರಕವಾದ ಸಂಗತಿಗಳು ಅನೇಕ. ಕೆ.ವಿ. ಪುಟ್ಟಪ್ಪನವರ ಬರಹದಲ್ಲಿ ಮೂಡಿಬಂದ ಸೈಕಲ್, ದೇವನೂರು ಮಹಾದೇವ ಅವರ ಡಾಂಬರ ಬಂದುದು. ರೇಡಿಯೊ, ಅಬಚೂರಿನ ಪೋಸ್ಟ್ ಆಫೀಸು, ಗ್ರಾಂಫೋನ್ ಇವೆಲ್ಲ ನಗರ ಸಂಸ್ಕೃತಿಯ ಸಂಚಲನೆಗೆ ಕಾರಣವಾದವು. ಪಾಶ್ಚಾತ್ಯರ ಶಿಕ್ಷಣ ನೀತಿಯಿಂದ ಅನೇಕ ಸೌಲಭ್ಯಗಳು ತಳವರ್ಗ ಗಳಿಗೆ ದೊರೆತವು. ಸ್ವಾತಂತ್ರ್ಯ ಚಳವಳಿಯ ಪ್ರಭಾವ ಕೂಡ ಒಂದು ಹೊಸ ಬದುಕಿಗೆ ಕಾರಣವಾಯಿತು. ತಳವರ್ಗದ ಸಮುದಾಯಕ್ಕೆ ಫುಲೆ,



**ಪ್ರೊ. ಎಚ್.ಟಿ. ಪೋತೆಯವರು ಸಂಪಾದಿಸಿರುವ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಕಟಿಸಿರುವ ವಿಚಾರ ಸಾಹಿತ್ಯ ಪುಸ್ತಕ ನಲವತ್ಮೂರು ವೈಚಾರಿಕ ಲೇಖನಗಳನ್ನು ಒಳಗೊಂಡಿದೆ. ಈ ಲೇಖನಗಳ ವಸ್ತು ವೈವಿದ್ಯ ಎಷ್ಟು ವಿಶಾಲವಾಗಿದೆಯೋ ವೈಚಾರಿಕತೆಯೂ ಅಷ್ಟೇ ಹರಿತವಾಗಿದೆ ಎನ್ನುತ್ತಾರೆ ಪ್ರೊ. ಪೋತೆಯವರು.**

ಪೆರಿಯಾರ್, ಅಂಬೇಡ್ಕರ್ ಅವರ ಹೋರಾಟದ ಫಲದಿಂದ ಬುದ್ಧ, ಬಸವ, ಅಲ್ಲಮ ಎಲ್ಲರೂ ಅರಿವಿಗೆ ಬಂದರು. ಗ್ರಾಮ ಸ್ವರಾಜ್ಯದ ಕಲ್ಪನೆಯಲ್ಲಿ ಹಳ್ಳಿಗಳ ಮೂಲಕ ಭಾರತ ವನ್ನು ಹೊಸ ಜಗತ್ತಿನಲ್ಲಿ ನಿರ್ಮಾಣ ಮಾಡುವುದು ನಡೆಯಿತು. ಮೀಸಲಾತಿ ಕಲ್ಪನೆ ಕಾರ್ಯಗತಗೊಂಡು ಇಲ್ಲಿಯವರೆಗೆ ದಲಿತರಿಗೆ, ಶೂದ್ರರಿಗೆ, ಮಹಿಳೆಯರಿಗೆ ದಕ್ಕದೇ ಇದ್ದುದನ್ನು ದಕ್ಕಿಸಿಕೊಳ್ಳುವ ಪ್ರಯತ್ನ ಜೀವ ಪಡೆದುಕೊಂಡಿತು. ಗಾಂಧಿ, ಅಂಬೇಡ್ಕರ್ ತತ್ವಗಳು ಪ್ರಚಲಿತವಾದವು.

ಎಪ್ಪತ್ತರ ದಶಕದಲ್ಲಿ ಮಹಿಳಾ ಚಳವಳಿ, ದಲಿತ ಚಳವಳಿ, ಬಂಡಾಯ ಚಳವಳಿ ಕಾರ್ಮಿಕ ಚಳವಳಿಗಳು ಒಟ್ಟಿಗೆ ತಮ್ಮ ಹಕ್ಕಿಗಾಗಿ ಹೋರಾಟಕ್ಕಿಳಿದವು. ಆ ಸಂದರ್ಭದ ಸಾಹಿತ್ಯ ಮುಖ್ಯವಾಗಿ ಪ್ರಸ್ತಾಪ ಮಾಡಿದ್ದು ಶಿಕ್ಷಣದ ಮೂಲಕವೇ ಕ್ರಾಂತಿ ಸಾಧ್ಯ, ಕಲಿಯಬೇಕು ಕಲಿಯುವುದರ ಮೂಲಕ ಪರಿವರ್ತನೆ ಕಂಡು ಕೊಳ್ಳಬೇಕು ಎನ್ನುವುದು ಪ್ರಮುಖವಾಯಿತು. ಮುಢನಂಬಿಕೆ ಹಾಗೂ ಸ್ಥಗಿತ ಮೌಲ್ಯಗಳ ನಿರಾಕರಣೆ ಮಾಡುವ ಬಹುಮುಖ್ಯವಾದ ಚಿಂತನೆ ಪ್ರಧಾನವಾಯಿತು. ಕ್ರಮೇಣ ಸಾಹಿತ್ಯ, ರಾಜಕೀಯ, ಶೈಕ್ಷಣಿಕ ಹೋರಾಟಗಳು ಇವು ಬೇರೆ ಬೇರೆಯಾಗಿ ಕಾಣಿಸಲಿಲ್ಲ. ಈ ಎಲ್ಲ ಚಿಂತನಧಾರೆಗಳು ಹೊಸದೊಂದು ಸಮಾಜೋ ಸಾಂಸ್ಕೃತಿಕ ಹಾಗೂ ಧಾರ್ಮಿಕ ನೆಲೆಗಳಿಗೆ ಕಾರಣವಾದವು. ಇತ್ತೀಚಿನ ಆಧುನಿಕ ಮಾಧ್ಯಮಗಳು ಬಂದ ಮೇಲೆ ಮನೆಯಲ್ಲಿಯೇ ಜಗತ್ತಿನ ವಿದ್ಯಮಾನ ನೋಡಲು ದೊರೆಯುವಂತಾಯಿತು. ವಸಾಹತು ಕರಣದ ವಿಸ್ತೃತ ರೂಪವೇ ಜಾಗತೀಕರಣವೆನ್ನುವುದು ನಾವೆಲ್ಲ ಬಲ್ಲೆವು. ನಮಗರಿವಿಲ್ಲದೆ ಆಧುನಿಕ ಮಾಧ್ಯಮಗಳ ಮೂಲಕ ಖಾಸಗೀಕರಣ, ಉದಾರೀಕರಣ ಹಾಗೂ ಜಾಗತೀಕರಣವನ್ನು ನಾವು ಒಪ್ಪಿಕೊಂಡು ಬಿಟ್ಟಿದ್ದೇವೆ. ಹೊರ ದೇಶದ ಸಂಸ್ಕೃತಿ ಅಪ್ಪಿಕೊಂಡಿರುವುದು ದಿಟವಾದರೂ, ಅದನ್ನು ಒಪ್ಪಿಕೊಳ್ಳುತ್ತಲೇ ವಿರೋಧಿಸುತ್ತಿದ್ದೇವೆ. ನಮ್ಮಲ್ಲಿರುವ ಮೊಬೈಲ್ ಮೂಲಕ ಸಂವಹನ ಮಾಡುತ್ತಲೇ ಪರ್ಯಾಯ ಸಂಸ್ಕೃತಿ ಕುರಿತು ಮಾತನಾಡುವ ನಾವು ಜಾಗತೀಕರಣದ ಲಾಭಗಳನ್ನು ಬಳಸಿಕೊಳ್ಳುವುದನ್ನು ಬಿಟ್ಟಿಲ್ಲ. ಇಂತಹ ಸಂದರ್ಭಗಳಲ್ಲಿ ಮನುಷ್ಯನಿಗೆ ವೈಚಾರಿಕತೆ ಬಹಳ ಮುಖ್ಯವಾಗುತ್ತದೆ. ಜಾಗತೀಕರಣದಿಂದಾಗಿ ತಳಸಂಸ್ಕೃತಿ ಗಳಿಗೆ ಒಂದಷ್ಟು ಲಾಭವೇ ಆಗಿದೆ. ಆದರೆ ಬೆಂಕಿ ಹಾರಿದರೂ ಬೂದಿಯ ಕಾವು ಹಾರಿಲ್ಲವೆನ್ನುವಂತೆ ಅಸ್ಪೃಶ್ಯತಾ ಸಮಸ್ಯೆಗಳು ಹಾಗೆಯೇ ಉಳಿದುಕೊಂಡಿವೆ. ಸಮಾಜದಲ್ಲಿ ಅಪರಾಧಗಳು ಹೆಚ್ಚುತ್ತಲಿವೆ. ದಲಿತರ ಮೇಲಿನ ದೌರ್ಜನ್ಯಗಳು, ಕಡಿಮೆಯಾಗಿಲ್ಲ. ಪ್ರಪಂಚದಲ್ಲಿ ಮಾನವೀಯತೆ ಇಲ್ಲವೇನೋ ಅನ್ನುವಂತೆ ಬಿಂಬಿಸುತ್ತವೆ. ನಮ್ಮ ರಾಜಕೀಯ ಪರಿಸ್ಥಿತಿ ಅದಕ್ಕೆ ಪೂರಕವಾಗಿ ಶಿಕ್ಷಣ ಕ್ಷೇತ್ರದಲ್ಲಿ ಕೇಸರಿಕರಣ, ಕೋಮು ವಾದದ ಛಾಯೆ ಆವರಿಸುತ್ತಿದೆ. ಪ್ರತಿಗಾಮಿ ಶಕ್ತಿಗಳು ವೃದ್ಧಿಸುವುದಕ್ಕೆ ವಾತಾವರಣ ನಿರ್ಮಾಣವಾಗಿದೆ. ಅಶೋಕನಂತಹ ರಾಜರು ಹಿಂಸೆ ನೆಲೆಯನ್ನು ತೊರೆದುದು, ಅಹಿಂಸೆಯ ನೆಲೆಯಿಂದ ಸಮಾಜೋದ್ಧಾರ ಮಾಡಿದ ಬುದ್ಧ-ಬಸವರ ದಾರಿಯನ್ನು ತುಳಿದರು.

ಇವತ್ತು ಹುಟ್ಟಿಕೊಳ್ಳುವ ಸಾಹಿತ್ಯ ಕೂಡ ಈ ವೈರುಧ್ಯಗಳನ್ನು, ಸಮಸ್ಯೆಗಳನ್ನು ಅಭಿವ್ಯಕ್ತಿಸುತ್ತಿದೆ. ರಾಜಕೀಯದಲ್ಲಿ ಗುಂಪುಗಾರಿಕೆಗಳು ಇರುವಹಾಗೆ ಸಾಹಿತ್ಯ ಸಂಸ್ಕೃತಿ ಕ್ಷೇತ್ರದಲ್ಲೂ ಗುಂಪುಗಾರಿಕೆಗಳಿವೆ. ನಾಡು-ನುಡಿ-ಭಾಷೆ ಇತ್ಯಾದಿಗಳ ಕುರಿತ ಚರ್ಚೆಯ ಸಂದರ್ಭದಲ್ಲಿ ಸಾಕಷ್ಟು ಭಿನ್ನಾಭಿಪ್ರಾಯಗಳು ಕಾಣುತ್ತೇವೆ. ಸಮಸ್ಯೆಗಳನ್ನು ನಿವಾರಣೆ ಮಾಡಬೇಕಾದವರೇ ಸಮಸ್ಯೆಗಳನ್ನು ಸೃಷ್ಟಿಸುತ್ತಿದ್ದಾರೆ. ಪ್ರಜಾ ಪ್ರಭುತ್ವವಿದ್ದರೂ ಅದು ಇಲ್ಲದ ರೀತಿಯಲ್ಲಿ ಬದುಕು ಸಾಗುತ್ತಿದೆ. ಜನಪರವಾದಂತಹ ಚಳವಳಿಗಳು ಇಲ್ಲವಾಗಿವೆ. ಅದರ ಬದಲಾಗಿ ಸಂಕುಚಿತ ಭಾವನೆಗಳು ಪುಟಿದೇಳಲು ಕಾರಣವಾಗಿವೆ. ಇಂತಹ ಸಂದರ್ಭದಲ್ಲಿ ವೈಚಾರಿಕ ಚಿಂತನೆ ತುಂಬ ಪ್ರಖರವಾಗಬೇಕಾಗಿದೆ. ಧರ್ಮದ ಹೆಸರಿನಲ್ಲಿ ಕೋಮುವಾದ, ಭಯೋತ್ಪಾದನೆಯಂತಹ ಬೀಜವನ್ನು ಬಿತ್ತಿ ವ್ಯವಸಾಯ ಮಾಡುತ್ತಿದ್ದೇವೆ. ಅದನ್ನು ವಿರೋಧಿಸುವ, ನಮ್ಮ ಸಮುದಾಯದಿಂದ ದೂರತಳ್ಳುವ ಸಲುವಾಗಿ ಜಗತ್ತಿನ ಹೊಸ ಚಿಂತನೆಗಳು, ಆಲೋಚನೆಗಳು ಇಂದು ಅಗತ್ಯವಾಗಿವೆ. ವಿಶೇಷವಾಗಿ ಬಸವಾದಿ ಶರಣರ ಪ್ರಗತಿಪರ ವಿಚಾರಗಳು ದಾರಿದೀಪಗಳಂತಿದ್ದು ಅವುಗಳನ್ನು ನಾವು ಬಳಸಿಕೊಳ್ಳುವುದು ಮುಖ್ಯವಾಗಬೇಕು. ಪ್ರೊ. ಎಚ್.ಟಿ. ಪೋತೆಯವರು ಸಂಪಾದಿಸಿರುವ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಕಟಿಸಿರುವ ವಿಚಾರ ಸಾಹಿತ್ಯ ಪುಸ್ತಕ ನಲವತ್ಮೂರು ವೈಚಾರಿಕ ಲೇಖನಗಳನ್ನು ಒಳಗೊಂಡಿದೆ. ಈ ಲೇಖನಗಳ ವಸ್ತು ವೈವಿದ್ಯ ಎಷ್ಟು ವಿಶಾಲವಾಗಿದೆಯೋ ವೈಚಾರಿಕತೆಯೂ ಅಷ್ಟೇ ಹರಿತವಾಗಿದೆ ಎನ್ನುತ್ತಾರೆ ಪ್ರೊ. ಪೋತೆಯವರು.

ಪ್ರೊ. ಪೋತೆಯವರ ಕಂಗಳೊಳಗಣ ಕತ್ತಲೆ ವೈಚಾರಿಕ ಲೇಖನಗಳನ್ನೊಳಗೊಂಡ ಕೃತಿ ಈ ಹೊತ್ತಿಗೆಯಲ್ಲಿ ಹನ್ನೆರಡು ಲೇಖನಗಳನ್ನು ಪೋಣಿಸಿದ್ದಾರೆ. ಲೋಕಮಿತ್ರರ ನಡುವೆ ಡಾ. ಅಂಬೇಡ್ಕರ್, ಛತ್ರಪತಿ ಶಾಹೂ ಮಹಾರಾಜ, ರಮಾಬಾಯಿ ಅಂಬೇಡ್ಕರ್, ಕುವೆಂಪು ಅವರ ವಿಶ್ವಪಥ ಮನುಜ ಮತ, ಕುವೆಂಪು ಚಿಂತನೆಯಲ್ಲಿ ಅಂಬೇಡ್ಕರ್ ವಿಚಾರಧಾರೆ, ದಲಿತ ಬಂಡಾಯದ ಬೆರಗ, ಚೆನ್ನಣ್ಣ ವಾಲೀಕಾರ, ಜನಪದ ಚಳವಳಿಗಳು ಮತ್ತು ಸಬರದ, ಹೋರಾಟದ

ಸಾಗರಕ್ಕೆ ಸಾವಿರಾರು ನದಿಗಳು, ವಿಜಯಪುರ ಜಿಲ್ಲೆಯ ದಲಿತ ಸಾಹಿತ್ಯ, ಕಂಗಳೊಳಗಣ ಕತ್ತಲೆ, ಚಲನಚಿತ್ರಗಳಲ್ಲಿ ಅಂಬೇಡ್ಕರ್ ಸಂವೇದನೆ, ನಿಸಾರರ ಕಾವ್ಯದಲ್ಲಿ ಶರಣ ಸಂಸ್ಕೃತಿ ಹೀಗೆ ವಿಭಿನ್ನ ವಿಷಯ ವಸ್ತುಗಳನ್ನು ಆಯ್ದುಕೊಂಡು ರಚಿಸಿರುವ ವೈಚಾರಿಕ ಕೃತಿ ಇದಾಗಿದೆ.

ಡಾ. ಬಿ.ಆರ್. ಅಂಬೇಡ್ಕರ್ ಎಂದರೆ ಕೇವಲ ಜ್ಞಾನ ಸಂಪತ್ತು ಮಾತ್ರ ಅಲ್ಲ. ವೈಚಾರಿಕತೆಯ ಪರ್ವತ ಅಂಬೇಡ್ಕರ್ ಎಂದರೆ ತಪ್ಪಾಗಲಾರದು ಆಧುನಿಕ ಭಾರತ ನಿರ್ಮಾಣ ಕಾರ್ಯದಲ್ಲಿ ಅವರ ವೈಚಾರಿಕ ಕೊಡುಗೆ ಅಪಾರವಾದುದು ಎಂಬುದನ್ನು ಪ್ರೊ. ಪೋತೆಯವರು ನಿರೂಪಿಸುತ್ತಾರೆ. ಛತ್ರಪತಿ ಶಾಹೂ ಮಹಾರಾಜರು ಕೇವಲ ಅರಸನಾಗಿರದೆ. ಸಾಮಾನ್ಯ ಪ್ರಜೆಯಂತೆ ಜೀವನ ಸಾಗಿಸಿ ಸಾಮಾನ್ಯರ ಬದುಕನ್ನು ಅಸಾಮಾನ್ಯವಾಗಿ ರೂಪಿಸುವಲ್ಲಿ ಅವರ ವಿಚಾರ ಕ್ರಾಂತಿ ಬಹುದೊಡ್ಡ ಕೆಲಸ ಮಾಡಿದೆ. ಶಿಕ್ಷಣದ ಮೂಲಕ ವೈದಿಕ ಸಂಪ್ರದಾಯವನ್ನು ವಿರೋಧಿಸಿ ವೈಚಾರಿಕ ಕ್ರಾಂತಿ ಹುಟ್ಟು ಹಾಕಿದವರು ಶಾಹೂ ಮಹಾರಾಜರು. ರಮಾಯಿ ಅಂದರೆ ಡಾ. ಬಾಬಾಸಾಹೇಬರ ಧರ್ಮಪತ್ನಿ ಈ ದೇಶದ ಮಹಾಮಾತೆ ಎಂದರೆ ತಪ್ಪಾಗಲಾರದು. ತಾನು ಓದದೇ ಇದ್ದರೂ ಓದಿದವರಿಗಿಂತಲೂ ಹೆಚ್ಚಿನ ವಿಚಾರ ಹೊಂದಿದ ಈ ತಾಯಿ ಬಾಬಾಸಾಹೇಬರ ಸಾಧನೆಯ ಮೆಟ್ಟಿಲಾಗಿ ನಿಂತವಳು ಕುವೆಂಪು ಅವರ ವೈಚಾರಿಕತೆ ಕನ್ನಡ ಸಾಹಿತ್ಯದ ದಿಕ್ಕನ್ನೇ ಬದಲಿಸಿತು. ಮೂಢನಂಬಿಕೆ ದೇವರು, ಧರ್ಮ, ಜಾತಿ, ಮತ, ಪಂಥ ಎಲ್ಲವನ್ನು ತಮ್ಮ ವಿಚಾರಗಳಿಂದ ಸ್ಪಷ್ಟಪಡಿಸಿದವರು, ಹೊಸಮನ್ವಂತರಕ್ಕೆ ನಾಂದಿ ಹಾಡಿದವರು.

ಚೆನ್ನಣ್ಣ ವಾಲೀಕಾರ ಬಂಡಾಯ ಸಾಹಿತಿ ಅಪ್ಪಟ ಅಂಬೇಡ್ಕರವಾದಿ, ತಮ್ಮ ವಿಚಾರಗಳಿಂದ ದಲಿತ ಬಂಡಾಯವನ್ನು ಚುರುಕುಗೊಳಿಸಿ, ದಲಿತರ ಬದುಕಿಗೆ ಆಸರೆಯಾಗಿ ನಿಂತ ಧಿಮಂತ ವ್ಯಕ್ತಿ. ಸಬರದ ಕೂಡಾ ಬಂಡಾಯದ ಬಲಿಷ್ಠ ಲೇಖಕ, ಹೋರಾಟಗಾರ, ಶೋಷಣೆ, ಅನ್ಯಾಯದ ವಿರುದ್ಧ ಸಿಡಿದೇಳುವ ಪ್ರವೃತ್ತಿ ಸಬರದ ಅವರದು. ಹೋರಾಟದ ಸಾಗರಕ್ಕೆ ಸಾವಿರಾರು ನದಿಗಳು ಎಂದು ಕರೆದುಕೊಂಡ ಸಿದ್ಧಲಿಂಗಯ್ಯ ನವರ ವೈಚಾರಿಕತೆ, ಕರ್ನಾಟಕದ ದಲಿತ ಜನರಿಗೆ ದೊಡ್ಡ ಶಕ್ತಿ ತಂದು ಕೊಟ್ಟವರು. ನಿಸಾರ ಅಹಮ್ಮದ ಅವರು ಮುಸ್ಲಿಂ ಕವಿ. ಆದರೆ ಮಾನವ ಪ್ರೇಮಿ ಎಲ್ಲಿಯೂ ಧರ್ಮದ ನೇಣಿಗೆ ಜೋತು ಬಿದ್ದವರಲ್ಲ. ಅವರ ವಿಚಾರಗಳು ಮುಸ್ಲಿಂರನ್ನು ಪ್ರಗತಿಶೀಲರನ್ನಾಗಿಸಿವೆ. ಹೀಗೆ ಕಂಗಳೊಳಗಣ ಕತ್ತಲೆ ಕೃತಿಯು ವಿಶಿಷ್ಟವಾದ ವಸ್ತುಗಳನ್ನು ಪ್ರತಿಪಾದಿಸುತ್ತದೆ. ಪೋತೆಯವರ ಈ ವಿಚಾರ ಕ್ರಾಂತಿ ಕರ್ನಾಟಕದ ಪ್ರಮುಖ ಲೇಖಕರ ಸಾಲಿನಲ್ಲಿ ಕೂಡಿಸಿದೆ ಅವರ ವೈಚಾರಿಕತೆ ಪ್ರಖರ ಮತ್ತು ನಿಖರವಾದುದು.

ಪೋತೆಯವರ ಇನ್ನೊಂದು ಪ್ರಮುಖ ವೈಚಾರಿಕ ಕೃತಿಯೆಂದರೆ ಸಾಹಿತ್ಯ ಮತ್ತು ಸಮಾಜ, ಸಾಹಿತ್ಯದಲ್ಲಿನ ವಿಚಾರಗಳು ಸಮಾಜಕ್ಕೆ ಪೂರಕವಾದವುಗಳು, ಸಾಮಾಜದಲ್ಲಿನ ವಿಚಾರಗಳು ಸಾಹಿತ್ಯಕ್ಕೆ ಪ್ರೇರಕವಾದವುಗಳು. ಸಾಹಿತ್ಯ ಬಿಟ್ಟು ಸಮಾಜ ಇರದು; ಸಮಾಜ ಇಲ್ಲದೆ ಸಾಹಿತ್ಯ ಬರದು. ಒಂದಕ್ಕೊಂದು ಅವಿನಾಭಾವ ಸಂಬಂಧ ಹೊಂದಿವೆ. ಇದನ್ನು ಪೋತೆಯವರು ಸೂಕ್ಷ್ಮವಾಗಿ ವಿಶ್ಲೇಷಿಸಿದ್ದಾರೆ. ಈ ಕೃತಿಯಲ್ಲಿ ದೇವನೂರರ ದಲಿತ ಪ್ರಜ್ಞೆ ಮತ್ತು ಕುವೆಂಪು ಚಿಂತನೆಯಲ್ಲಿ ಅಂಬೇಡ್ಕರ್ ಲೇಖನಗಳು ಮಹತ್ವವಾದವುಗಳು, ಶೋಷಿತರ, ದೀನದಲಿತರ, ಅಸಾಹಯಕರ ಕುರಿತು, ಅಂಬೇಡ್ಕರ್–ಕುವೆಂಪು ದೇವನೂರರ ವಿಚಾರಗಳು ಪ್ರಸ್ತುತವಾದವುಗಳು ಎಂಬುದನ್ನು ಪೋತೆಯವರು ವಿಶ್ಲೇಷಿಸುತ್ತಾರೆ. ಜಾಗತೀಕರಣ ಮತ್ತು ಸಾಂಸ್ಕೃತಿಕ ತಲ್ಲಣಗಳು, ನಂಬುಗೆ, ಮೂಢ ನಂಬುಗೆ, ದೇವರು–ಧರ್ಮ, ಅಸ್ಪೃಶ್ಯತೆ ಇವೆಲ್ಲ ಪೋತೆಯವರ ವಿಚಾರ ಲಹರಿಯಲ್ಲಿ ಮಹತ್ವ ಪಡೆದುಕೊಳ್ಳುತ್ತವೆ. ಪೋತೆಯವರ ವೈಚಾರಿಕ ನಿಲುವೇ ಅಂತಹದ್ದು, ಪ್ರತಿಯೊಂದರಲ್ಲೂ ಹೊಸತನ ಕಾಣುವ ಪೋತೆಯವರ ಬರಹಗಳಲ್ಲಿ ವೈಚಾರಿಕತೆ ತುಂಬಿ ತುಳುಕುತ್ತದೆ. ಮನುಷ್ಯ ಜೀವನ ಉನ್ನತೀಕರಣಕ್ಕೆ, ಪ್ರತಿಯೊಬ್ಬ ವ್ಯಕ್ತಿಯೂ ಸ್ವಾಭಿಮಾನದಿಂದ ಬದುಕಲಿಕ್ಕೆ ಅಂಬೇಡ್ಕರ್ ಚಿಂತನೆ ಬಹಳ ಮುಖ್ಯವಾದುದು ಎಂಬುದನ್ನು ಪೋತೆಯವರು ತಮ್ಮ ವೈಚಾರಿಕ ನಿಲುವುಗಳ ಮೂಲಕ ಸ್ಪಷ್ಟಪಡಿಸುತ್ತಾರೆ.








ಕೆಲವರು ಮಾತಾಡ್ತಾರ ಬರ್‍ಯಾಂಗಿಲ್ಲ. ಇನ್ನು ಕೆಲವರು ಬರಿತಾರ ಮಾತಾಡಾಂಗಿಲ್ಲ. ಆದರ ನಿನಗ ಬರೆಯುದಕ್ಕೂ ಬರ್‍ತದ ಮಾತಾಡಕೂ ಬರ್‍ತದ ಅದಕ್ಕ ಎಲ್ಲರನ್ನು ತೆಗೆದುಕೊಂಡು ಹೋಗಬೇಕು.

**ಡಾ.ಮಲ್ಲಿಕಾರ್ಜುನ ಖರ್ಗೆಜೀ**
ಮುತ್ಸದ್ದಿ ರಾಜಕಾರಣಿ.



ಡಾ. ಮುದೇನೂರು ನಿಂಗಪ್ಪ ಅವರು ಮಾಡಿದ 'ಪ್ರಜಾವಾಣಿ' ಸಂದರ್ಶನ ಓದಿದೆ. ನಿಮ್ಮ ವಿಚಾರಗಳು ತುಂಬ ಆಪ್ತವೆನಿಸಿದವು. ಏಕ ಮಾದರಿಯ ಚಿಂತನೆ ಕುರಿತಾದ ಅಭಿಪ್ರಾಯ ಅಮೂಲ್ಯವಾದುದು. ಸಮಕಾಲೀನ ಕನ್ನಡ ಸಾಹಿತ್ಯದ ಲೇಖಕರಲ್ಲಿ ನೀವು ಅಗ್ರಗಣ್ಯರು. ಜಾನಪದ ಮೂಲಸತ್ವ ಹೊಂದಿರುವುದರಿಂದ ಕಥೆ, ಕಾದಂಬರಿ, ಪ್ರಬಂಧ ಹಾಗೂ ವೈಚಾರಿಕತೆಯಿಂದ ಬರೆಯುವ ನಮ್ಮ ನಡುವಿನ ಅಪರೂಪದ ಚಿಂತಕರಷ್ಟೇ ಅಲ್ಲ ನೊಂದವರಿಗೆ ದನಿಯಾದವರು. ನಿಮ್ಮ ಆತ್ಮೀಯ ನುಡಿಗಳಿಗೆ ಶರಣು.

**ಅಂಗಾರೆಡ್ಡಿ ಶೇರಿ**
ಹಿರಿಯ ಲೇಖಕರು, ಸೇಡಂ



ಪ್ರೊ. ಎಚ್.ಟಿ. ಪೋತೆ ಬಹುಮುಖ ಪ್ರತಿಭೆಯ ಲೇಖಕ, ವಿದ್ವಾಂಸ ಚಿಂತಕ ಮತ್ತು ಉತ್ತಮ ಕಥನಕಾರ. ಇವರು ನಿತ್ಯನಿರಂತರ ಕಥನಕರ್ಮಿ ಅವರ ಪ್ರತಿಭೆಯ ಬೇರು, ದೇಸಿನೆಲೆಯಲ್ಲಿ ಹೊಕ್ಕು, ಸಮಕಾಲೀನ ಪ್ರಪಂಚದ ಸಮಸ್ತದೆಡೆಗೂ ರೆಂಬೆಕೊಂಬೆಗಳಿಂದ ಚಾಚಿರುವಂಥದ್ದು. ಇವರು ಈವರೆಗೂ ಬಾಬಾಸಾಹೇಬರನ್ನು ಮುಖ್ಯ ಪ್ರತಿಮೆಯಾಗಿಟ್ಟುಕೊಂಡು ಹಲವು ಬಗೆಯ ವಿದ್ವತ್ ಕೃತಿಗಳನ್ನು ರಚಿಸಿದ್ದಾರೆ. ಇದರೊಂದಿಗೆ ಕಥೆ, ನಾಟಕಗಳಲ್ಲಿ ತಮ್ಮ ಪ್ರತಿಭೆಯನ್ನು ಒರೆಗೆಹಚ್ಚಿಕೊಂಡು ಇದೀಗ ಬಯೋಪಿಕ್ ಕಾದಂಬರಿ'ಯೊಂದನ್ನು ಕೊಡುವುದರ ಮೂಲಕ ತಮ್ಮ ಸೃಜನಶೀಲ ಪ್ರತಿಭೆಯನ್ನು ಅನಾವರಣಗೊಳಿಸಿದ್ದಾರೆ. ಅವರು ಆಯ್ದುಕೊಂಡ ಯಾವುದೇ ಪ್ರಕಾರವಿರಲಿ; ಅಲ್ಲಿ ಅಪಾರ ಸಂಯಮವುಂಟು, ನಿರುಮ್ಮಳತೆಯುಂಟು ಮತ್ತು ಪ್ರಯೋಗಶೀಲತೆಯೂ ಉಂಟು. ಕಳೆದ ಒಂದು ದಶಕದಿಂದ ಪೋತೆ ನಿರಂತರವಾಗಿ ವೈಚಾರಿಕತೆಯ ಪರಿಷ್ಕಾರದಲ್ಲಿ ತಮ್ಮನ್ನು ತಾವೇ ನೋಡಿಕೊಂಡಿದ್ದಾರೆ.

ಭಾರತದ ವೈಚಾರಿಕ ನೆಲೆಯ ಪರಿಧಿಯ ವಿಸ್ತಾರತೆ ಕಂಡಿರುವ ಪೋತೆ, ಕರ್ನಾಟಕದ ವೈಚಾರಿ ಕತೆಯ ವಿಸ್ತಾರತೆಯನ್ನೂ ತಮ್ಮ ಸೃಜನ-ಸೃಜನೇತರ ಕೃತಿಗಳಲ್ಲಿ ಕಂಡರಿಸುತ್ತಿದ್ದಾರೆ. ಪೋತೆ ಬರವಣಿಗೆಯ ಸಾತತ್ಯ, ಜೀವನಬದ್ಧತೆ, ತಾವೇ ಕಂಡುಕೊಳ್ಳುತ್ತಿರುವ ವೈಚಾರಿಕ ಸಾಮಾಗ್ರಿಗಳು, ಹೊರಗಿನ ಒತ್ತಡಕ್ಕೆ ಬಾಗದೆ, ಅಂತರಂಗದ ತುಡಿತ ತಹತಹಿಕೆ ಮತ್ತು ನಿಡುಗಾಲದ ಅವಲೋಕನದಿಂದ ಹುಟ್ಟಿದವುಗಳಾಗಿವೆ. ಇದು ನನಗೆ ಮಹತ್ವದ್ದಾಗಿ ಕಾಣುತ್ತಿದೆ. ಇವರ ಬರೆಹದಲ್ಲಿ ಮಹತ್ವಾಕಾಂಕ್ಷೆಯೂ ಉಂಟು; ಅನಂತರ ಫಲಶ್ರುತಿಯ ಬಗೆಗೆ ಅಸೀಮ ನಿರ್ಲಿಪ್ತತೆಯೂ ಉಂಟು! ಈ ಸಂಗತಿಗಳು ಪೋತೆ ಬರೆಹದ ಗಟ್ಟಿತನಕ್ಕೆ ಸಾಕ್ಷಿಯಾಗಿವೆ.

**ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ**
ವಿಶ್ರಾಂತ ಕುಲಪತಿಗಳು
ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಬೆಂಗಳೂರು



ಪ್ರೊ. ಎಚ್.ಟಿ. ಪೋತೆ ಈಗಷ್ಟೇ ನಿಮ್ಮ ಕಥಾ ಸಂಕಲನ ಕೈಸೇರಿತು. ತಕ್ಷಣದಿಂದ ಓದಲು ಪ್ರಾರಂಭಿಸಿದೆ. ಮೂರು ನಾಲ್ಕು ಕಥೆಗಳನ್ನು ಎಡೆಬಿಡದೆ ಓದಿದ್ದು ಇದೇ ಮೊದಲು. *'You are a Prolific Writer'*

**ಡಾ. ಮೂಡ್ನಾಕೂಡು ಚಿನ್ನಸ್ವಾಮಿ**
ಹಿರಿಯ ಸಾಹಿತಿಗಳು, ಬೆಂಗಳೂರು.



ಪ್ರೊ. ಎಚ್.ಟಿ. ಪೋತೆಯವರು ಕನ್ನಡದ ಸಮಕಾಲೀನ ಬರಹಗಾರರಲ್ಲಿ ಅಂಬೇಡ್ಕರ್ ಚಿಂತನೆಯನ್ನು ತಮ್ಮ ಸೃಜನ, ಸೃಜನೇತರ ಬರೆಹಗಳ ಮೂಲಕ ಬಹುತ್ವದ ಚಿಂತನೆಗೆ ಜೀವ ತುಂಬುತ್ತಿರುವ ವಿಶಿಷ್ಟ ಲೇಖಕರಾಗಿದ್ದಾರೆ.

**ಪ್ರೊ. ಕೆ.ಈ. ರಾಧಾಕೃಷ್ಣ**
ಶಿಕ್ಷಣ ತಜ್ಞರು, ಸಾಹಿತಿಗಳು.



'ಚಮ್ಮಾವುಗೆ'ಯ ಕಥೆಗಳನ್ನು ಓದಿದಾಗ ದೇವನೂರರ ಕಥೆಗಳು ಎಲ್ಲಿ ನಿಲ್ಲುತ್ತವೆಯೋ ಅಲ್ಲಿಂದ ಪೋತೆಯವರ ಕಥೆಗಳು ಆರಂಭವಾಗುವುದು ಗೋಚರವಾಗುತ್ತದೆ.

**ಪ್ರೊ. ಬಿ.ಎಂ. ಪುಟ್ಟಯ್ಯ**
ವಿಮರ್ಶಕ, ಸಾಹಿತಿಗಳು.













